
ರಂಜನೆ ಬೋಧನೆ ಪ್ರಚೋದನೆ

ಗೌರಿ ಲಂಕೇಶ್


ಮಾರ್ಚ್ 05, 2014 ಪುಟ 20 ರೂ. 15/-

ವಿಮರ್ಶೆ
ಮನುಷ್ಯ ಜಾತಿ ತಾನೊಂದೇ ವಲಂ


ಕನಕಪುರ




ಡಿಕೆ ರಿಪಬ್ಲಿಕ್



ಬೀದಿಗೆ ಬಿದ್ದ
ಬ್ರಾಹ್ಮಣರ ಕಾಳಗ





ಫೀನಿಕ್ಸ್ ಆಗುತ್ತಾರಾ ಗೌಡರು?




ಕೆಪಿಸಿಸಿ ಹಗರಣ
ಬಡಪ್ರತಿಭೆಗಳಿಗೆ ಅನ್ಯಾಯವಾಗದಿರಲಿ

ಉತ್ತರ ಕನ್ನಡ
ಚೆಡ್ಡಿ ನಾಯ್ಕನಿಂದ ಯಾರಿಗೆ ಲಾಭ?



ಸರ್ಕಾರವೆಂಬ ಗುತ್ತಿಗೆದಾರನೂ, ರಾಯಚೂರಿನ ನರ್ಸಮ್ಮನೂ



'ಸೆರ್, ನಮ್ಗೆ ಇನ್ನೇನೂ ಬ್ಯಾಡ್ರಿ. ಇಲ್ಲಿ ರಾತ್ರೇನೂ ಚಳವಳಿ ಮಾಡೋಕೆ ಪೊಲೀಸ್ರಿಂದ ಅನುಮತಿ ಕೊಡುಸ್ರಿ. ಈ ಸಾರಿಯಂತೂ ನಾವು ನಮ್ಮ ಬೇಡಿಕೆ ಈಡೇರ್ದೆ ವಾಪ್ಸು ಹೋಗಲ್ರಿ. 24 ತಾಸೂ ಪಿಎಚ್‌ಸೀಲಿ ಕೆಲ್ಸ ಮಾಡೋ ಅನುಭವ ಐತಿ. ಇಲ್ಲಿ ರಾತ್ರೆ ಕಳ್ಯೋದು ನಮ್ಗೇನೂ ಕಷ್ಟವಿಲ್ಲ'. ರಾಯಚೂರು ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರವೊಂದರಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಶುಶ್ರೂಷಕಿ ತಮ್ಮ ಸಮಸ್ಯೆಯನ್ನು ಎಳೆಎಳೆಯಾಗಿ ನಮ್ಮ ಮುಂದೆ ಹರಡಿದರು. ಡಾಕ್ಟರೂ ಇಲ್ಲದಾಗ ನರ್ಸ್‌ಗಳು ಆಸ್ಪತ್ರೆಯನ್ನು ಹೇಗೆ ನಿರ್ವಹಣೆ ಮಾಡುತ್ತೇವೆ, ಜನಸಾಮಾನ್ಯರು ತಮ್ಮ ನೋವಿನ ಸಂದರ್ಭದಲ್ಲಿ ನಮಗೆ ಕೊಡುವ ಎಲ್ಲಾ ತೊಂದರೆಗಳನ್ನು ಹೇಗೆ ನಿಭಾಯಿಸುತ್ತೇವೆ, ನಿಜವಾದ ಅರ್ಥದಲ್ಲಿ ಸೇವೆಯನ್ನು ಈ ದಾದಿಯರು ಹೇಗೆ ನೀಡುತ್ತಿದ್ದೇವೆ ಎಂಬ ನೂರಾರು ಕಥೆಗಳನ್ನು ಅವರ ಜೊತೆಯಲ್ಲಿರುವವರು ನಮ್ಮ ಮುಂದಿಡುತ್ತಾರೆ. ಸುಮಾರು 4,000 ಜನರು ಎನ್‌ಆರ್‌ಎಚ್‌ಎಮ್ (ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ) ಅಡಿಯಲ್ಲಿ ನರ್ಸ್‌ಗಳಾಗಿ ನೇಮಕಗೊಂಡು, ಗುತ್ತಿಗೆ ಪದ್ಧತಿಯೆಂಬ ಜೀತಗಾರಿಕೆಯಡಿ ನಲುಗುತ್ತಿದ್ದಾರೆ.

ಅವರೆಲ್ಲರೂ ತಮ್ಮ ಸ್ವಂತ ಖರ್ಚಿನಲ್ಲಿ ಹಾಕಿಸಿಕೊಂಡ ಶಾಮಿಯಾನದ ಕೆಳಗೆ 8 ದಿನಗಳಿಂದ ಕುಳಿತಿದ್ದಾರೆ. ಅವರ ಪಕ್ಕ ಇನ್ನೊಂದು ಶಾಮಿಯಾನದ ಟೆಂಟ್ ಇದೆ. ಅದರಡಿ 800 ಜನ ಆರ್‌ಎನ್‌ಟಿಸಿಪಿ (ಪರಿಷತ್ ರಾಷ್ಟ್ರೀಯ ಕ್ಷಯ ರೋಗ ನಿಯಂತ್ರಣ ಕಾರ್ಯಕ್ರಮ) ಸಿಬ್ಬಂದಿ ಇದ್ದಾರೆ. ಅವರ ಕಥೆಯು ಇದಕ್ಕಿಂತ ಬಹಳ ಭಿನ್ನವಾಗಿಲ್ಲ. ಒಂದೇ ವ್ಯತ್ಯಾಸವೆಂದರೆ, ಇವರಿಗೆ ಎಷ್ಟು ವೇತನ ನೀಡಬೇಕೆಂಬ ಕುರಿತು ಕೇಂದ್ರ ಸರ್ಕಾರ ನೀಡಿರುವ ಸೂಚನೆಯನ್ನೂ ರಾಜ್ಯ ಎನ್‌ಆರ್‌ಎಚ್‌ಎಮ್ ಅಧಿಕಾರಿಗಳು ಪಾಲಿಸಲು ಸಿದ್ಧರಿಲ್ಲ.

ಪ್ರತೀ ವಿಧಾನಸಭಾ ಅಧಿವೇಶನದ ಸಂದರ್ಭದಲ್ಲೂ ಸ್ವಾತಂತ್ರ್ಯ ಉದ್ಯಾನವೆಂದು ಕರೆಯಲಾಗುತ್ತಿರುವ ಹಳೆಯ ಸೆಂಟ್ರಲ್ ಜೈಲ್ ಆವರಣದಲ್ಲಿ ಇದೇರೀತಿ ಸರ್ಕಾರೀ ಇಲಾಖೆಗಳ ಗುತ್ತಿಗೆ ನೌಕರರು ಬಂದು ಪ್ರತಿಭಟನೆ ಮಾಡುತ್ತಾರೆ. ಗುತ್ತಿಗೆ, ದಿನಗೂಲಿ, ಸ್ಟೈಪೆಂಡರಿ, ಗೌರವಧನ, ಹಂಗಾಮಿ ಇತ್ಯಾದಿ ಹೆಸರಿನಲ್ಲಿ, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅಭದ್ರ ನೌಕರರು ಕೆಲಸ ಮಾಡುತ್ತಿದ್ದಾರೆ. ಒಂದು ಅಂದಾಜಿನ ಪ್ರಕಾರ ಅವರ ಸಂಖ್ಯೆ ಸುಮಾರು ಒಂದೂ ಮುಕ್ಕಾಲು ಲಕ್ಷ. ಎಲ್ಲರ ಬೇಡಿಕೆ ಒಂದೇ: 'ನಮ್ಮನ್ನು ಕಾಯಂ ಮಾಡಿಕೊಳ್ಳಿ.' ಸರ್ಕಾರದ್ದು ಒಂದೇ ಉತ್ತರ: 'ಸಾಧ್ಯವಿಲ್ಲ. 2006ರಲ್ಲಿ ಸುಪ್ರೀಂಕೋರ್ಟ್ ಉಮಾದೇವಿ ವರ್ಸಸ್ ಕರ್ನಾಟಕ ಸರ್ಕಾರ ಮೊಕದ್ದಮೆಯಲ್ಲಿ ಹೊರಡಿಸಿದ ಆದೇಶದ ಪ್ರಕಾರ ಗುತ್ತಿಗೆ ನೌಕರರನ್ನು ಕಾಯಂ ಮಾಡಿಕೊಳ್ಳುವ ಹಾಗಿಲ್ಲ'.

'ಹಾಗಾದರೆ ನಮಗೆ ಸಮಾನ ಕೆಲಸಕ್ಕೆ ಸಮಾನ ವೇತನ ತತ್ವದಡಿಯಲ್ಲಿ ನಮಗೆ ಹಾಲಿ ಸರ್ಕಾರೀ ನೌಕರರಿಗೆ ಕೊಡುವಷ್ಟೇ ವೇತನ ಕೊಡಿ'.

'ಸಾಧ್ಯವೇ ಇಲ್ಲ, ನಮ್ಮ ಹತ್ತಿರ ಅಷ್ಟು ದುಡ್ಡಿಲ್ಲ. ಅದಕ್ಕಿಂತ ಮುಖ್ಯವಾಗಿ ನೀವು ನೇಮಕಗೊಂಡಿರುವುದೇ ಕೇಂದ್ರ ಸರ್ಕಾರ ನಿರ್ದಿಷ್ಟ ಯೋಜನೆಯಡಿ ನಮಗೆ ನೀಡುವ ಅನುದಾನದಡಿ. ಅವರು ಎಷ್ಟು ಕೊಡುತ್ತಾರೋ, ಅಷ್ಟನ್ನೇ ನಿಮಗೆ ಕೊಡುತ್ತೇವೆ ಅಷ್ಟೇ'.

'ಹಾಗನ್ನಬೇಡಿ ಸರ್, ನೀವೇ ನಮ್ಮ ಪಾಲಿನ ದೇವರು. ಕಾಲಿಗೆ ಬೀಳುತ್ತೇವೆ. ನಮ್ಮ ಬದುಕಿಗೊಂದು ಭದ್ರತೆ ಒದಗಿಸಿ. ಈ ಸಂಬಳದಲ್ಲಿ ನಾವು ಜೀವನ ಮಾಡೋಕೆ ಆಗುತ್ತಾ?'

ಅಲ್ಲಿ ಮಂತ್ರಿಗಳೇನಾದರೂ ಇದ್ದರೆ, ಅವರು ಸಹಾನುಭೂತಿಯಿಂದ 'ನೋಡೋಣ, ನಮ್ಮ ಕೈಲಾದ ಪ್ರಯತ್ನ ಮಾಡುತ್ತೇವೆ. ನೀವು ಅಧಿಕಾರಿಗಳ ಹತ್ತಿರ ಮಾತನಾಡಿ'. ಅಧಿಕಾರಿಗಳೇನಾದರೂ ಇದ್ದರೆ 'ಅವೆಲ್ಲಾ ನಿಯಮಗಳ ಪ್ರಕಾರ ಸಾಧ್ಯವೇ ಇಲ್ಲ, ಸುಮ್ಮನೆ ನಮ್ಮ ತಲೆ ತಿನ್ನಬೇಡಿ. ಪ್ರತಿಭಟನೆ ನಿಲ್ಲಿಸಿ, ಹೋಗಿ ಕೆಲಸ ಮಾಡಿ'.

'ಇಲ್ಲಾ ಸಾರ್, ನಾವು ಪ್ರತಿಭಟನೆ ನಿಲ್ಸೋಲ್ಲ, ನಮ್ಮ ನ್ಯಾಯಯುತ ಹಕ್ಕುಗಳನ್ನು ಕೇಳುತ್ತಿದ್ದೇವೆ ಅಷ್ಟೇ'.

ಬಹುತೇಕ ಎಲ್ಲಾ ಅಧಿಕಾರಿಗಳದ್ದೂ ಒಂದೇ ರೀತಿಯ ಉದ್ಧಟತನದ, ಅಹಂಕಾರದ ಪ್ರತಿಕ್ರಿಯೆ: 'ನೀವು ಸರ್ಕಾರದ ನೌಕರರಲ್ಲ, ಇದಕ್ಕೊಂದು ರೂಪಿಸಲಾಗಿರುವ ಸೊಸೈಟಿಯದ್ದು. ನೀವು ಕೆಲಸಕ್ಕೆ ಸೇರಿಕೊಳ್ಳುವಾಗಲೇ ಕಾಯಂ ಮಾಡಿಕೊಳ್ಳಲು ಒತ್ತಾಯಿಸುವುದಿಲ್ಲವೆಂದು ಬರೆದುಕೊಟ್ಟಿದ್ದೀರಿ. ಮುಚ್ಚಿಕೊಂಡು ಹೋಗಿ. ಕೆಲಸ ಮಾಡದೇ ಇದ್ದರೆ, ಕೂಡಲೇ



ನಿಮ್ಮೆಲ್ಲರನ್ನೂ ಕೆಲಸದಿಂದ ಕಿತ್ತುಹಾಕುತ್ತೇವೆ. ಈ ಕೆಲಸಕ್ಕೆ ಬರಲು ಸಾವಿರಾರು ಜನರು ಕ್ಯೂನಲ್ಲಿ ಇದ್ದಾರೆ. ಈಗ ನಿಮಗೆ ಕೊಡುತ್ತಿರುವ ಸಂಬಳವೇ ಹೆಚ್ಚಾಯ್ತು'.


ಇಷ್ಟು ಮಾತನಾಡುವ ವಿಧಾನಸೌಧದ ಅಧಿಕಾರಿಗಳು, ಉಪ್ಪಾರಪೇಟೆ ಠಾಣೆಗೆ ಫೋನಾಯಿಸುತ್ತಾರೆ. 'ಇವರದ್ಯಾಕೋ ಅತಿಯಾಯ್ತು, ಮೀಡಿಯಾದವರೂ ನಮ್ಮ ತಲೆ ತಿನ್ನುತ್ತಾರೆ. ಅವರು ಉಪವಾಸ ಕೂತು ಪರಿಸ್ಥಿತಿ ಬಿಗಡಾಯಿಸುತ್ತಿದ್ದರೂ ಸುಮ್ಮನಿದ್ದೀರಿ. ಅವರನ್ನು ನಿಭಾಯಿಸಿ' ಎಂದು ಸೂಚಿಸುತ್ತಾರೆ. ಪೊಲೀಸ್ ಅಧಿಕಾರಿಗಳು ಫ್ರೀಡಂ ಪಾರ್ಕ್ ಎಂಬ ಹಳೇ ಜೈಲಿನ ಆವರಣಕ್ಕೆ ಬರುತ್ತಾರೆ. ಅಲ್ಲಿ ಸ್ವಯಂ ಕೈದಿಗಳಾಗಿರುವ ಪ್ರತಿಭಟನಾಕಾರರಿಗೆ 'ಬಿಡುಗಡೆಯ ಭಾಗ್ಯ' ಕಲ್ಪಿಸಲು ಮುಂದಾಗುತ್ತಾರೆ. 'ನಿಮಗೆ ಇಲ್ಲಿ ಇನ್ನೂ ಹೆಚ್ಚು ದಿನ ಅನುಮತಿ ನೀಡಲು ಸಾಧ್ಯವಿಲ್ಲ. ಉಪವಾಸ ಮಾಡಿದವರ ಮೇಲೆ ಆತ್ಮಹತ್ಯೆಗೆ ಪ್ರಯತ್ನ ಮೊಕದ್ದಮೆ ಹಾಕಬೇಕಾಗುತ್ತದೆ. ಇವತ್ತೊಂದು ದಿನ ನೋಡುತ್ತೇವೆ ಅಷ್ಟೇ'. 'ಅಯ್ಯೋ ಹಾಗೆನ್ನಬೇಡಿ ಸಾರ್. ಮಾನವೀಯತೆಯಿಂದ ಅರ್ಥ ಮಾಡಿಕೊಳ್ಳಿ. ನಮ್ಮ ಹಕ್ಕುಗಳಿಗಾಗಿ ನಾವು ಹೋರಾಡಲೂ ಅವಕಾಶ ಇಲ್ಲವೆಂದರೆ ಹೇಗೆ?' ಪೊಲೀಸ್ ಅಧಿಕಾರಿಗಳ ಕರುಳು ಚುರ್ರೆನ್ನುತ್ತದೆ. 'ಆಯ್ತು ನಾವೇ ಹೇಗೋ ಮಾಡಿ ಇನ್ನೊಮ್ಮೆ ಮಂತ್ರಿಗಳ ಹತ್ತಿರ ಕರೆದುಕೊಂಡು ಹೋಗುತ್ತೇವೆ. ಏನೋ ಒಂದು ಮಾತಾಡಿ ಬಗೆಹರಿಸಿಕೊಳ್ಳಿ. ಆದರೆ ಎರಡು ದಿನಗಳಿಗಿಂತಲೂ ಹೆಚ್ಚು ಅವಕಾಶ ಸಾಧ್ಯವಿಲ್ಲ'.

ಇಲ್ಲಿಂದಾಚೆಗೆ ಇನ್ನೇನೋ ನಡೆದು ನಿಧಾನಕ್ಕೆ ಆ ಚಳವಳಿಯನ್ನು ಕರಗಿಸುವಲ್ಲಿ ಎಲ್ಲರೂ ಸೇರಿ ಯಶಸ್ವಿಯಾಗುತ್ತಾರೆ. ಈ ಮಧ್ಯೆ ಅಲ್ಲಿಗೆ ಪ್ರವೇಶ ಕೊಡುವ ವಿವಿಧ ಸಂಘಟನೆಗಳ ಮುಖಂಡರು ಅಥವಾ ಕಾರ್ಮಿಕ ಇಲಾಖೆ ಎಲ್ಲವೂ ಈ ಪ್ರಹಸನದಲ್ಲಿ ವಿವಿಧ ಪಾತ್ರಗಳನ್ನು ನಿರ್ವಹಿಸುವಷ್ಟಕ್ಕೆ ಸೀಮಿತವಾಗುತ್ತಾರೆ. ಕೆಲವರು ಈ ನಿಟ್ಟಿನಲ್ಲಿ ಮಾಡುವ ಪ್ರಾಮಾಣಿಕ ಪ್ರಯತ್ನಗಳೂ ನಿಷ್ಫಲವಾಗುತ್ತವೆ. ಬಹುತೇಕ ಎಲ್ಲಾ ಗುತ್ತಿಗೆ ನೌಕರರ ಹೋರಾಟಗಳೂ ಒಂದಿಲ್ಲೊಂದು ರಾಜಿಯಲ್ಲೇ ಕೊನೆಗೊಳ್ಳುವಂತೆ ಇಡೀ ವ್ಯವಸ್ಥೆ ನೋಡಿಕೊಳ್ಳುತ್ತದೆ.

ಯಾವುದೇ ಕಾರ್ಮಿಕರು ಅಥವಾ ನೌಕರರನ್ನು ಅಭದ್ರತೆಯಲ್ಲಿ ಇಡದಂತೆ ನೋಡಿಕೊಳ್ಳಬೇಕಾದ ಸರ್ಕಾರವು, ತನ್ನದೇ ನೌಕರರನ್ನು ಅಭದ್ರತೆಯಲ್ಲಿ, ಕಡಿಮೆ ವೇತನದಲ್ಲಿ ದುಡಿಸಿಕೊಳ್ಳುತ್ತಿದೆ. ಇನ್ನು ಕೆಲವೇ ವರ್ಷಗಳಲ್ಲಿ ಸರ್ಕಾರದಡಿಯಲ್ಲಿ ದುಡಿವ ನೌಕರರಲ್ಲಿ ಹಂಗಾಮಿ ನೌಕರರ ಸಂಖ್ಯೆಯು ಕಾಯಂ ನೌಕರರಿಗಿಂತ ಹೆಚ್ಚಾಗಲಿದೆ. ಹೊರಗುತ್ತಿಗೆ ನೀಡಿರುವ ವಿಭಾಗಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಈಗಾಗಲೇ ಅದು ಹೆಚ್ಚಾಗಿದ್ದರೂ ಆಶ್ಚರ್ಯವಿಲ್ಲ. ಇದರಲ್ಲಿ ಒಂದು ವಿಚಿತ್ರವಾದ ಸಂಗತಿಯಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೆ ತರುತ್ತಿರುವ ಹತ್ತು ಹಲವು ಯೋಜನೆ, ಕಾರ್ಯಕ್ರಮ, ಅಭಿಯಾನಗಳನ್ನು ನಿರ್ವಹಿಸಲು ಪ್ರತ್ಯೇಕ ವಿಭಾಗಗಳನ್ನು ರಚಿಸುತ್ತಿವೆ. ಅವಕ್ಕೆ ಸೊಸೈಟಿ, ಸಂಘ ಇತ್ಯಾದಿ ಹೆಸರುಗಳನ್ನು ನೀಡಲಾಗಿದೆ. ಅವು ನೇರವಾಗಿ ರಾಜ್ಯ ಸರ್ಕಾರದ ಅಂಗಸಂಸ್ಥೆಗಳೇ ಆಗಿದ್ದರೂ, ಅನುದಾನವು ಕೇಂದ್ರ ಸರ್ಕಾರದಿಂದ ಬರುತ್ತವೆ. ಈ ಸೊಸೈಟಿಗಳು ಖಾಸಗಿ ಸಂಸ್ಥೆಗಳೇನೋ ಎಂಬ ರೀತಿಯಲ್ಲಿ ಕೆಲಸ ಮಾಡುತ್ತವೆ.

ಕಳೆದ ಅಧಿವೇಶನದ ಸಂದರ್ಭದಲ್ಲಿ ಪ್ರತಿಭಟನೆಯಲ್ಲಿ ಕೂತಿದ್ದ ಕಸಾಪ್ಸ್ (ಏಯ್ಡ್ಸ್‌ಗೆ ಸಂಬಂಧಿಸಿದ ಸೊಸೈಟಿ) ಥರದವು ಮಾತ್ರವಲ್ಲ, ಸರ್ವ ಶಿಕ್ಷಾ ಅಭಿಯಾನ ಎಂಬ ಹೆಸರನ್ನೊತ್ತಿರುವ ಶಾಲಾ ಶಿಕ್ಷಣದ ಯೋಜನೆಯೂ ಇಂತಹ ಒಂದು ಸೊಸೈಟಿಯ ಅಡಿಯಲ್ಲೇ ಬರುತ್ತದೆ. ಇಂತಹ ಸೊಸೈಟಿಗಳಡಿ ಬರುವ ನೌಕರರ ಸಂಬಳವು ಯಾವಾಗಲೂ ತಡವಾಗಿಯೇ ಬರುತ್ತದೆ. ಎಷ್ಟೋ ಸಾರಿ 3-4 ತಿಂಗಳಾದರೂ ಸಂಬಳವಾಗಿರುವುದಿಲ್ಲ. ಇವರು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗವಾಗುವುದಾದರೆ ಅದೇ ವಿಭಾಗದಡಿಯೇ ವರ್ಗವಾಗಬೇಕು. ಅಂದರೆ ಇವರ ಅತಂತ್ರತೆ ಎಂದಿಗೂ ತಪ್ಪಬಾರದು.

ಗುತ್ತಿಗೆ ಆಧಾರದಡಿ ಕೆಲಸ ಮಾಡುವವರೆಲ್ಲರೂ ಸದಾಕಾಲ ಕೆಲಸ ಕಳೆದುಕೊಳ್ಳುವ ಭಯವನ್ನು ಎದುರಿಸುತ್ತಿರುತ್ತಾರೆ. ಇವರು ತಮ್ಮ ಕೆಲಸದ ಜಾಗದಲ್ಲಿ ಕಾಯಂ ನೌಕರರಿಗಿಂತ ಹೆಚ್ಚು ಕೆಲಸ ಮಾಡಬೇಕಾಗುತ್ತದೆ. ಅವರಿಗಿಂತ ಅರ್ಧ ಅಥವಾ ಕಾಲುಭಾಗ ಸಂಬಳಕ್ಕೆ, ಅವರಿಗಿಂತ ಮೂರನೇ ಒಂದು ಭಾಗದಷ್ಟು ರಜೆಗಳನ್ನು



ಮಾತ್ರ ತೆಗೆದುಕೊಂಡು. ಅವರಿಗಿರುವ ಯಾವ ಸವಲತ್ತೂ (ಗ್ರಾಚ್ಯುಟಿ, ವೈದ್ಯಕೀಯ ಭತ್ಯೆಗಳು, ಡಿಎ-ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ರಿಸ್ಕ್ ಅಲೋವೆನ್ಸ್ ಇತ್ಯಾದಿ) ಇಲ್ಲದೇ. ಇದಕ್ಕೆ ಕಾರಣವೇನು ಎಂದು ಸದರಿ ನೌಕರರನ್ನು ಕೇಳಿದರೆ ಅವರು ಯಾವುದೋ ಒಬ್ಬ ನಿರ್ದಿಷ್ಟ ಅಧಿಕಾರಿ, ಮಂತ್ರಿ ಅಥವಾ ಮುಖ್ಯಮಂತ್ರಿಯತ್ತ ಬೆರಳು ಮಾಡಿ ತೋರಿಸುತ್ತಾರೆ. 'ಅವರ ಕಾಲದಲ್ಲೇ ಹೀಗಾಗಿದ್ದು, ಇನ್ನೊಬ್ಬರ ಕಾಲದಲ್ಲಿ ನಮ್ಮನ್ನು ಕಾಯಂ ಮಾಡಿಕೊಳ್ಳಲು ಎಲ್ಲಾ ಆಗಿಹೋಗಿತ್ತು, ಇನ್ನೇನೂ ಕೊನೆಯ ಆದೇಶ ಹೊರಬರಬೇಕು ಅನ್ನುವಷ್ಟರಲ್ಲಿ ಅವರ ಅಧಿಕಾರ ಹೋಯಿತು' ಎಂದು ಅಲವತ್ತುಕೊಳ್ಳುತ್ತಾರೆ. ವಾಸ್ತವದಲ್ಲಿ ಇದು ಸರ್ಕಾರದ ನೀತಿಯಾಗಿದೆ. ಇವತ್ತು ಈ ದೇಶದಲ್ಲಿ ಅಸ್ತಿತ್ವದಲ್ಲಿರುವ ಬಹುತೇಕ ಎಲ್ಲಾ ಪಕ್ಷಗಳು ಒಪ್ಪಿಕೊಂಡು ಪಾಲಿಸುತ್ತಿರುವ ನೀತಿ.


ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ನಿರ್ದಿಷ್ಟ ಬಗೆಯ ಅನುದಾನವನ್ನು ಪಡೆದುಕೊಂಡು, ಅತಂತ್ರ ನೌಕರರ ದುಡಿಮೆಯ ಆಧಾರದ ಮೇಲೆ ಒಂದು ಮಧ್ಯವರ್ತಿಯಂತೆ ಕೆಲಸ ಮಾಡುವ ಕನಿಷ್ಠ 20 ದೊಡ್ಡ ಯೋಜನೆಗಳು ಅಸ್ತಿತ್ವದಲ್ಲಿವೆ. ಇಲ್ಲಿ ರಾಜ್ಯ ಸರ್ಕಾರವು ಲೇಬರ್ ಕಂಟ್ರಾಕ್ಟರ್ ಮತ್ತು ಪೀಸ್‌ವರ್ಕ್ ಕಂಟ್ರಾಕ್ಟರ್ ರೀತಿಯ ಕೆಲಸ ಮಾಡುತ್ತದೆ. ಕೆಲವೊಮ್ಮೆ ಕೇಂದ್ರ ಸರ್ಕಾರವೂ (ಕೆಲವೊಮ್ಮೆ ರಾಜ್ಯ ಸರ್ಕಾರಗಳೇ ನೇರವಾಗಿ) ಹಣವನ್ನು ವಿಶ್ವಬ್ಯಾಂಕ್, ಡಬ್ಲ್ಯುಎಚ್‌ಓ ಅಥವಾ ಇನ್ನಾವುದೋ ಒಂದು ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಪಡೆದು ಕೊಳ್ಳುತ್ತಿರುತ್ತದೆ. ಅಂದರೆ ಅದೂ ಸಹ ಇಲ್ಲಿ ಕಂಟ್ರಾಕ್ಟರ್ ಕೆಲಸವನ್ನೇ ಮಾಡುತ್ತಿರುತ್ತದೆ.

ಇಡೀ ಸರ್ಕಾರಗಳೇ ಕಾರ್ಪೊರೇಟ್ ಸಂಸ್ಥೆಗಳ ಏಜೆಂಟರಾಗಿ ಕೆಲಸ ಮಾಡುತ್ತಿರುವುದಕ್ಕೆ ಇದು ಇನ್ನೊಂದು ಉದಾಹರಣೆಯಷ್ಟೇ. ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿ ಮಾಡಿ ಜನರನ್ನು ಉದ್ಧಾರ ಮಾಡುತ್ತೇವೆಂದು ಹೇಳುವ ಸರ್ಕಾರಗಳು ವಾಸ್ತವದಲ್ಲಿ ಅಭದ್ರ ನೌಕರರ ಶ್ರಮದ ಲೂಟಿಯ ಮೂಲಕ ಕೆಲಸ ಮಾಡುತ್ತಿವೆ. ಅನ್ನಭಾಗ್ಯ ಯೋಜನೆಯಡಿ ಕೆಲಸ ಮಾಡುವ ಲೋಡಿಂಗ್ ಕಾರ್ಮಿಕರು, ಪೌರಸೇವಾ ಸಂಸ್ಥೆಗಳ ಗುತ್ತಿಗೆ ಪೌರಕಾರ್ಮಿಕರಿಂದ ಹಿಡಿದು, ಕಾಲೇಜು-ವಿಶ್ವವಿದ್ಯಾಲಯಗಳ ಅತಿಥಿ ಉಪನ್ಯಾಸಕರ ತನಕ ಹಬ್ಬಿರುವ ಜಾಲವಿದು.

ಈ ವಿದ್ಯಮಾನವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿ ನಮ್ಮ ಅತಂತ್ರ ನೌಕರ ಸಮೂಹ ಇಲ್ಲ. ಬಹಳ ಕಷ್ಟದಿಂದ ಎಲ್ಲರನ್ನೂ ಒಗ್ಗೂಡಿಸಿ ಬೆಂಗಳೂರಿನಲ್ಲಿ ಧರಣಿ ಕುಳಿತಿರುವ ಅವರು ತಮ್ಮ ಸಮಸ್ಯೆಯನ್ನು ಪರಿಹರಿಸಬಲ್ಲ 'ದೇವದೂತ'ರಿಗಾಗಿ ಕಾಯುತ್ತಾರೆ. ಒಂದು ವೇಳೆ ಯಾರಾದರೂ ದೇವದೂತರು ಇದಕ್ಕಾಗಿ 'ಸೇವಾಶುಲ್ಕ'ವನ್ನು ಕೇಳಿದರೆ ಪ್ರತಿಯೊಬ್ಬ ನೌಕರರಿಂದ ತಲಾ ಸಾವಿರ ರೂ.ಗಳಿಂದ ಲಕ್ಷ ರೂ.ಗಳವರೆಗೆ ಸಂಗ್ರಹಿಸಿ ಕೊಡುತ್ತಾರೆ. ಬಹುತೇಕ ಸಾರಿ ಹಣವನ್ನು ಕಳೆದುಕೊಳ್ಳುತ್ತಾರೆ. ಇದು ತಮ್ಮಂತೆಯೇ ಸಮಸ್ಯೆಯಲ್ಲಿರುವ ಲಕ್ಷಾಂತರ ನೌಕರರ ಸಮಸ್ಯೆಯಾಗಿದೆ, ಆದಕ್ಕಾಗಿ ನಾವೆಲ್ಲರೂ ಒಗ್ಗಟ್ಟಾಗಿ ಹೋರಾಡಬೇಕು ಎಂಬುದರ ಬದಲಿಗೆ, 'ಹೇಗಾದರೂ ಸರಿ, ನಮ್ಮ ಕೆಲಸ ಭದ್ರವಾದರೆ ಸಾಕು' ಎಂಬ ಆಲೋಚನೆಯೇ ಸಾರ್ವತ್ರಿಕವಾಗಿರುತ್ತದೆ. ಎಲ್ಲಿಯವರೆಗೆ ಇಂತಹ ಎಲ್ಲಾ ಅಭದ್ರ ನೌಕರರೂ ಒಗ್ಗಟ್ಟಾಗುವುದಿಲ್ಲವೋ, ಅಲ್ಲಿಯವರೆಗೆ ಸರ್ಕಾರಗಳು ನೆಮ್ಮದಿಯಾಗಿರುತ್ತವೆ. ಅವರು 'ಉಮಾದೇವಿ ಕೇಸು, ಹಣವಿಲ್ಲ, ನೀವು ಸೊಸೈಟಿಯ ನೌಕರರು, ಇಷ್ಟಕ್ಕೆ ಒಪ್ಪಿಕೊಂಡು ಮುಷ್ಕರ ನಿಲ್ಲಿಸಿ, ಟರ್ಮಿನೇಟ್ ಮಾಡುತ್ತೇವೆ' ಇತ್ಯಾದಿ ಮಂತ್ರಗಳನ್ನು ಜಪಿಸುತ್ತಿರುತ್ತಾರೆ.

ತಮ್ಮ ತಮ್ಮ ಸೀಮಿತ ಚೌಕಟ್ಟಿನಾಚೆ ಎಲ್ಲಾ ಅಭದ್ರ ನೌಕರರೂ ಒಂದು ಸಮಾನ ವೇದಿಕೆಯಡಿ ಬಂದು ನಿರ್ಣಾಯಕವಾದ ಹೋರಾಟಕ್ಕೆ ಮುಂದಡಿಯಿಟ್ಟರೆ ಮಾತ್ರ ಸರ್ಕಾರಗಳೂ ತಮ್ಮ ಪಾಲಿಸಿಯನ್ನು ಬದಲಾಯಿಸಿ ಕೊಳ್ಳುತ್ತಾರೆ. ಅಂತಹದೊಂದು ಸಮಾನ ವೇದಿಕೆ ಆದಷ್ಟು ಬೇಗ ರೂಪುಗೊಳ್ಳಬೇಕಾಗಿದೆ.

ಮೋದಿ, ಅದನಿಯ ಖಾಸಗಿ ವಿಮಾನ ಮತ್ತು ಡೀಲುಗಳು!



ಇತ್ತೀಚೆಗೆ ನರಹಂತಕ ನರೇಂದ್ರ ಮೋದಿ ದಾವಣಗೆರೆ ಮತ್ತು ಮಂಗಳೂರಿಗೆ ಬಂದದ್ದು ಎಲ್ಲಾ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿ ಆಯಿತು ಸರಿ. ಆದರೆ ಆತ ಯಾವುದರಲ್ಲಿ ಕರ್ನಾಟಕಕ್ಕೆ ಬಂದಿದ್ದ ಎಂಬುದು ಮಾತ್ರ ಎಲ್ಲೂ ಸುದ್ದಿ ಆಗಲಿಲ್ಲ. ಆದರೀಗ ಸ್ವತಃ ಬಿಜೆಪಿಯ ರಾಜ್ಯಾಧ್ಯಕ್ಷ ಪ್ರಹ್ಲಾದ್ ಜೋಷಿ ಅದನ್ನು ಬಹಿರಂಗಪಡಿಸಿದ್ದಾರೆ. ಜೋಷಿ ಅವರು ತಮ್ಮ ಫೇಸ್‌ಬುಕ್ ಪುಟದಲ್ಲಿ ಮೋದಿಗೆ ಹೂವಿನಹಾರ ಹಾಕಿ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸುತ್ತಿರುವ ಚಿತ್ರವನ್ನು ಹಾಕಿದ್ದಾರೆ. ಆ ಚಿತ್ರದಲ್ಲಿ ಮೋದಿಯ ಹಿಂದೆ ಆತ ಆಗಮಿಸಿದ್ದ ಏರೋಪ್ಲೇನ್ ಇದೆ. ಆ ಪ್ಲೇನಿನ ಮೇಲೆ 'ಅದನಿ' ಎಂದು ಬರೆಯಲಾಗಿದೆ!

ಅಂದರೆ ಮೋದಿ ಕರ್ನಾಟಕಕ್ಕೆ ಬಂದಿದ್ದು ಗೌತಮ್ ಅದನಿ ಎಂಬ ಭ್ರಷ್ಟ ಉದ್ಯಮಿಯ ಖಾಸಗಿ ವಿಮಾನದಲ್ಲಿ!

ಅಂದಹಾಗೆ, ಗುಜರಾತಿನಲ್ಲಿ ವಿರೋಧ ಪಕ್ಷಗಳು ಮಾಹಿತಿ ಹಕ್ಕು ಕಾಯ್ದೆಯ ಮೂಲಕ ಪಡೆದಿರುವ ಮಾಹಿತಿ ಯಾವುದೆಂದರೆ ಈ ಮೋದಿ ಇತರೆ ಮುಖ್ಯಮಂತ್ರಿಗಳಂತೆ ಸಾರ್ವಜನಿಕ ಅಥವಾ ರಾಜ್ಯ ಸರ್ಕಾರದ ವಿಮಾನಗಳನ್ನು ಬಳಸುವ ಬದಲು ಖಾಸಗಿ ಉದ್ಯಮಿಗಳ ವಿಮಾನಗಳನ್ನು ಬಳಸುವುದನ್ನೇ ಖಯಾಲಿ ಮಾಡಿಕೊಂಡಿದ್ದಾನೆ. ಆತನ ಇಂತಹ ನೂರಾರು 'ಹಾರಾಟ'ಗಳಿಗೆ ಅದನಿ, ಅಂಬಾನಿ ಇತ್ಯಾದಿಗಳು ತಮ್ಮ ವಿಮಾನಗಳನ್ನು ಪುಕ್ಕಟೆಯಾಗಿ ನೀಡಿದ್ದಾರೆ. ಅದಕ್ಕೆ ಪ್ರತಿಫಲವಾಗಿ ಗುಜರಾತಿನ ಜನರಿಗೆ ಹೊರೆ ಆಗುವಂತಹ ಡೀಲ್‌ಗಳನ್ನು ಮೋದಿ ಆ ಉದ್ಯಮಿಗಳೊಂದಿಗೆ ಕುದುರಿಸಿದ್ದಾನೆ.

ಅವು ಎಂತಹ ಡೀಲ್‌ಗಳು ಎಂದು ಅರಿಯಬೇಕಾದರೆ ಈ ಅದನಿ-ಮೋದಿ ನಂಟನ್ನು ನೋಡಬೇಕು.

ಒಂದು ದಶಕದ ಹಿಂದೆ ಈ ಗೌತಮ್ ಅದನಿ ಸಾಮಾನ್ಯ ಉದ್ಯಮಿಯಾಗಿದ್ದ. ಆದರೀಗ ಆತ ಭಾರತದ ಕುಬೇರರಲ್ಲಿ ಒಬ್ಬನಾಗಿ ಪರಿವರ್ತನೆಗೊಂಡಿದ್ದಾನೆ. ಅದಕ್ಕೆ ನೇರ ಕಾರಣ ಮೋದಿಯ ನೆರವು ಎಂಬುದರ ಬಗ್ಗೆ ಯಾವ ಅನುಮಾನವೂ ಬೇಡ. ಉದಾಹರಣೆಗೆ ಅದನಿ ಗುಜರಾತ್ ಸರ್ಕಾರದೊಂದಿಗೆ ವಿದ್ಯುತ್ ಖರೀದಿಗೆ ಸಂಬಂಧಪಟ್ಟಂತೆ ಮಾಡಿಕೊಂಡಿರುವ ಒಪ್ಪಂದ.


2007ರಲ್ಲಿ ಗುಜರಾತ್ ತೀವ್ರ ವಿದ್ಯುತ್ ಅಭಾವವನ್ನು ಎದುರಿಸುತ್ತಿತ್ತು, ಆಗ ಗುಜರಾತ್ ಸರ್ಕಾರಿ ಸಾಮ್ಯದ ಗುಜರಾತ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ (ಜಿಡಿಎಂಸಿ) ಒಂದು ಯೂನಿಟ್‌ಗೆ 'ರೂ. 2.25 ದರದಲ್ಲಿ ವಿದ್ಯುತ್ ಅನ್ನು ಸರ್ಕಾರಕ್ಕೆ ಒದಗಿಸುವುದಾಗಿ ಪ್ರಸ್ತಾಪವನ್ನು ಸಲ್ಲಿಸಿತ್ತು, ಆ ಪ್ರಸ್ತಾಪವನ್ನು ತಿರಸ್ಕರಿಸಿದ ಮೋದಿ ಅದನಿಯ ವಿದ್ಯುತ್ ಕಂಪನಿಯಿಂದ ಒಂದು ಯೂನಿಟ್‌ಗೆ ರೂ. 2.89 ದರದಲ್ಲಿ ವಿದ್ಯುತ್ ಖರೀದಿಸುವ ಒಪ್ಪಂದಕ್ಕೆ ಸಹಿ ಹಾಕಿದ. ಇದನ್ನು ಜಿಡಿಎಂಸಿಯ ಚೇರ್ಮನ್ ಜೋಸ್ ಎಂಬುವವರು ವಿರೋಧಿಸಿದರು. ಆಗ ಮೋದಿ ಜೋಸ್ ಅವರನ್ನೇ ಆ ಹುದ್ದೆಯಿಂದ ಒದ್ದೋಡಿಸಿದನಲ್ಲದೆ ಅದನಿಯ ಕಂಪನಿಯು ವಿದ್ಯುತ್ ಅನ್ನು ತಯಾರಿಸಲು ಜಿಡಿಎಂಸಿ ಸಂಸ್ಥೆಯೇ ಆತನಿಗೆ ಕಲ್ಲಿದ್ದಲನ್ನು ಸರಬರಾಜು ಮಾಡಬೇಕೆಂದು ಆದೇಶಿಸಿದ.

ಇದರಿಂದ ಅದನಿಗೆ ಆದ ಲಾಭವೆಷ್ಟು? 2011 ಮತ್ತು 2012ರಲ್ಲಿ ಅದನಿಯ ಕಂಪನಿಯು 21,393 ಮಿಲಿಯನ್ ಯೂನಿಟ್ ವಿದ್ಯುತ್ ಅನ್ನು ಗುಜರಾತ್ ಸರ್ಕಾರಕ್ಕೆ ಮಾರಾಟ ಮಾಡಿತು. ಅದಕ್ಕೆ, ಗುಜರಾತ್ ಬೊಕ್ಕಸದಿಂದ ಕೋಟ್ಯಾಂತರ ರೂಪಾಯಿಗಳನ್ನು ಕೊಡಲಾಗಿತ್ತು, ಒಂದು ಯೂನಿಟ್‌ಗೆ .64 ಪೈಸೆ ಹೆಚ್ಚುವರಿಯಾಗಿ ಕೊಟ್ಟಿದ್ದರಿಂದ ಅದನಿಯ ಕಂಪನಿಗೆ ಆ ಎರಡು ವರ್ಷಗಳಲ್ಲೇ ಆದ ಪುಕ್ಕಟೆ ಲಾಭ 1,347 ಕೋಟಿ ರೂಪಾಯಿಗಳು!

ಅದನಿಯೊಂದಿಗೆ ಇಂತಹ ವಂಚಕ ಒಪ್ಪಂದವನ್ನು ಮೋದಿ ಮಾಡಿಕೊಂಡಿರುವುದು ಬರುವ 25 ವರ್ಷಗಳ ಕಾಲಕ್ಕೆ. ಆ ಅವಧಿಯಲ್ಲಿ ಅದನಿ ಕಂಪನಿಯಿಂದ 15,000 ಮಿಲಿಯನ್ ಯೂನಿಟ್‌ಗಳನ್ನು ಖರೀದಿಸುವುದರಿಂದ ಗುಜರಾತ್ ಬೊಕ್ಕಸಕ್ಕೆ ಆಗುವ ನಷ್ಟ ಬರೋಬ್ಬರಿ 23,625 ಕೋಟಿ ರೂಪಾಯಿಗಳು!!

ಮೋದಿಯ ಹಾರಾಟಕ್ಕೆ ಅದನಿ ಪುಕ್ಕಟೆಯಾಗಿ ತನ್ನ ಖಾಸಗಿ ವಿಮಾನವನ್ನು ಕೊಡದೆ ಇರಲು ಕಾರಣವೇ ಇಲ್ಲವಲ್ಲ.

ಅದೇ ಅದನಿಗೆ ಮೋದಿಯು ಕಚ್ ಪ್ರದೇಶದಲ್ಲಿ ಬರೋಬ್ಬರಿ 14,306 ಎಕರೆಗಳನ್ನು ಕೊಟ್ಟಿದ್ದಾನೆ.



ಅದಕ್ಕೆ ಆತ ವಿಧಿಸಿರುವ ದರ ಪ್ರತಿ ಚದರ ಮೀಟರ್‌ಗೆ ಕೇವಲ ಒಂದು ರೂಪಾಯಿಂದ ರೂ. 32! ವಾಸ್ತವವಾಗಿ ಆ ಪ್ರದೇಶದಲ್ಲಿ ಭೂಮಿಯ ದರ ರೂ. 200-ರೂ. 315 (ಉದ್ಯಮ ಸ್ಥಾಪಿಸಲು) ಮತ್ತು ರೂ. 1,000-1,575 (ಎಸ್‌ಈಜೆಡ್ ಸ್ಥಾಪಿಸಲು) ಮೌಲ್ಯದ್ದು. ಈ ಅವ್ಯವಹಾರ ಕುರಿತು ಆಮ್ ಆದ್ಮಿ ಪಕ್ಷ ಹೀಗೆ ಹೇಳಿದೆ: " ಆ ಪ್ರದೇಶದಲ್ಲಿರುವ ಭೂಮಿಯ ಮೌಲ್ಯವನ್ನು ಶೇ. 300 ರೂ. ಎಂದು ಇಟ್ಟುಕೊಂಡು ಅದನಿಗೆ ಕೊಟ್ಟಿರುವ ಸಾವಿರಾರು ಎಕರೆಗಳಿಗೆ ಶೇ. 10 ರೂಪಾಯಿ ಎಂದು ಲೆಕ್ಕಹಾಕಿದರೆ ಈ ಒಂದು ಡೀಲ್‌ನಿಂದಲೇ ಅದನಿಗೆ 1,600 ಕೋಟಿ ರೂಪಾಯಿ ಲಾಭವಾಗಿದೆ." ಇದು ಮೋದಿ ಅದನಿಯ ಕಂಪನಿಗಳಿಗೆ ಕೊಟ್ಟಿರುವ ಹಲವಾರು ಭೂಮಿಗಳಲ್ಲಿ ಒಂದು ಉದಾಹರಣೆ ಮಾತ್ರ.

ಇನ್ನು ಮೋದಿ ತಾನು ಪರಮ ದೇಶಭಕ್ತ ಎಂಬಂತೆ ಪೋಸು ಕೊಡುತ್ತಾನಲ್ಲವೇ? ಮೋದಿಯದ್ದು ಎಂತಹ ನಕಲಿ ದೇಶಪ್ರೇಮ ಎಂಬುದಕ್ಕೆ ಇಲ್ಲೊಂದು ಸ್ಯಾಂಪಲ್ ಇದೆ ನೋಡಿ.

ಭಾರತೀಯ ವಾಯುಪಡೆ ಅದೇ ಕಚ್ ಪ್ರದೇಶದಲ್ಲಿ ಒಂದಿಷ್ಟು ಭೂಮಿಯನ್ನು ಕೇಳಿದಾಗ ಮೋದಿ ಎಷ್ಟು ಎಕರೆ ಕೊಟ್ಟ ಗೊತ್ತೆ? ಕೇವಲ 100 ಎಕರೆ. ಅದಕ್ಕೆ ಆತ ವಿಧಿಸಿದ ಬೆಲೆ: ಒಂದು ಚದರ ಮೀಟರ್‌ಗೆ 8,800 ರೂಪಾಯಿ! ಅದನಿಗೆ 14,000 ಎಕರೆ, ಅದೂ ಚದರ ಮೀಟರ್‌ಗೆ ಒಂದು ರೂಪಾಯಿಯಲ್ಲಿ, ಅದೇ ಭಾರತೀಯ ವಾಯುಪಡೆಗೆ ಚದರಡಿಗೆ 8,800 ರೂಪಾಯಿಗೆ 100 ಎಕರೆ!! ಇಂತಹ ದೇಶಭಕ್ತನನ್ನು ಪಡೆದಿರುವ ಭಾರತಾಂಬೆ ಧನ್ಯಳಾಗಬೇಕು.

ಇಂತಹ ಭ್ರಷ್ಟ ಡೀಲ್‌ಗಳ ವಿರುದ್ಧ ಗುಜರಾತ್ ನ್ಯಾಯಾಲಯವೂ ಯಾಕೆ ಸುಮ್ಮನಿದೆ ಎಂಬುದಕ್ಕೂ ಒಂದು ಕಾರಣವಿದೆ. ಗುಜರಾತ್ ರಾಜಧಾನಿ ಗಾಂಧಿನಗರದಲ್ಲಿ ಮೋದಿ ಎಲ್ಲಾ ಶಾಸಕರಿಗೆ ಮತ್ತು ಸಂಸದರಿಗೆ ಸೈಟುಗಳನ್ನು ಹಂಚಲಾರಂಭಿಸಿದ್ದ. ಅದೂ ಚದರ ಮೀಟರ್‌ಗೆ ಕೇವಲ 45 ರೂಪಾಯಿಯಂತೆ. ಈ ಸೈಟುಗಳಲ್ಲಿ ಶಾಸಕರು ಮತ್ತು ಸಂಸದರು ಸ್ವಂತ ಮನೆಗಳನ್ನು ಕಟ್ಟಿಸಿಕೊಳ್ಳಬೇಕೆಂಬ ಷರತ್ತು ಇತ್ತಾದರೂ ಹೆಚ್ಚಿನವರು ಆ ಸೈಟುಗಳನ್ನು ಮಾರುಕಟ್ಟೆ ರೇಟಿನಲ್ಲಿ ಕೋಟ್ಯಾಂತರ ರೂಪಾಯಿಗೆ ಮಾರಿಕೊಂಡರು.

ಆಗ ಹೀಗೆ ಸೈಟುಗಳನ್ನು ಶಾಸಕರಿಗೆ ಮತ್ತು ಸಂಸದರಿಗೆ ಕೊಡುವುದನ್ನು ಪ್ರಶ್ನಿಸಿ ಯಾರೋ ಒಬ್ಬರು ಕೋರ್ಟ್ ಮೆಟ್ಟಿಲನ್ನು ಏರಿದರು. ಆಗ ಗುಜರಾತ್ ಹೈಕೋರ್ಟ್ ಸೈಟುಗಳನ್ನು ಪಡೆದಿರುವ ಯಾರೂ ಅವುಗಳನ್ನು ಮಾರಾಟ ಮಾಡಬಾರದೆಂದು ಆದೇಶ ಹೊರಡಿಸಿತು. ಇದಾದಕೂಡಲೇ ಮಾಜಿ, ಹಾಲಿ ಮತ್ತು ಇತರೆ ನ್ಯಾಯಾಧೀಶರಿಗೂ ರಿಯಾಯಿತಿ ದರದಲ್ಲಿ ಸೈಟುಗಳನ್ನು ಹಂಚುವ ಯೋಜನೆಯನ್ನು ಮೋದಿ ಪ್ರಕಟಿಸಿದ. ಬೆರಳೆಣಿಕೆಯಷ್ಟು ನ್ಯಾಯಾಧೀಶರನ್ನು ಹೊರತುಪಡಿಸಿ ಹೆಚ್ಚಿನವರು ಅಂತಹ ಸೈಟುಗಳನ್ನು ಪಡೆದರು. ಅವತ್ತಿನಿಂದ ಇಲ್ಲಿಯತನಕ ಸೈಟು ಹಂಚುವಿಕೆ ವಿರುದ್ಧದ ಅರ್ಜಿ ಮತ್ತೆ ನ್ಯಾಯಾಲಯದ ಮುಂದೆ ಬಂದೇ ಇಲ್ಲ!

ಅದನಿ, ಅಂಬಾನಿ, ಟಾಟಾ, ಬಿರ್ಲಾ ಎಲ್ಲರೂ ಯಾಕೆ ಮೋದಿಯನ್ನು ಕೊಂಡಾಡುತ್ತಿದ್ದಾರೆಂಬುದಕ್ಕೆ ಇಲ್ಲೊಂದಿಷ್ಟು ಡೀಲ್‌ಗಳ ವಿವರಗಳಿವೆ ನೋಡಿ:

- ನ್ಯಾನೋ ಕಾರ್ ಪ್ರಾರಂಭಿಸಲು ಟಾಟಾ ಕಂಪನಿಗೆ ಮೋದಿ 1,100 ಎಕರೆಗಳನ್ನು ಕೊಟ್ಟಿದ್ದ. ಆ ಭೂಮಿಯ ಮಾರುಕಟ್ಟೆ ಬೆಲೆ ಚದರ ಮೀಟರ್‌ಗೆ ರೂ. 10,000 ಇತ್ತು. ಆದರೆ ಮೋದಿ ಅದನ್ನು ಟಾಟಾಗೆ ಕೊಟ್ಟಿದ್ದು ಚದರ ಮೀಟರ್‌ಗೆ ರೂ. 900ಕ್ಕೆ. ಇದರಿಂದ ಟಾಟಾಗೆ ಮಿಕ್ಕ ಹಣ 33,000 ಕೋಟಿ ರೂಪಾಯಿಗಳು.
- ರಿಯಲ್ ಎಸ್ಟೇಟ್ ಡೀಲರ್ ಕೆ. ರಹೇಜಾಗೆ ಮೋದಿ 3,76,561 ಚದರ ಮೀಟರ್ ಭೂಮಿಯನ್ನು ಒಂದು ಚದರ ಮೀಟರ್‌ಗೆ ರೂ. 470 ದರದಲ್ಲಿ ಕೊಟ್ಟ. ಆದರೆ ಅದೇ ಭಾರತೀಯ ವಾಯುಪಡೆಯ ಸೌತ್‌ವೆಸ್ಟ್ ಏರ್ ಕಮಾಂಡ್‌ಗೆ ಕೊಟ್ಟ 4,04,700 ಚದರ ಮೀಟರ್ ಭೂಮಿಗೆ ಆತ ನಿಗದಿಪಡಿಸಿದ ಬೆಲೆ ರೂ. 1,100.
- ಐಷಾರಾಮಿ ಹೋಟೆಲ್ ನಿರ್ಮಿಸಲು ಚಟ್ಟಾಲ ಇಂಡಿಯನ್ ಹೋಟೆಲ್ ಗ್ರೂಪ್ ಎಂಬ ಕಂಪನಿಗೆ ಮೋದಿ ನವ್ಸಾರಿ ಕೃಷಿ ವಿಶ್ವವಿದ್ಯಾಲಯಕ್ಕೆ ಸೇರಿದ್ದ 65,000 ಚದರ ಮೀಟರ್ ಭೂಮಿಯನ್ನು- ವಿಶ್ವವಿದ್ಯಾಲಯದ ವಿರೋಧದ ನಡುವೆಯೇ- ಕೊಟ್ಟಿದ್ದ. ಇದರಿಂದ ರಾಜ್ಯ ಬೊಕ್ಕಸಕ್ಕೆ ಆದ ನಷ್ಟದ ಅಂದಾಜು 426 ಕೋಟಿ ರೂಪಾಯಿಗಳು.
- ಎಸ್ಸಾರ್ ಸ್ಟೀಲ್ ಕಂಪನಿಗೆ ಮೋದಿ 2.08 ಲಕ್ಷ ಚದರ ಮೀಟರ್ ಭೂಮಿಯನ್ನು ಕೊಟ್ಟಿದ್ದಾನೆ. ಆದರೆ ಈ ಭೂಮಿಯು ಕಡಲತೀರದಲ್ಲಿದ್ದು ಕಾಡು ಪ್ರದೇಶವಾಗಿದೆ. ಕಡಲತೀರದಲ್ಲಿರುವ ಸಿಆರ್‌ಜೆಡ್ ಮತ್ತು ಕಾಡು ಪ್ರದೇಶಗಳನ್ನು ಹೀಗೆ ಉದ್ಯಮಗಳಿಗೆ ಕೊಡಬಾರದೆಂಬ ಸುಪ್ರೀಂಕೋರ್ಟ್ ಆದೇಶವನ್ನು ಉಲ್ಲಂಘಿಸಲಾಗಿದೆ.
- ಲಾರ್ಸನ್ ಅಂಡ್ ಟೂಬ್ರೊ ಕಂಪನಿಗೆ ಹರಿಜಾಧಲ್ಲಿ ಚದರ ಮೀಟರ್‌ಗೆ ಕೇವಲ ಒಂದು ರೂಪಾಯಿ ದರದಲ್ಲಿ 80 ಹೆಕ್ಟೇರ್‌ಗಳನ್ನು ಮೋದಿ ದಯಪಾಲಿಸಿದ್ದಾನೆ.
- ಮೋದಿ ಗೋವುಗಳ ಮೇವಿಗೂ ಕನ್ನ ಹಾಕಿದ್ದಾನೆ. ಮಾರುಕಟ್ಟೆಯಲ್ಲಿ ಐದು ಕೇಜಿ ಭೂಸಾ ರೂ 120 ಕ್ಕೆ ಲಭ್ಯವಿದ್ದರೂ ಮೋದಿ ಕಪ್ಪುಪಟ್ಟಿಯಲ್ಲಿದ್ದ ಒಂದು ಕಂಪನಿಯೊಂದಿಗೆ ಡೀಲು ಕುದುರಿಸಿದ್ದಾನೆ. ಪರಿಣಾಮವಾಗಿ ಐದು ಕೇಜಿ ಭೂಸಾಕ್ಕೆ ಗುಜರಾತ್ ಸರ್ಕಾರ ತೆತ್ತುತ್ತಿರುವ ಬೆಲೆ ರೂ. 240! ಗೋ ಪ್ರೇಮ ಎಂದರೆ ಇದೇ ಇರಬೇಕಲ್ಲವೇ?
- 2003ರಲ್ಲಿ ಸುಜಲಂ ಸುಫಲಮ್ ಯೋಜನೆಗೆಂದು 6,237.33 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿತ್ತು, 2005ರಲ್ಲೂ ಈ ಯೋಜನೆ ಅನುಷ್ಠಾನಕ್ಕೆ ಬರದಿದ್ದರಿಂದ ಈ ಹಣ ಏನಾಯಿತು ಎಂದು ಗುಜರಾತ್ ವಿಧಾನಸಭೆ ವಿಚಾರಣೆಗೆ ಒಳಪಡಿಸಿತ್ತು, ಆಗ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ಈ ಯೋಜನೆಯಲ್ಲಿ 500 ಕೋಟಿ ರೂಪಾಯಿಗಳನ್ನು ಅಕ್ರಮವಾಗಿ ನುಂಗಿಹಾಕಲಾಗಿದೆ ಎಂದು ವರದಿ ಕೊಟ್ಟಿತ್ತು, ಈ ವರದಿಯನ್ನು ಮೋದಿ ವಿಧಾನಸಭೆಯಲ್ಲಿ ಇಲ್ಲಿಯ ತನಕ ಮಂಡಿಸಿಲ್ಲ.

ಇದು ಮೋದಿಯ ಅಭಿವೃದ್ಧಿಯ ಮಾದರಿ, ದೇಶಪ್ರೇಮ ಮತ್ತು ಗೋಭಕ್ತಿ ಕುರಿತಂತೆ ಒಂದು ಇಣುಕುನೋಟವಷ್ಟೇ. ಇಂತಹ ವ್ಯಕ್ತಿ ಪ್ರಧಾನಿಯಾದರೆ ಭಾರತಮಾತೆಗೆ ಆತ್ಮಹತ್ಯೆ ಮಾಡಿಕೊಳ್ಳುವುದು ಬಿಟ್ಟು ಬೇರೆ ಮಾರ್ಗ ಉಳಿಯುವುದಿಲ್ಲ! ■




ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಉತ್ತರ ಕನ್ನಡ:
ಚೆಡ್ಡಿ ನಾಯ್ಕನ ಜೆಡಿಎಸ್ ಎಂಟ್ರಿಯಿಂದ ಯಾರಿಗೆ ಲಾಭ?




ಉತ್ತರ ಕನ್ನಡದಲ್ಲಿ ಲೋಕಸಭೆ ಚುನಾವಣೆಗೆ ಪಿಚ್ ಹದಗೊಳ್ಳುತ್ತಿದೆ. ಎಂಪಿ ಸಾಹೇಬನಾಗುವ ತೆವಲಿಗೆ ಬಿದ್ದಿರುವ ವ್ಯಕ್ತಿ ಪುಢಾರಿಗಳು ಶಸ್ತ್ರಾಭ್ಯಾಸ ಶುರು ಹಚ್ಚಿಕೊಂಡಿದ್ದಾರೆ. ಜೆಡಿಎಸ್ ಮಾಜಿ ಚೆಡ್ಡಿ ಡ್ರೈವರ್ ಶಿವಾನಂದ ನಾಯ್ಕನೇ ತನ್ನ ಕ್ಯಾಂಡಿಡೇಟ್ ಎಂದು ಘೋಷಿಸಿ ಅಖಾಡಕ್ಕೆ ಬಿಟ್ಟಿದೆ. ಬಿಜೆಪಿಯ ಹಾಲಿ ನಾಲಾಯಕ್ ಎಂಪಿ ಅನಂತಕುಮಾರ್ ಹೆಗಡೆ ಯಾನೆ ಅನಂತ್ಮಾಣಿಗೆ ಟಿಕೆಟ್ ತಪ್ಪಿಸುವ ತಂತ್ರಗಾರಿಕೆ ಒಳಗೊಳಗೇ ಬಿರುಸಾಗಿದ್ದರೂ ಸಿಟ್ಟಿಂಗ್ ಸಂಸದನೆಂಬ 'ಸಾಮರ್ಥ್ಯ'ದಿಂದ ತನಗೇ ಛಾನ್ಸ್ ಗ್ಯಾರಂಟಿಯೆಂಬ ಭಾವನೆಯಿಂದ ಆತ ಸಮರಾಂಗಣದಲ್ಲಿ ನಿಂತು ತೊಡೆ ತಟ್ಟುತ್ತಿದ್ದಾನೆ. ಅತ್ತ ಕಾಂಗ್ರೆಸ್‌ನ ನಾಲ್ಕು ದಿಕ್ಕಿನಲ್ಲಿ ನಾಲ್ಕು ಟಿಕೆಟ್ ಆಕಾಂಕ್ಷಿಗಳು ನಿಂತು ಭರ್ಜರಿ ಲಾಬಿ ನಡೆಸುತ್ತಿದ್ದಾರೆ.

ಜೆಡಿಎಸ್ ಉತ್ತರ ಕನ್ನಡ ಲೋಕಸಭೆ ಸಮರದ ಅಂಕಣದಲ್ಲಿ ಜೆಡಿಎಸ್ ಲೆಕ್ಕಕ್ಕುಷ್ಟೇ ಎಂಬುದು ಸಾಮಾನ್ಯ ರಾಜಕೀಯ ಲೆಕ್ಕಾಚಾರ. ಆದರೆ ಈ ಗತಿಗೇಡಿ ಪಕ್ಷ ಕೆಲದಿನದಿಂದ ಇದ್ದಕ್ಕಿದ್ದಂತೆ ಸದ್ದು-ಸುದ್ದಿ ಮಾಡಲಾರಂಭಿಸಿದೆ! ಇದಕ್ಕೆ ಕಾರಣ -ಮಾಜಿ ಮಂತ್ರಿ- ಮಾಜಿ ಚೆಡ್ಡಿ ಚತುರ ಶಿವಾನಂದ ನಾಯ್ಕ್ ಎಂಬ ದೀವರ ಸ್ವಯಂಘೋಷಿತ ಕುಲತಿಲಕನ ಜೆಡಿಎಸ್ ಪ್ರವೇಶ ಪ್ರಸಂಗ!! ಈ ಶಿವಣ್ಣ ಭಟ್ಕಳದ ಐತಿಹಾಸಿಕ ಕೋಮು ಗಲಭೆಯ ಬೈ-ಪ್ರಾಡಕ್ಟ್; ಒಂದು ಕಾಲದಲ್ಲಿ ಉತ್ತರ ಕನ್ನಡದ ಹಿಂದೂ ಗ್ಯಾಂಗಿನ ಕಂಟಕಕಾರಿ ಪುಂಡನಾಗಿದ್ದಾತ. ಶಿವಣ್ಣ ಹಿಂಸೋನ್ಮಾದಿ 'ಗುರು' ಅನಂತ್ಮಾಣಿಯ ಹೊಡಿ-ಬಡಿ-ಕಡಿ ಪಡೆಯ ಶೂದ್ರ ಸೇನಾನಿಯಾಗಿ ಮಾಡಿದ್ದ ಮಸಲತ್ತುಗಳು ಎಂದೂ ಮರೆಯದ ದುಃಸ್ವಪ್ನ!! ಶಿವಣ್ಣ-ಅನಂತ್ಮಾಣಿ ಜತೆಯಾಗಿ ಕಾಣಿಸಿಕೊಂಡರೆಂದರೆ, ಭಟ್ಕಳ-ಹೊನ್ನಾವರದ ಯಾವುದಾದರೂ ಒಂದು ಕಡೆ ಕೋಮು ಕಿಚ್ಚು ಹೊತ್ತಿಕೊಂಡಂತೆಯೇ ಎಂದು ಜನ ವ್ಯಾಖ್ಯಾನಿಸುತ್ತಿದ್ದರು. ಅಂಥ ಖತರ್‌ನಾಕ್ ಶೂದ್ರ-ಬ್ರಾಹ್ಮಣ ಕಾಂಬಿನೇಷನ್ ಅದಾಗಿತ್ತು.


ಈ ಜೋಡಿಯನ್ನು ಹಿಂದೂತ್ವ ಬೆಸೆದಿತ್ತು. ಆದರೆ ಬ್ರಾಹ್ಮಣಿಕೆ ವಿಷ ಎದೆಯಲ್ಲಿ ತುಂಬಿಟ್ಟುಕೊಂಡು ಹಿಂದೂತ್ವದ ಹುಸಿ ಭಾಷೆ ಬಳಸುತ್ತಿದ್ದ ಅನಂತ್ಮಾಣಿಯ ಆರೆಸ್ಸೆಸ್ ಪಡೆಯ ಅಸಲೀ ಅವತಾರ ಶಿವಣ್ಣನಿಗೆ ಅರ್ಥವಾಗಿದ್ದು ಆತ ಅಚಾನಕ್ ಕೋಜಾ ಸರ್ಕಾರದಲ್ಲಿ ಮಂತ್ರಿಯಾದಾಗ! ಈ ಶೂದ್ರ ಮಂತ್ರಿಯಾಗಿದ್ದು ಆತನ ಪರಮ ಪೂಜ್ಯ ಬ್ರಾಹ್ಮಣ ಬಾಸ್‌ಗಳಿಗೆ ಸಹಿಸಲಾಗಲಿಲ್ಲ. ಅನಂತ್ಮಾಣಿ-ಕಾಗೇರಿ-ಕರ್ಕಿ-ವಗೈರೆ ವಿಪ್ರರ ಬ್ರಾಹ್ಮಣಿಕೆ ಬಿರುಸಾದಂತೆ ಮಂತ್ರಿ ಶಿವಣ್ಣನ 'ನಾಮಧಾರಿಯತೆ'ಯೂ ಸೆಟೆದು ನಿಂತಿತು. ಅಸೂಯೆಗೆ ಬಿದ್ದ ಬ್ರಾಹ್ಮಣ ಬ್ರಿಗೇಡ್ ಶೂದ್ರ ಶಿವಣ್ಣನ ಆಹುತಿ ಪಡೆದೇಬಿಟ್ಟಿತು. ಆಗಾಯ್ತು ಶಿವಣ್ಣನಿಗೆ ಬಿಜೆಪಿಯ ಗರ್ಭಗುಡಿ ಸಂಸ್ಕೃತಿಯ ಸಾಕ್ಷಾತ್ ದರ್ಶನ!!

ಮಾಜಿ ಶಾಸಕನಾಗಿ ವನವಾಸಕ್ಕೆ ತಳ್ಳಲ್ಪಟ್ಟ ಶಿವಣ್ಣನಲ್ಲಿ ಶೂದ್ರ ಪ್ರಜ್ಞೆ ಕೆರಳಿತು. ಗುರುವಿಗೆ ತಿರುಮಂತ್ರ ಹಾಕಲಾರಂಭಿಸಿದ. ಅನಂತ್ಮಾಣಿಯ ಅವಸಾನವೇ ಆತನ ಒಂದೇ ಗುರಿಯಾಯ್ತು. ಈ ಗುರು-ಶಿಷ್ಯರ ಹಾವು-ಮುಂಗುಸಿ ಆಟ ಎಲ್ಲಿಗೆ ಹೋಯ್ತೆಂದರೆ, ಗುರು ಪಾರ್ಲಿಮೆಂಟಿಗೆ ಸ್ಪರ್ಧಿಸಿದರೆ ಶಿಷ್ಯ, ಶಿಷ್ಯ ಅಸೆಂಬ್ಲಿಗೆ ನಿಂತರೆ ಗುರು ಸೋಲಿಸಲು ಶ್ರಮಿಸುವುದು ಕಾಯಂ ಕಸರತ್ತಾಗಿ ಹೋಯ್ತು ಸ್ಥಳೀಯ ಬಿಜೆಪಿಯಲ್ಲಿ. ಇದು ಜಿಲ್ಲೆಯ ಪರಂಪರಾಗತ ಹೈಗರು-ದೀವರ ಮೇಲಾಟಕ್ಕೆ ರಣೋತ್ಸಾಹ ತುಂಬಿಬಿಟ್ಟಿತು! ಅಂತಿಮವಾಗಿ ಶಿವಣ್ಣ ಬ್ರಾಹ್ಮಣಶಾಹಿ ಬಿಜೆಪಿಯಲ್ಲಿ ಉಳಿಯಲಾಗದ ಪರಿಸ್ಥಿತಿ ನಿರ್ಮಾಣವಾಯ್ತು. ಯಡ್ಡಿ ಕಾಲ ಕೀರ್ತಿಯಲ್ಲಿ ನಿಗಮ ಒಂದರ ಅಧ್ಯಕ್ಷನಾಗಿದ್ದುಕೊಂಡೇ ಕಾಂಗ್ರೆಸ್-ಜೆಡಿಎಸ್ ಕದ ತಟ್ಟಿದ ಶಿವಣ್ಣನಿಗೆ ಕೆಜೆಪಿಯೇ ಗತಿಯಾಯ್ತು.


ಕೆಜೆಪಿಯಿಂದ ಭಟ್ಕಳದಲ್ಲಿ ಸ್ಪರ್ಧಿಸಿ ಪಲ್ಟಿ ಹೊಡೆದ ಶಿವಣ್ಣ ಯಡ್ಡಿ ಮಹಾರಾಜ ಮರಳಿ ಬಿಜೆಪಿ ಪಾಲಾದಾಗ ತಬ್ಬಲಿಯಂತಾಗಿ ಹೋದ. ಅಚ್ಚುಮೆಚ್ಚಿನ ಕಾಂಗ್ರೆಸ್ ಸೇರಲು ಎಐಸಿಸಿ ಪ್ರಧಾನ ಕಾರ್ಯದರ್ಶಿ ಹರಿಪ್ರಸಾದ್, ಮಾರ್ಗರೆಟ್ ಆಳ್ವರಂಥ ಶಕ್ತಿಶಾಲಿಗಳ ಕಾಲು ಹಿಡಿದು ಹಿಕಮತ್ತು ಮಾಡಿದರೂ ಯಶ ಮಾತ್ರ ಸಿಗಲೇ ಇಲ್ಲ. ಆದರೆ ಜೆಡಿಎಸ್‌ನ



ದೇಶಪಾಂಡೆ



ಬಿ.ಕೆ. ಹರಿಪ್ರಸಾದ್



ಅನಂತಕುಮಾರ್ ಹೆಗ್ಡೆ

ಉದಯೋನ್ಮುಖ ಈಡಿಗ ಮುಖಂಡ ಮಧು ಬಂಗೆ ಈ ಸ್ವ-ಜಾತಿ ಸರದಾರ ಶಿವಣ್ಣನ ಬಗ್ಗೆ ಒಂಥರಾ ಕರುಣೆ. ಆತ ಶಿವಣ್ಣನನ್ನು ಜೆಡಿಎಸ್‌ಗೆ ಕರೆತರಲು ತರತರದ ಸರ್ಕಸ್ ಮಾಡುತ್ತಲೇ ಇದ್ದ ಹತಾಶ ಶಿವಣ್ಣನಿಗೆ ವೈರಿ ಅನಂತ್ಮಾಣಿಯ ಹಣಿಯಲು ಪಾರ್ಟಿಯೊಂದರ ಅವಶ್ಯಕತೆಯಿತ್ತು. ಅನಿವಾರ್ಯವಾಗಿ ಜೆಡಿಎಸ್‌ಗೆ ಎಂಟ್ರಿ ಹೊಡೆದ ಶಿವಣ್ಣ, ಅಜ್ಜನ ಊರು ಉತ್ತರ ಕನ್ನಡ ಜಿಲ್ಲೆಯಲ್ಲಿ ಜೆಡಿಎಸ್ ಕಟ್ಟುವ ಹೊಣೆ ಹೊತ್ತಿದ್ದ ಮಧು ಬಂಗೆ ಮಾಜಿ ಮಂತ್ರಿ ಶಿವಣ್ಣ 'ಶಕ್ತಿಶಾಲಿ'ಯಾಗಿ ಕಂಡಿದ್ದು ಸಹಜವಾಗೇ ಇದೆ.

ಉತ್ತರ ಕನ್ನಡ ಕ್ಷೇತ್ರದಲ್ಲಿ ಜೆಡಿಎಸ್‌ನ ಎಂಪಿ ಕ್ಯಾಂಡಿಡೇಟ್ ಮಾಡುವ ಭರವಸೆ ಮಧು ಬಂ ಆ ಪಾರ್ಟಿ ದೊರೆಗಳಿಂದ ಕೊಡಿಸುತ್ತಿದ್ದಂತೆಯೇ ಶಿವಣ್ಣ ಹಿಂದೂ-ಮುಂದೂ ಯೋಚಿಸದೇ ಪಕ್ಷಾಂತರ ಮಾಡಿದ್ದಾನೆ. ಮಾಜಿ ಮಂತ್ರಿಯಾದ ಶಿವಣ್ಣನಲ್ಲಿರುವ ಕಪ್ಪು ಕಾಸಿನ ಮೇಲೆ ಕಣ್ಣಿಟ್ಟಿರುವ ಜಿಲ್ಲಾ ಜೆಡಿಎಸ್‌ನ ಜಬರ್ದಸ್ತ್ ಲೀಡರ್‌ಗಳಾದ ಸುನಿಲ್ ಹೆಗಡೆ, ದಿನಕರ ಶೆಟ್ಟಿ, ವಿ.ಡಿ. ಹೆಗಡೆ... ವಗೈರೆಗಳು ಆತ ಗೆಲ್ಲುವ ಕುದುರೆ ಎಂದು ಸುಳ್ಳು-ಸುಳ್ಳೇ ತಾರೀಫು ಮಾಡಿ ಪುಸಲಾಯಿಸುತ್ತಿದ್ದಾರೆ. ಪೆದ್ದು ಶಿವಣ್ಣ ಸ್ವಜಾತಿ ದೀವರ ಓಟು 3 ಲಕ್ಷಕ್ಕೂ ಹೆಚ್ಚಿದೆಯೆಂದು ತಪ್ಪು ಲೆಕ್ಕಾಚಾರ ಹಾಕಿ ಕುಳಿತಿದ್ದಾನೆ. ಸ್ವ-ಜಾತಿಯಷ್ಟೇ ಮುಸ್ಲಿಮರು ಕ್ಷೇತ್ರದಲ್ಲಿರುವುದರಿಂದ ಹಿತ ಶತ್ರುವಾಗಿ ಕಾಡಿದ ಅನಂತ್ಮಾಣಿಯನ್ನು ಮಣ್ಣು ಮುಕ್ಕಿಸಿ ತಾನು ದಿಲ್ಲಿ ವಿಮಾನ ಏರುವುದು ಖಾತ್ರಿಯೆಂದು ಕನಸು ಕಾಣುತ್ತಿದ್ದಾನೆ.

ಆದರೆ ವಾಸ್ತವ ಶಿವಣ್ಣ ಎಣಿಸಿದಷ್ಟು ಸಲೀಸಾಗಿಲ್ಲ. ಬಿಜೆಪಿಯಲ್ಲಿ ತನಗೆ ಶನಿಯಂತೆ ಕಾಡಿದ ಅನಂತ್ಮಾಣಿ ಮತ್ತು ಕಾಂಗ್ರೆಸ್ ಸೇರದಂತೆ ತಡೆಯೊಡ್ಡಿದ ದೇಶಪಾಂಡೆ ಮೇಲೆ ಸೇಡು ತೀರಿಸಿಕೊಳ್ಳಲು ಜೆಡಿಎಸ್ ಅಭ್ಯರ್ಥಿಯಾಗುವ ಅವಸರದ ನಿರ್ಧಾರಕ್ಕೆ ಬಂದಿರುವ ಶಿವಣ್ಣನ ಗಣಿತ ಉಲ್ಟಾ-ಪಲ್ಟಾ ಆಗುವ ಸಾಧ್ಯತೆಯೇ ಹೆಚ್ಚು. ವಾಸ್ತವವಾಗಿ ಶಿವಣ್ಣ ಜಾತಿ ಓಟುಗಳಿರುವುದೇ ಒಂದೂವರೆಯಿಂದ ಒಂದೂ ಮುಕ್ಕಾಲು ಲಕ್ಷವಷ್ಟೇ. ಕಾಂಗ್ರೆಸ್‌ನಿಂದ ಬಿ.ಕೆ. ಹರಿಪ್ರಸಾದ್ ಅಥವಾ ಭೀಮಣ್ಣ ನಾಯ್ಕ ಸ್ಪರ್ಧಿಸಿದರೆ ಈ ದೀವರ ಓಟಲ್ಲಿ ಬಹುಪಾಲು ಅವರಿಗೇ ದಕ್ಕುವುದು ಖಂಡಿತ. ಕ್ಷೇತ್ರದಲ್ಲಿ ಪ್ರಥಮ ಬಹುಸಂಖ್ಯಾತರೆಂದರೆ ಮುಸ್ಲಿಮರು. ಸರಿಸುಮಾರು ಎರಡು ಲಕ್ಷ ಮತ ಸಾಬರದಿದೆ. ಜಿಲ್ಲಾ ಜೆಡಿಎಸ್‌ನತ್ತ ಮುಸ್ಲಿಮರಿಗೆ ಅಂಥ ಸೆಳೆತವೇನಿಲ್ಲ. ಇದ್ದಿದ್ದರೆ ಶಿರಸಿಯಲ್ಲಿ ಸಣ್ಣ ಅಂತರದಲ್ಲಿ ಸೋತ ಶಶಿಭೂಷಣ ಹೆಗಡೆ ಜೆಡಿಎಸ್‌ನ ಶಾಸಕರಾಗುತ್ತಿದ್ದರು.

ಹಾಗೆಯೇ ದೀವರು ಇರುವುದೇ ಉತ್ತರ ಕನ್ನಡದ ಎಂಟು ಅಸೆಂಬ್ಲಿ ಸೆಗ್ಮೆಂಟುಗಳ ಪೈಕಿ ನಾಲ್ಕು ಕಡೆಯಲ್ಲಷ್ಟೇ. ಈ ದೀವರ ಓಟೊಂದನ್ನೇ ನೆಚ್ಚಿ ಶಿವಣ್ಣನಿಂದ ಗೆಲ್ಲಲು ಸಾಧ್ಯವೇ ಇಲ್ಲ. ಕಳೆದ ಬಾರಿ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಶಿರಸಿ, ಕುಮಟಾ, ಭಟ್ಕಳ ಕ್ಷೇತ್ರದಲ್ಲಿ ಜೆಡಿಎಸ್ ಗಣನೀಯ ಮತ ಪಡೆದಿದೆ ನಿಜ. ಆದರೆ ಅದೆಲ್ಲಾ ಅಲ್ಲಿಯ ಜೆಡಿಎಸ್ ಅಭ್ಯರ್ಥಿಗಳ ವೈಯಕ್ತಿಕ ತಾಕತ್ತೇ ಹೊರತು ಪಕ್ಷದ್ದಲ್ಲ. ಈ ಪರಾಜಿತ ಪರಾಕ್ರಮಿಗಳಿಂದ ಲೋಕಸಭೆ ಅಭ್ಯರ್ಥಿಗೆ ಮತ ದಂಡಿಯಾಗಿ ಕೊಡಿಸಲು ಆಗದು. ಅಂಥ ಪ್ರಭಾವಿಗಳು ಅವರ್‍ಯಾರೂ ಅಲ್ಲ. ಕಳೆದ ಲೋಕಸಭೆ ಎಲೆಕ್ಷನ್‌ನಲ್ಲಿ ಅಂದು ಹಳಿಯಾಳ ಶಾಸಕನಾಗಿದ್ದ- ಇಂದು ಜೆಡಿಎಸ್‌ನ ರಾಜ್ಯ ಕಾರ್ಯಾಧ್ಯಕ್ಷನಾಗಿರುವ ಸುನಿಲ್ ಹೆಗ್ಡೆಯ ತಂದೆ- ಮಾಜಿ ಎಮ್ಮೆಲ್ಸಿ ವಿ.ಡಿ. ಹೆಗಡೆಯೇ ಜೆಡಿಎಸ್ ಉಮೇದುವಾರನಾಗಿದ್ದರು. ಆಗ ವಿ.ಡಿ. ಹೆಗಡೆಗೆ ಬಂದಿದ್ದು 70 ಸಾವಿರ ಚಿಲ್ಲರೆ ಮತಗಳಷ್ಟೇ. ಅಪ್ಪನಿಗೇ ಮತ ಹಾಕಿಸಲಾಗದ ಸುನಿಲ್ ಹೆಗ್ಡೆಯಿಂದ ಅಪರಿಚಿತ ಶಿವಣ್ಣನಿಗೆ ಹಳಿಯಾಳ-ಜೋಯಿಡಾದಲ್ಲಿ ಓಟು ಹಾಕಿಸಲಾದೀತಾ? ಇಂಥದೇ ಹೇತ್ಲಾಂಡಿ ಪರಿಸ್ಥಿತಿ ಖಾನಾಪುರ-ಕಿತ್ತೂರು-ಕಾರವಾರಗಳಲ್ಲಿದೆ.

ಕಾಂಗ್ರೆಸ್‌ನಿಂದ ದೇಶಪಾಂಡೆ ಮಗ ಪ್ರಶಾಂತ್ ಎಂಬ ಕೊಂಕಣಿ ಬ್ರಾಹ್ಮಣ, ಬಿಜೆಪಿಯಿಂದ ಅನಂತ್ಮಾಣಿ ಎಂಬ ಅನಾಹುತಕಾರಿ ಹವ್ಯಕ ಬ್ರಾಹ್ಮಣ ಸ್ಪರ್ಧಿಸುವುದರಿಂದ ತನಗೆ ಬ್ರಾಹ್ಮಣೇತರರು ಒಲಿಯುತ್ತಾರೆಂಬುದು ಶಿವಣ್ಣನ ಭಾವನೆ. ಅನಂತ್ಮಾಣಿಯನ್ನು ಮಾಜಿ ಮಾಡುವ ಹಠಕ್ಕೆ ಬಿದ್ದಿರುವ ಶಿವಣ್ಣ ತಾನು ಅನಂತ್ಮಾಣಿ-ದೇಶಪಾಂಡೆ ವಿರೋಧಿ ಅಲೆಯಲ್ಲಿ ತೇಲಿ ದಿಲ್ಲಿ ತಲುಪುತ್ತೇನೆಂದು ಪ್ಲಾನ್ ಹೊಸೆಯುತ್ತಿದ್ದಾರೆ. ಆದರೆ ಜೆಡಿಎಸ್‌ಗೆ ಗೆಲ್ಲುವ ಅವಕಾಶವೇ ಇಲ್ಲ. ಇಲ್ಲೇನಿದ್ದರೂ ಕಾಂಗ್ರೆಸ್-ಬಿಜೆಪಿ ನೇರ ಹಣಾಹಣಿ. ದೀವರ ಶಿವಣ್ಣ ಬಲಗೊಂಡಂತೆ ಬಿಜೆಪಿಗೇ ಲಾಭ ಜಾಸ್ತಿ! ಶಿವಣ್ಣ ಅದೆಷ್ಟೇ ತಿಪ್ಪರಲಾಗ ಹಾಕಿದರೂ ಆತ ಅಬ್ಬಬ್ಬಾ ಎಂದರೆ 80 ರಿಂದ 90 ಸಾವಿರ ಮತ ಗಳಿಸಬಹುದಷ್ಟೇ!

ಹೆಚ್ಚು-ಕಡಿಮೆ ದೀವರಷ್ಟೇ ಮತ ಬ್ಯಾಂಕ್ ಹೊಂದಿರುವ ಬ್ರಾಹ್ಮಣರು ಅನಂತ್ಮಾಣಿ ಬಗ್ಗೆ ಅದೆಷ್ಟೇ ತಿರಸ್ಕಾರ-ತಾತ್ಸಾರದಲ್ಲಿದ್ದರೂ ಬಿಜೆಪಿಯ ಜನಿವಾರ ಸಂಸ್ಕೃತಿ ಕಂಡು ಕರಗುತ್ತಿದೆ. ಕಾಂಗ್ರೆಸ್‌ನ ಹರಿಪ್ರಸಾದ್-ಭೀಮಣ್ಣ ಪ್ರಶಾಂತ ದೇಶಪಾಂಡೆ ಅಥವಾ ನಿವೇದಿತ್ ಆಳ್ವರಿಗಿಂತ 'ಅನಂತ್ಮಾಣಿಯೇ ಬೆಟರ್' ಎಂಬುದು ಬ್ರಾಹ್ಮಣರ ಪಕ್ಕಾ ನಿರ್ಧಾರ. ಉತ್ತರ ಕನ್ನಡದ ಜಾತಿ ಆಧಾರಿತ ಅಖಾಡವೇ ಹಾಗಿದೆ. ಕಾಂಗ್ರೆಸ್‌ನಿಂದ ಹರಿಪ್ರಸಾದ್ ಅಥವಾ ಭೀಮಣ್ಣ ಅಭ್ಯರ್ಥಿಯಾದರೆ ದೀವರು ಜೆಡಿಎಸ್‌ನ ಸೋಲುವ ಅಭ್ಯರ್ಥಿ ಶಿವಣ್ಣನಿಗೆ ಮತ ಹಾಕಲಾರರು. ಸ್ವಜಾತಿ ಓಟು ಪಡೆಯುವ ತಾಕತ್ತು ಶಿವಾನಂದ ನಾಯ್ಕ್‌ಗಿಂತ ಹರಿಪ್ರಸಾದ್ ಅಥವಾ ಭೀಮಣ್ಣ ನಾಯ್ಕ್‌ಗೇ ಹೆಚ್ಚಿದೆ. ಪ್ರಶಾಂತ ದೇಶಪಾಂಡೆಗೆ ಕಾಂಗ್ರೆಸ್ ಟಿಕೆಟ್ ಸಿಕ್ಕರಷ್ಟೇ ದೀವರು ಸಾರಾಸಗಟಾಗಿ ಶಿವಣ್ಣನ ಪರ ನಿಲ್ಲಬಹುದು.

ಎತ್ತಿಂದೆತ್ತ ಸಾಧ್ಯಾಸಾಧ್ಯತೆಗಳ ತಾಳೆ ಹಾಕಿ ನೋಡಿದರೂ ಶಿವಣ್ಣನ ದುಡುಕು ನಿರ್ಧಾರದಿಂದ ಆತನಿಗೆ ಯಾವ ಲಾಭವೂ ಇಲ್ಲ; ಮಾನ-ಧನ ಹಾನಿ ಆತನಿಗೆ ಖಂಡಿತ. ಈ ಮಾಜಿ ಚೆಡ್ಡಿಯ ಆಗಮನದಿಂದ ಜೆಡಿಎಸ್‌ಗಂತೂ ಯಾವ ಪ್ರಯೋಜನವೂ ಆಗದು. ಜೆಡಿಎಸ್‌ನ ಶಿವಾನಂದ ನಾಯ್ಕ ಬಲಗೊಂಡಂತೆ ಕಾಂಗ್ರೆಸ್ ವೀಕ್ ಆಗುತ್ತದೆ. ಬಿಜೆಪಿಯ ಅನಂತ್ಮಾಣಿ ಚೇತರಿಸಿಕೊಳ್ಳುತ್ತಾನೆ. ಮಜಾಯೆಂದರೆ, ಯಾರನ್ನು ಸೋಲಿಸುವ ಹಠದಿಂದ ಪಾರ್ಲಿಮೆಂಟ್ ಅಖಾಡಕ್ಕೆ ಶಿವಣ್ಣ ಧುಮುಕಿದ್ದಾನೋ, ಆತನಿಗೇ ಈತನ ಸ್ಪರ್ಧೆಯಿಂದ ಒಂಚೂರು ಅನುಕೂಲವಾಗುವಂತಾಗಿದೆ! ಇಷ್ಟಾದರೂ ಅಧಿಕ ಪ್ರಸಂಗಿ-ಕರ್ಮಕೇಡಿ ಅನಂತ್ಮಾಣಿ ಮತ್ತೆ ಗೆಲ್ಲುವುದು ಕಷ್ಟ. ಭಟ್ಕಳದ ಬುಡದಿಂದ ಖಾನಾಪುರದ ತುದಿವರೆಗೆ ಆತನ ಮಾಜಿ ಮಾಡಿ ಮನೆಗೆ ಕಳಿಸಬೇಕೆಂಬ ಸಿಟ್ಟು ಮಡುಗಟ್ಟಿದೆ. ಮೋದಿ ಗಾಳಿ ಅನಂತ್ಮಾಣಿ ಪಾಲಿಗೆ ಸುಳಿಗಾಳಿಯಾಗಿ ಶಿರಸಿಯಲ್ಲೇ ಗಿರಕಿ ಹೊಡೆಸಿ ಮಣ್ಣು ಪಾಲಾಗಿಸುವ ಸಾಧ್ಯತೆ ಈಗಲೇ ಗೋಚರಿಸುತ್ತಿದೆ.

ಶಿವಣ್ಣ ತಾನೇ ಜೆಡಿಎಸ್ ಹುರಿಯಾಳೆಂದು ಕ್ಷೇತ್ರದಾದ್ಯಂತ ಅಂಡಲೆಯಲು ಆರಂಭಿಸಿದ್ದಾನೆ. ಆದರೆ ಆತನ ಮುಖದಲ್ಲ್ಯಾಕೋ ಧೈರ್ಯದ ಕಳೆಯೇ ಕಾಣಿಸದು. ಕಾಂಗ್ರೆಸ್‌ನಿಂದ ಸ್ವಜಾತಿ (ದೀವರು) ಹರಿಪ್ರಸಾದ್ ಅಥವಾ ಭೀಮಣ್ಣ ನಿಂತರೆ ಏನು ಮಾಡೋದೆಂಬ ಚಿಂತೆ ಆತನ ಕಾಡುತ್ತಿದೆ; ಪೆದ್ದು ಶಿವಣ್ಣ ಫಜೀತಿಗೆ ಬಿದ್ದಿದ್ದಾನೆ! ಪ್ರಬಲ ಕಾಂಗ್ರೆಸ್-ಬಿಜೆಪಿ ನಡುವೆ ಜೆಡಿಎಸ್‌ನ ಶಿವಣ್ಣ ಆಟಕ್ಕುಷ್ಟೇ!!

● ನಹುಷ

ಭೀಮಣ್ಣನಿಗೆ ಮಣೆ?!

ಉತ್ತರ ಕನ್ನಡ ಕಾಂಗ್ರೆಸ್ ಟಿಕೆಟ್‌ಗಾಗಿ ಚತುಷ್ಕೋನ ಚಮತ್ಕಾರ ನಡೆದಿದೆ. ಮಂತ್ರಿ ದೇಶಪಾಂಡೆ ಮಗ ಪ್ರಶಾಂತ ದೇಶಪಾಂಡೆ, ಮಾರ್ಗರೆಟ್ ಆಳ ಸುಪುತ್ರ ನಿವೇದಿತ್ ಆಳ್ವ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಬಿ.ಕೆ. ಹರಿಪ್ರಸಾದ್ ನಡುವೆ ಆರಂಭದಿಂದಲೂ ಟಿಕೆಟ್ ಪೈಪೋಟಿ ನಡೆಯುತ್ತಿತ್ತು. ದೇಶಪಾಂಡೆ ತನ್ನ ಮುದ್ದು ಪೆದ್ದು ಮಗನಿಗಾಗಿ ಎನ್‌ಸಿಪಿ ಲೀಡರ್ ಪ್ರಫುಲ್ ಪಟೇಲ್ ಮೂಲಕ ದಿಲ್ಲಿಯಲ್ಲಿ ಲಾಬಿ ಮಾಡಿಸುತ್ತಿದ್ದಾರೆ. ಈ ಕೇಂದ್ರ ಮಂತ್ರಿ ಪಟೇಲ್ ದೇಶಪಾಂಡೆಯ ಬೀಗ. ಅಂದರೆ ಪ್ರಶಾಂತ ದೇಶಪಾಂಡೆ ಧರ್ಮಪತ್ನಿ ಪಟೇಲ್‌ರ ಪುತ್ರಿ. ಹಾಗಾಗಿ ಅಳಿಯನಿಗಾಗಿ ಪಟೇಲ್ ಕಾಂಗ್ರೆಸ್ ಕಾರಿಡಾರಲ್ಲಿ ಲಗು ಬಗೆಯ ಓಡಾಟ ನಡೆಸಿದ್ದಾರೆ. ಮಹಾರಾಷ್ಟ್ರದಲ್ಲಿ ಎನ್‌ಸಿಪಿಗೆ ಬಿಟ್ಟು ಕೊಡುವ ಒಂದು ಸೀಟು ಕಾಂಗ್ರೆಸ್ ಕಡಿಮೆ ಪಡೆದರೂ ಪರವಾಗಿಲ್ಲ, ತನ್ನ ಅಳಿಯನಿಗೆ ಉತ್ತರ ಕನ್ನಡದಲ್ಲಿ ಚಾನ್ಸ್ ಕೊಡಿ ಎಂದು 'ಹೊಂದಾಣಿಕೆ' ನಡೆಸಿದ್ದಾರೆ.


ರಾಜಸ್ತಾನದ ರಾಜ್ಯಪಾಲೆ ಮಾರ್ಗಿ ತನ್ನೆಲ್ಲ ಪ್ರಭಾವ ಖುದ್ದು ಸೋನಿಯಾ ಮೇಡಮ್ ಮೇಲೆ



ಪ್ರಯೋಗಿಸುತ್ತಿದ್ದಾರೆ. ಆದರೆ ಈ ದೊಡ್ಡವರ ಒಣ ಪ್ರತಿಷ್ಠೆಯಲ್ಲಿ ಸುಲಭವಾಗಿ ಗೆಲ್ಲುವ ಉತ್ತರ ಕನ್ನಡವನ್ನು ಕಳೆದುಕೊಳ್ಳಲು ಸಿಎಂ ಸಿದ್ದು ಸಿದ್ಧರಿಲ್ಲ. ಅವರ ಅಹಿಂದ್ ಟಿಕೆಟ್ ಹಂಚಿಕೆ ಪ್ರಕಾರ ಉತ್ತರ ಕನ್ನಡ ಈಡಿಗರಿಗೆ ಮೀಸಲು. ಅಂದರೆ ಹರಿಪ್ರಸಾದ್ ಪರ ಸಿದ್ದು- ಪಟಾಲಮ್ ವಕಾಲತ್ತು ಮಾಡುತ್ತಿದೆ. ಹರಿ ಕೂಡ ದೇಶಪಾಂಡೆ- ಮಾರ್ಗಿ ಮೇಲಾಟದ ಚಿತ್ರಣ ಕೊಟ್ಟು ಅವರ ಮಕ್ಕಳಿಗೆ ಟಿಕೆಟ್ ಕೊಟ್ಟರೆ ಕಾಂಗ್ರೆಸ್‌ಗೆ ಆಗುವ ಹಾನಿ ವಿವರಿಸಿದ್ದಾರೆ.

ಹರಿ ವರ್ಚಸ್ಸು ಮಾರ್ಗಿ-ದೇಶಪಾಂಡೆಗಳ ಕಳೆ ಗುಂದಿಸಿದೆ ದಿಲ್ಲಿಯಲ್ಲಿ. ಹೀಗಾಗಿ ಈಗ ಮಾರ್ಗಿ-ದೇಶಪಾಂಡೆ ಒಂದಾಗಿ ಹರಿ ಹೊರಗಿನವರು, ಉತ್ತರ ಕನ್ನಡದಲ್ಲಿ ಹರಿಗೆ ನೆಲೆಯಿಲ್ಲ ಅನ್ನುತ್ತಿದ್ದಾರೆ. ವಾಸ್ತವಿಕವಾಗಿ ದೇಶಪಾಂಡೆ-ಮಾರ್ಗಿಯ ರೆಡಿಮೇಡ್ ಲೀಡರಿಕೆಯ ಮಕ್ಕಳಿಗಿಂತ ಹರಿ ಉತ್ತರ ಕನ್ನಡದಲ್ಲಿ ಪರಿಚಿತ. ಎಲೆಕ್ಷನ್‌ಗಾಗಿಯೇ ಜಿಲ್ಲೆಗೆ ಬಂದಿರುವ ಆಗಂತುಕ ನಿವೇದಿತ್ ಮತ್ತು ಪ್ರಶಾಂತ್‌ಗಿಂತ ಹರಿ ಜನಪ್ರಿಯ. ತಾನು ಹೊರಗಿನವನೆಂದು ಹೇಳಿ ಟಿಕೆಟ್ ತಪ್ಪಿಸುತ್ತಿರುವ ದೇಶಪಾಂಡೆ-ಮಾರ್ಗಿಗೆ ಪಾಠ ಕಲಿಸಲು ಹರಿ ಈಗ ಉತ್ತರ ಕನ್ನಡ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಭೀಮಣ್ಣ ನಾಯ್ಕ್ ಎಂಬ ದೀವರ (ಈಡಿಗ) ಸ್ಥಳೀಯ ಪ್ರಭಾವಿ ಮುಖಂಡನಿಗೆ ಛಾನ್ಸ್ ಕೊಡುವಂತೆ ಕೇಳುತ್ತಿದ್ದಾರೆ. ಸ್ಥಳೀಯ-ಹಿರಿಯ ಭೀಮಣ್ಣನ ಹೆಸರು ಮುಂಚೂಣಿಗೆ ಬರುತ್ತಿದ್ದಂತೆಯೇ ದೇಶಪಾಂಡೆ ಮತ್ತು ಮಾರ್ಗಿ ಫಜೀತಿಗೆ ಬಿದ್ದಿದ್ದಾರೆ. ಭೀಮಣ್ಣ ಅನಿವಾರ್ಯ ಅಭ್ಯರ್ಥಿ ಆಗುವ ಅವಕಾಶ ಹೆಚ್ಚಾಗಿದೆ. ●

ಯಡ್ಡಿ ಟಾಂಗ್- ಡೀವಿ ರಾಂಗ್!



ಉಡುಪಿ-ಚಿಕ್ಕಮಗಳೂರು ಕ್ಷೇತ್ರದ ಬಿಜೆಪಿ ಟಿಕೆಟ್ ಬೇಡವೇ ಬೇಡವೆಂದು ಆರೆಸೆಸ್ ಮುಖಂಡರ ಮುಂದೆ ಹಠ ಹಿಡಿದಿರುವ ಮಾಜಿ ಸಿಎಂ ಸದಾನಂದ ಗೌಡರ ಪೀಕಲಾಟ ದಿನಕ್ಕೊಂದು ಮಜಮಜಾ ಆಯಾಮ ಪಡೆಯುತ್ತಿದೆ. ಬೆಂಗಳೂರು ಉತ್ತರ ಟಿಕೆಟ್‌ಗಾಗಿ ತಿಪ್ಪರಲಾಗ ಹಾಕುತ್ತಿರುವ ಡೀವಿಗೆ ತನ್ನ ಪರ ವಾದಿಸುವವರಿಲ್ಲದೆ ಏಕಾಂಗಿಯಾಗಿ ಚಡಪಡಿಸುತ್ತಿದ್ದಾರೆ. ಡೀವಿ ಬೆಂಗಳೂರು ಉತ್ತರದಲ್ಲಿ ಗೆಲ್ಲುವ ಸಾಧ್ಯತೆ ಹೆಚ್ಚಿರುವುದು ಬಿಜೆಪಿಯ ಡಾನ್ ಅನಂತ್‌ಕುಮಾರ್‌ಗೆ ನಿದ್ದೆಗೆಡಿಸಿದೆ. ಡೀವಿ ಬೆಂಗಳೂರಲ್ಲಿ ಗೆದ್ದರೆ ತನ್ನ ಮಾಜಿ ಸಿಎಂಗಿರಿ ಬಲದಿಂದ ದಿಲ್ಲಿಯಲ್ಲಿ ಬೆಳೆಯುವ ಭಯ ಅನಂತ್‌ಗೆ. ತನ್ನ ಕಲ್ಪಿತ ಮೋದಿ ಸರ್ಕಾರದ ಮಂತ್ರಿಗಿರಿಗೆ ಡೀವಿ ಸಂಚಕಾರ ತಂದು ತಾನೇ ಮಂತ್ರಿಯಾಗಬಹುದೆಂಬ ದೂರಾಲೋಚನೆ ಆತನದು.


ಹಾಗಾಗಿ ಮಾಜಿ ಡಿಸಿಎಂ ಆರ್. ಅಶೋಕ್‌ನನ್ನು ಛೂ ಬಿಟ್ಟಿದ್ದೇ ಅನಂತ್. ಅಶೋಕ್‌ಗೆ ಒಕ್ಕಲಿಗರ ಮೇಲಿರುವ ಪ್ರಭಾವ, ಇಲೆಕ್ಷನ್ ಗೆಲ್ಲುವ ಕಲೆ ಅನಂತ್‌ಗೆ ವರವಾಗಿದೆ. ಅಶೋಕ್‌ಗೆ ಬೆಂಗಳೂರು ಉತ್ತರದಲ್ಲಿ ಛಾನ್ಸ್ ಕೊಟ್ಟರೆ ದಕ್ಷಿಣದಲ್ಲಿ ತನ್ನ ಗೆಲುವಿಗೆ ಸಹಕಾರಿ ಆಗುತ್ತದೆ ಎಂಬುದು ಅನಂತ್ ಗಣಿತ; ಜೊತೆಗೆ ಡೀವಿಗೂ ಛಾನ್ಸ್ ತಪ್ಪಿಸಿದಂತಾಗಿ ತಾನು ಸೇಫ್ ಎಂಬ ಲೆಕ್ಕಾಚಾರ. ಟಿಕೆಟ್ ಆಯ್ಕೆ ಕಮಿಟಿ ಸಭೆಯಲ್ಲಿ ಡೀವಿ ಹೊರಗಿನವನು, ಆತನಿಗೆ ಬೆಂಗಳೂರಲ್ಲಿ ಅವಕಾಶ ಕೊಡಕೂಡದೆಂದು ಅನಂತ್-ಅಶೋಕ್ ಜೋಡಿ ಬಲವಾಗಿ ಆರ್ಗ್ಯುಮೆಂಟ್ ಮಾಡಿತ್ತು. ಆಗ ಡೀವಿ "ನಾನು ಸಿಎಂ ಆದವನು... ಪಾರ್ಟಿ ಅಧ್ಯಕ್ಷ ಆದವನು... ನಾನು ನಿರ್ವಹಿಸಿದ ಹುದ್ದೆ ಆಧಾರದಲ್ಲಿ ನಾನು ಇಡೀ ಕರ್ನಾಟಕದಲ್ಲಿ ಎಲ್ಲಿ ಬೇಕಿದ್ದರೂ ಸ್ಪರ್ಧಿಸಬಹುದು. ನಿಮಗಿಂತ ಹೆಚ್ಚು ಅರ್ಹತೆ ನನಗಿದೆ" ಎಂದು ಡೀವಿ ಅನಂತ್-ಅಶೋಕ್ ಜೊತೆ ಜಗಳಕ್ಕೆ ನಿಂತಿದ್ದರು.

ಆಗಲೂ ಆತನದು ಏಕಾಂಗಿ ಹೋರಾಟ. ಮಾಜಿ ಸಿಎಂ ಯಡ್ಡಿ ಮಹಾತ್ಮ ತನ್ನ ಪರ ವಹಿಸಬಹುದೆಂದು ಡೀವಿ ನಿರೀಕ್ಷಿಸಿದ್ದರು. ಯಡ್ಡಿಯನ್ನು ಬಿಜೆಪಿಗೆ ತರಲು ಡೀವಿ ನೆಲಮುಗಿಲು ಒಂದು ಮಾಡಿ ಹಾರಾಡಿದ್ದರು. ಆತ ಸಿಎಂ ಆಗಿದ್ದಾಗ ಯಡ್ಡಿ ಕೊಟ್ಟ ಕಾಟ, ತನ್ನನ್ನು ಸುಖಾಸುಮ್ಮನೆ ಸಿಎಂ ಕುರ್ಚಿಯಿಂದ ಎಳೆದು ಹಾಕಿದ್ದೆಲ್ಲ ಮರೆತು ಡೀವಿ ಯಡ್ಡಿಗಾಗಿ ಕಟಿಪಿಟಿ ನಡೆಸಿದ್ದರು. ಇದನ್ನು ಕಂಡವರು "ಈ ಡೀವಿಗೆ ಯಾಕೆ ಮಾನ-ಮಾರ್ಯದೆ ಇಲ್ಲಪ್ಪಾ... ಆ ಯಡ್ಡಿ ಇವನಿಗೆ ಮಾಡಿದ ಅನ್ಯಾಯ ಸಾಮಾನ್ಯವಾ... ಅದವನಿಗೆ ಮರೆತುಹೋಯ್ತಾ..." ಎಂದು ಲೊಚಗುಟ್ಟಿದ್ದರು. ಆದರೆ ದೇವಿಯದು ಪಕ್ಕಾ ರಕ್ಷಣಾತ್ಮಕ ಆಟವಾಗಿತ್ತು.

ಯಡ್ಡಿ ಬಿಜೆಪಿಯಿಂದ ತೊಲಗಿ ಕೆಜೆಪಿ ಕಟ್ಟುತ್ತಿದ್ದಂತೆಯೇ ಡೀವಿಗೆ ಬಿಜೆಪಿಯಲ್ಲಿ ಹೊಸ ತಾಪತ್ರಯ ಶುರುವಾಗಿತ್ತು. ದಿಲ್ಲಿ ದೊರೆಗಳ ಅಂತಃಪುರ-ಆರೆಸ್ಸೆಸ್‌ನ ಬ್ರಾಹ್ಮಣ ಬಳಗದಲ್ಲಿ ಆಶ್ರಯದಾತಕ ಪಡೆದಿದ್ದ ಅನಂತ್‌ಕುಮಾರ್ ಅಡಿಗಡಿಗೆ ಡೀವಿಗೆ ಕಾಡಲಾರಂಭಿಸಿದ್ದರು. ಮಾಜಿ ಸಿಎಂ ಎಂಬ ನೆಲೆಯಲ್ಲಿ ಡೀವಿ ಪ್ರಭಾವ ಬೆಳೆಯುತ್ತಿದ್ದುದು ಆತನ ಕಣ್ಣು ಕೆಂಪಾಗಿಸಿತ್ತು. ಡೀವಿಯನ್ನು ಕಂಡ-ಕಂಡಲ್ಲಿ ಆತ ಕಟ್ ಮಾಡತೊಡಗಿದ್ದ. ಆಗ ಡೀವಿಗೆ ಆಪದ್ಬಾಂಧವನಾಗಿ ಕಾಣಿಸಿದ್ದು ತನ್ನನ್ನು ಸಿಎಂ ಗಾದಿಗೇರಿಸಿ ಇಳಿಸಿದ್ದ ಯಡ್ಡಿ ಮಹಾತ್ಮ. ಅನಂತ್ ಕಂಡರಾಗದ ಯಡ್ಡಿ ಬಿಜೆಪಿಗೆ ಬಂದರೆ ತನ್ನ ಬೇಳೆ ಬೇಯಿಸಿಕೊಳ್ಳಬಹುದೆಂದು ಆತ ಭಾವಿಸಿದ್ದರು.

ಅಷ್ಟೇ ಅಲ್ಲ; ತನಗೆ ಅನಂತ್‌ನಿಂದ ಟಾಂಗ್ ಎದುರಾದಾಗೆಲ್ಲ ಯಡ್ಡಿ ಸಪೋರ್ಟ್ ಮಾಡುತ್ತಾರೆಂಬ ಭ್ರಮೆ ಬೆಳೆಸಿಕೊಂಡಿದ್ದರು. ಆದರೆ ಯಡ್ಡಿಗೆ ಡೀವಿ ಮೇಲಿನ ಸಿಟ್ಟು ಇನ್ನೂ ಇಳಿದಿಲ್ಲ. ಈ ಡೀವಿ-ಅನಂತ್ ಹೊಡೆದು ಕೊಂಡರೆ ತನಗೆ ಲಾಭ ಎಂದಾತನ ಹಿಕಮತ್ತಾಗಿತ್ತು. ಬೆಂಗಳೂರು ಉತ್ತರದ ಸೀಟಿಗಾಗಿ ಅನಂತ್-ಅಶೋಕ್ V/s ಡೀವಿ ಚಕಮಕಿ ನಡೆದಾಗ ಯಡ್ಡಿ ಬಾಯಿಯೇ ಬಿಡಲಿಲ್ಲ. ಬಿಜೆಪಿಯ ಕೋರ್ ಕಮಿಟಿಯಲ್ಲಿ ಯಡ್ಡಿ ದಿವ್ಯಮೌನ ತಾಳಿದ್ದರು. ಇದು ಡೀವಿಯನ್ನು ಕೆರಳಿಸಿದೆ. "ಯಡ್ಡಿಯನ್ನು ಹಲವು ವಿರೋಧದ ನಡುವೆಯೂ ಬಿಜೆಪಿಗೆ ತಂದವನು ನಾನು.... ಅಂಥದ್ದರಲ್ಲಿ ಈ ಯಡ್ಡಿ ನಂಗೇ ಬತ್ತಿ ಇಡ್ತಾನಲ್ಲ ಮಾರಾಯಾ....?" ಎಂದಾತ ಆತ್ಮೀಯ ಮುಂದೀಗ ಅಲವತ್ತುಕೊಳ್ಳುತ್ತಿದ್ದಾನೆ.

ಅಂದಹಾಗೆ ಯಡ್ಡಿಯ ಮೋಗಮ್ ತಂತ್ರದ ಹಿಂದೆ ಒಂದಲ್ಲ ಎರಡು ಆಸೆಗಳಿವೆ. ಒಂದು ಡೀವಿ-ಅನಂತ್ ಕಿತ್ತಾಡುತ್ತಲೇ ಇರಲಿ. ಇದರಿಂದ ಬಿಜೆಪಿಯಲ್ಲಿ ತನ್ನ ಅಸ್ತಿತ್ವ ಮಜಬೂತಾಗುತ್ತದೆ ಎಂಬುದು. ಮತ್ತೊಂದು ಡೀವಿ-ಅಶೋಕ್ ಟಿಕೆಟ್ ಕಿತ್ತಾಟದಲ್ಲಿ ತನ್ನ ಕಷ್ಟ-ಸುಖದ ನಿಷ್ಠ ಪರಮಾಪ್ತೆ ಶೋಭಾ ಕರಂದ್ಲಾಜೆಗೆ ಉತ್ತರ ಬೆಂಗಳೂರು ಸೀಟು ಸಲೀಸಾಗಿ ದಕ್ಕುತ್ತದೆ ಎಂದಾತನ ಗೇಮ್‌ಪ್ಲಾನ್. ಒಟ್ಟಿನಲ್ಲಿ ಸಮಯಸಾಧಕತನವೇ ಸಿದ್ಧಾಂತ ಮಾಡಿಕೊಂಡಿರುವ ಡೀವಿ-ಯಡ್ಡಿ-ಅನಂತ್ ಈಗ ರಾಜಕೀಯ ಸಂದಿಗ್ಧದಲ್ಲಿದ್ದಾರೆ. ಒಬ್ಬ ಕಾಲು ಮತ್ತೊಬ್ಬರು ಎಳೆದು ಮೂವರೂ ಮೂಲೆ ಪಾಲಾಗುವ ಸಾಧ್ಯತೆ ಬಗ್ಗೆ ಬಿಜೆಪಿಯಲ್ಲೀಗ ರಂಗುಬಿರಂಗಿ ಚರ್ಚೆ ನಡೆಯುತ್ತಿದೆ.



● ಶುದ್ಧೋದನ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಲಂಕೇಶ್ ಬಳಗ, ಲೋಹಿಯಾ ಪ್ರತಿಷ್ಠಾನ, ದಲಿತ ಸಾಹಿತ್ಯ ಪರಿಷತ್, ಮನುಜ ಮತ ಬಳಗ ರಾಯಚೂರು

ಇವರ ಸಹಯೋಗದಲ್ಲಿ

ಪಿ.ಲಂಕೇಶ್ ಅವರ 79ನೇ ಜನ್ಮೋತ್ಸವ ಕಾರ್ಯಕ್ರಮ

ವಿಚಾರಗೋಷ್ಠಿಗಳು - ಪುಸ್ತಕಗಳ ಬಿಡುಗಡೆ - ಸಾಂಸ್ಕೃತಿಕ ಕಾರ್ಯಕ್ರಮಗಳು

ದಿನಾಂಕ: 09-03-2014 ರ ಭಾನುವಾರ ಬೆಳಗ್ಗೆ 10:00ಕ್ಕೆ

ಸ್ಥಳ: ಜಂಬಲದಿನ್ನಿ ರಂಗಮಂದಿರ, ರಾಯಚೂರು

ಉದ್ಘಾಟನಾ ಸಮಾರಂಭ

ಸ್ವಾಗತ

ಮಹಾಂತೇಶ ಮಸ್ಕಿ (ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ರಾಯಚೂರು)

ಕಾರ್ಯಕ್ರಮದ ಕುರಿತು

ಕುಮಾರ್ ಸಮತಳ (ಕರ್ನಾಟಕ ಜನಶಕ್ತಿ, ಹೈದರಾಬಾದ್ ಕರ್ನಾಟಕ ವಿಭಾಗ)

ಉದ್ಘಾಟನೆ

ಕುಂ.ವೀರಭದ್ರಪ್ಪ (ಸಾಹಿತಿಗಳು, ಕೊಟ್ಟೂರು)

ಪುಸ್ತಕಗಳ ಬಿಡುಗಡೆ

ಸಿ.ದಾನಪ್ಪ ನಿಲೋಗಲ್ (ಕವಿಗಳು, ರಾಯಚೂರು)

ಪಿ.ಲಂಕೇಶ್-ಒಂದು ನೆನಪು

ರಹಮತ್ ತರೀಕೆರೆ (ಕನ್ನಡ ವಿಶ್ವವಿದ್ಯಾಲಯ, ಹಂಪಿ)

ಅಧ್ಯಕ್ಷತೆ

ಗೌರಿ ಲಂಕೇಶ್ (ಸಂಪಾದಕರು, ಲಂಕೇಶ್ ಪತ್ರಿಕೆ)



ಶುಭಾಶಯದ ಮಾತುಗಳು

ಸುರೇಂದ್ರಾಚಾರ್ಯ ಕೊರ್ತಕುಂದಾ (ರಾಯಚೂರು), **ಸಿ.ಬಿ.ಪಾಟೀಲ್ ಒಕಳಿ** (ಗುಲಬರ್ಗಾ), **ದಮನ್ ಪಾಟೀಲ್ ಡಾ|| ಶಿವರಾಜ್** (ಸಿಂಧನೂರು), **ಡಾ|| ಕಾವೇರಿ ಶ್ಯಾವಿ** (ಕಾರಟಗಿ), **ಅಮರೇಶ ಕುಂಬಾರ** (ಲಿಂಗಸೂಗೂರು), **ರಾಜಾ** (ಬೀದರ್), **ಎಂ.ನಾಗರಾಜ್** (ರಾಯಚೂರು), **ಎಂ.ಮೂಲಿಮನಿ ಪಾಷಾ** (ರಾಯಚೂರು), **ಮದನ್ ಗೋಪಾಲ ನಾಯಕ** (ಸುರಪುರ), **ವಿಶ್ವಾರಾಧ್ಯ ಸತ್ಯಂಪೇಟೆ** (ಯಾದಗಿರಿ), **ಚನ್ನಬಸವಣ್ಣ ವಿಶ್ವನಾಥ ಪಾಟೀಲ** (ಗುಲಬರ್ಗಾ), (ರಾಯಚೂರು).

ಉಪಸ್ಥಿತಿ: **ಭೀಮನಗೌಡ ಇಟಗಿ** (ಲೋಹಿಯಾ ಪ್ರತಿಷ್ಠಾನ), **ಈ. ಅಂಜಿನೇಯ** (ಉದ್ಯಮಿಗಳು, ರಾಯಚೂರು), **ತಿಮ್ಮಾರೆಡ್ಡಿ** (ಕೆ.ಪಿ.ಟಿ.ಸಿ.ಎಲ್., ಎಸ್.ಸಿ./ಎಸ್.ಟಿ. ಯೂನಿಯನ್), **ತಾಯರಾಜ್ ಮರ್ಚೆಟಾಳ್** (ದಲಿತ ಸಾಹಿತ್ಯ ಪರಿಷತ್), **ಲಿಂಗಣ್ಣ ಗಾಣಧಾಳ್** (ತಾಲೂಕ ಕನ್ನಡ ಸಾಹಿತ್ಯ ಪರಿಷತ್, ರಾಯಚೂರು), **ಬಸವರಾಜ್ ಬಾದರ್ಲಿ** (ಸದಸ್ಯರು), **ಪದ್ಮಾವರ್ಧನ್** (ವಕೀಲರು, ರಾಯಚೂರು)

ಬೆಳಗ್ಗೆ 11:30 ಕ್ಕೆ ವಿಚಾರ ಗೋಷ್ಠಿ-1

ವಿಷಯ: ಪ್ರಸ್ತುತ ರಾಜಕೀಯದ ಮಗ್ಗಲುಗಳು

ಮಾತನಾಡುವವರು

ಎ.ಕೆ.ಸುಬ್ಬಯ್ಯ (ಹಿರಿಯ ಚಿಂತಕರು, ಬೆಂಗಳೂರು)

ಶಿವಗಂಗಾ ರುಮ್ಮ (ಕೇಂದ್ರೀಯ ವಿಶ್ವವಿದ್ಯಾಲಯ, ಗುಲಬರ್ಗಾ)

ಚಾಮರಸ ಪಾಟೀಲ್ (ಅಧ್ಯಕ್ಷರು, ಕರ್ನಾಟಕ ರಾಜ್ಯ ರೈತಸಂಘ, ರಾಯಚೂರು)

ಕೆ.ಎಲ್. ಅಶೋಕ್ (ಕಾರ್ಯದರ್ಶಿಗಳು, ಕರ್ನಾಟಕ ಕೋಮು ಸೌಹಾರ್ದ ವೇದಿಕೆ)

ಅಧ್ಯಕ್ಷತೆ

ವಿಠಪ್ಪ ಗೋರಂಟ್ಲಿ (ಪ್ರಗತಿಪರ ಚಿಂತಕರು, ಕೊಪ್ಪಳ)

ಮಧ್ಯಾಹ್ನ 2:30ಕ್ಕೆ ವಿಚಾರ ಗೋಷ್ಠಿ-2

ವಿಷಯ: ಹೈದರಾಬಾದ ಕರ್ನಾಟಕ: ವರ್ತಮಾನ-ಭವಿಷ್ಯ

ಮಾತನಾಡುವವರು

ವಿಕ್ರಮ ವಿಸಾಜಿ (ಕೇಂದ್ರೀಯ ವಿಶ್ವವಿದ್ಯಾಲಯ, ಗುಲಬರ್ಗಾ)

ಪೊನ್ನರಾಜ್ (ಪ್ರಗತಿಪರ ಹೋರಾಟಗಾರರು, ಬಳ್ಳಾರಿ)

ಡಿ.ಹೆಚ್.ಕಂಬಳಿ (ಪತ್ರಕರ್ತರು, ಸಿಂಧನೂರು)

ರಜಾಕ್ ಉಸ್ತಾದ್ (ಹೈದರಾಬಾದ್ ಕರ್ನಾಟಕ ಜನಾಂದೋಲನ ಸಮಿತಿ, ರಾಯಚೂರು)

ಅಧ್ಯಕ್ಷತೆ

ವೀರ ಹನುಮಾನ್ (ಪ್ರಗತಿಪರ ಚಿಂತಕರು, ರಾಯಚೂರು)

ಪ್ರತಿಕ್ರಿಯೆ

ಕೆ.ಸರೋಜಾ ಬಳ್ಳಾರಿ, ಬಿ.ಪೀರಬಾಷಾ, ಅಂಬಣ್ಣ ಆರೋಲಿಕರ, ಕೆ.ರಾಮಕೃಷ್ಣ ದಸ್ತಗೀರ ಸಾಬ್ ದಿನ್ನಿ, ಜೆ.ಎಲ್ ವೀರಣ್ಣ, ಆಯ್ಯಪ್ಪ ಹೂಗಾರ

ಸಂಜೆ: 6:30 ರಿಂದ ಸಮಾರೋಪ ಸಮಾರಂಭ

ಮಾತನಾಡುವವರು: **ರಂಜಾನ್ ದರ್ಗಾ** ಮತ್ತು **ರಾಘವೇಂದ್ರ ಕುಷ್ಟಗಿ**

ಉಪಸ್ಥಿತಿ: **ಗೌರಿ ಲಂಕೇಶ್** ಮತ್ತು **ಶ್ರೀಕಾಂತ** (ವಕೀಲರು)

ಸಾಂಸ್ಕೃತಿಕ ಕಾರ್ಯಕ್ರಮಗಳು

ಎಸ್.ಬಿ. ಲಕ್ಷ್ಮೀರೆಡ್ಡಿ, ವೀರೇಶ ಸಾಲಿಮಠ, ಕರಿಯಪ್ಪ ಮಾಸ್ಟರ್

ಅವರಿಂದ ಸಂಗೀತ ಕಾರ್ಯಕ್ರಮ

ಕೆಪಿಎಸ್‌ಸಿ - ವಿವಾದದ ಬಲಿಪಶುಗಳಾರು ?

ಕೆಪಿಎಸ್‌ಸಿ ನೇಮಕಾತಿ ಹಗರಣ ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದೆ. ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆಯೆಂಬ ಹಿನ್ನೆಲೆಯಲ್ಲಿ ಮರುಪರೀಕ್ಷೆ ಮತ್ತು ಮರು ಸಂದರ್ಶನ ನಡೆಸಬೇಕೆಂಬ ಸಿಐಡಿ ವರದಿಯ ಶಿಫಾರಸ್ಸನ್ನು ಸರ್ಕಾರ ಒಪ್ಪಿಕೊಂಡಿದೆ. ಆದರೆ ಕೆಪಿಎಸ್‌ಸಿ ನಿಯಮಾವಳಿಗಳಲ್ಲಿ ಅಂಥಾ ಮರುಪ್ರಕ್ರಿಯೆಗೆ ಅವಕಾಶವಿಲ್ಲವೆಂದು ಕೆಪಿಎಸ್‌ಸಿ ಸಂಸ್ಥೆಯ ಅಧಿಕಾರಿಗಳು ಸರ್ಕಾರಕ್ಕೆ ತಿರುಮಂತ್ರ ಹೇಳಿದ್ದಾರೆ. ಹಠಬಿಡದ ತ್ರಿವಿಕ್ರಮನಂತೆ ಕಂಡುಬರುತ್ತಿರುವ ರಾಜ್ಯ ಸರ್ಕಾರ ಇಡೀ ನೇಮಕಾತಿ ಅಧಿಸೂಚನೆಯನ್ನೇ ಹಿಂಪಡೆಯುವ ಪ್ರಯತ್ನದಲ್ಲಿದೆ.

ಆದರೆ ಇಂಥಾ ನಡೆಗೆ ಕಾನೂನಾತ್ಮಕ ತೊಡಕುಗಳು ಉದ್ಭವಿಸುವ ಸಾಧ್ಯತೆ ಇರುವ ಕಾರಣ ಕಾನೂನುತಜ್ಞರ ಅಭಿಪ್ರಾಯ ಪಡೆದು ಮುಂದಿನ ನಿರ್ಧಾರ ಕೈಗೊಳ್ಳಬೇಕೆಂದು ಸಚಿವ ಸಂಪುಟದಲ್ಲಿ ತೀರ್ಮಾನಿಸಲಾಗಿದೆ.

ಇದೇ ಸಂದರ್ಭವನ್ನು ಬಳಸಿಕೊಂಡು ಸರ್ಕಾರವನ್ನು ಹಣಿಯಲು ರಾಜಕೀಯ ಷಡ್ಯಂತ್ರಗಳು ನಡೆಯುವುದು ಮಾಮೂಲಿ ಸಂಗತಿಯೇ. ಆದರೆ ಈ ಪ್ರಕರಣವನ್ನು ಅತಿರಂಜಿತವಾಗಿ ಉತ್ಪ್ರೇಕ್ಷಿಸಿ ತಮ್ಮ ತೆವಲು ತೀರಿಸಿಕೊಳ್ಳಲು ಕೆಲವು ಮಾಧ್ಯಮ ಹುನ್ನಾರಗಳೂ ನಡೆದಿರುವುದು ಈಗ ಎಲ್ಲೆಡೆ ಚರ್ಚೆಯ ಸಂಗತಿ.

ಇದೆಲ್ಲಾ ಒಂದೆಡೆಯಾದರೆ ಮತ್ತೊಂದೆಡೆ ಈ ಬಾರಿ ಆಯ್ಕೆಯಾಗಿರುವ ಅಮಾಯಕ ಅಭ್ಯರ್ಥಿಗಳು ತಮ್ಮ ಭವಿಷ್ಯದ ಬಗ್ಗೆ ಆತಂಕಿತರಾಗಿ ಬೀದಿಬೀದಿಗಳನ್ನು ಅಲೆಯುತ್ತಾ ಕಂಡಕಂಡವರಲ್ಲಿ ತಮ್ಮ ಗೋಳು ತೋಡಿಕೊಳ್ಳುತ್ತಿದ್ದಾರೆ. ಇವರ ಪೈಕಿ ದೀನದಲಿತ ಹಿನ್ನೆಲೆಯಿಂದ ಬಂದ, ಆರ್ಥಿಕವಾಗಿ ತೀರಾ ಯಾತನಾಮಯ ಬದುಕನ್ನು ಸಾಗಿಸುತ್ತಿರುವ ಅಭ್ಯರ್ಥಿಗಳೂ ಇದ್ದಾರೆ. ಭ್ರಷ್ಟಾಚಾರದ ಕರ್ಕಶ ವರದಿಗಳ ಹೊರತಾಗಿಯೂ ಸಾಮಾಜಿಕ ನ್ಯಾಯಪ್ರಜ್ಞೆ ಇರುವ ನಾವೆಲ್ಲರೂ ಗಮನಿಸಲೇಬೇಕಾದ ಒಂದು ಪ್ರಮುಖ ಅಂಶವಿದೆ. ಅದು ಈ ಬಾರಿಯ ನೇಮಕಾತಿಯಲ್ಲಿ ದೀನದಲಿತರ, ಅಲ್ಪಸಂಖ್ಯಾತ ಹಿನ್ನೆಲೆಯ ಅಭ್ಯರ್ಥಿಗಳು ಗಣನೀಯ ಪ್ರಮಾಣದಲ್ಲಿ ಆಯ್ಕೆಯಾಗಿರುವುದು.

ಹೌದು ನಿಜ; ಈ ಬಾರಿ ಕೆಪಿಎಸ್‌ಸಿ ಇತಿಹಾಸದಲ್ಲೇ ಪ್ರಪ್ರಥಮ ಬಾರಿಗೆ ಇಂಥಾ ಆಯ್ಕೆ ನಡೆದಿದೆ. ಒಟ್ಟು 362 ಹುದ್ದೆಗಳಲ್ಲಿ ಎಸ್‌ಸಿ, ಎಸ್‌ಟಿ, ಮೈನಾರಿಟಿ ಹಿನ್ನೆಯ ಸುಮಾರು 90 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ ಎಂಬುದು ಆಶ್ಚರ್ಯಕರವಾದ ಸತ್ಯ.

ಭ್ರಷ್ಟಾಚಾರದ ಮೂಲ ಕೆಪಿಎಸ್‌ಸಿ

ಕೆಪಿಎಸ್‌ಸಿಗೂ ಭ್ರಷ್ಟಾಚಾರಕ್ಕೂ ಮೊದಲಿನಿಂದಲೂ ಬಿಡಿಸಲಾಗದ ಬಾಂಧವ್ಯವಿದೆ. ಸ್ವತಃ ಸರ್ಕಾರವೂ ಅದನ್ನು ನಿರಾಕರಿಸುವ ಸ್ಥಿತಿಯಲ್ಲಿಲ್ಲ, ವಾಸ್ತವದಲ್ಲಿ ಈಗಿನ ಸರ್ಕಾರ ಕೆಪಿಎಸ್‌ಸಿಗೆ ಅಂಟಿರುವ ಕಳಂಕದಿಂದ ಆದಷ್ಟು ದೂರ ಇರುವ ನಿಲುವು ತಾಳಿದೆಯೆಂಬುದು ಮೇಲುನೋಟಕ್ಕೆ ಎದ್ದುಕಾಣುತ್ತಿರುವ ಅಂಶ. ಆದರೆ ಒಂದು ಜವಾಬ್ದಾರಿಯುತ ಸರ್ಕಾರದ ಕೆಲಸ ಅಲ್ಲಿಗೇ ಮುಗಿಯುವುದಿಲ್ಲ.

ನಮ್ಮ ಸಾಮಾಜಿಕ ರಾಜಕೀಯ ವ್ಯವಸ್ಥೆ ಎಷ್ಟು ಸಂಕೀರ್ಣವಾಗಿದೆಯೆಂದರೆ ಯಾವುದೇ ವಿಷಯ ಮೇಲುನೋಟಕ್ಕೆ ಕಂಡುಬರುವಷ್ಟು ಸರಳವಾಗಿರುವುದಿಲ್ಲ, ಈ ಅಂಶ ಭಾರೀ ಹಗರಣವೆಂದು ಸುದ್ದಿ ಮಾಡಿರುವ ಕೆಪಿಎಸ್‌ಸಿ ಪ್ರಕರಣದಲ್ಲೂ ಮತ್ತೊಮ್ಮೆ ಸಾಬೀತಾಗಿದೆ.

ಒಂದಷ್ಟು ಸೂಕ್ಷ್ಮ ವಿಷಯಗಳನ್ನು ಪರಿಶೀಲಿಸೋಣ.

ಈ ವಿವಾದದ ಆರಂಭ ಬಿಂದು ಡಾಕ್ಟರ್ ಮೈತ್ರಿ ಎಂಬ ಅಭ್ಯರ್ಥಿ. ಡಾಕ್ಟರ್ ಮೈತ್ರಿ ತನಗೆ ಅನ್ಯಾಯವಾಗಿದೆಯೆಂದು ಮಾಧ್ಯಮಗಳ ಮುಂದೆ ಅಲವತ್ತುಕೊಂಡಿರುವುದಲ್ಲದೆ, ಕಾನೂನು ಹೋರಾಟವನ್ನೂ ನಡೆಸುತ್ತಾ ಸಿಐಡಿ ತನಿಖೆಗೂ ಕಾರಣವಾಗಿರುವ ವ್ಯಕ್ತಿ. “ಎಸ್‌ಟಿ ಮಹಿಳೆಯ ಕೆಟಗರಿಯಡಿಯಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಹುದ್ದೆಗೆ. ಕೆಪಿಎಸ್‌ಸಿ ಸದಸ್ಯರು 80 ಲಕ್ಷ ಲಂಚದ ಬೇಡಿಕೆ ಇಟ್ಟಿದ್ದರು, ತಾನು ಕೊಡದೇ ಇದ್ದ ಕಾರಣ ಬೇರೊಬ್ಬರಿಗೆ ಸಂದರ್ಶನದಲ್ಲಿ ಹೆಚ್ಚಿನ ಅಂಕವನ್ನು ನೀಡಿ ತನ್ನ ಹುದ್ದೆಯನ್ನು ಮತ್ತೊಬ್ಬರಿಗೆ ಕೊಟ್ಟಿದ್ದಾರೆ”. ಎಂಬುದು ಈಕೆಯ ಆರೋಪ.

ಈ ವಿವಾದದ ಸುಳಿವನ್ನು ಕೆದಕುತ್ತಾ ಹೊರಟ 'ಪತ್ರಿಕೆ'ಗೆ ಕೆಲವು ಕುತೂಹಲಕಾರಿ ಸಂಗತಿಗಳು ಕಂಡುಬಂದವು. ಆಶ್ಚರ್ಯಕರವಾದ ಹಾಗೂ ಅನುಮಾನಾಸ್ಪದವಾದ ಮೊದಲನೇ ಅಂಶವೆಂದರೆ 'ಅವಕಾಶವಂಚಿತೆ'ಯಾಗಿರುವ ಡಾ.ಮೈತ್ರಿ ಕೂಡ 362 ಮಂದಿಯ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿದ್ದಾಳೆ. ಅದೂ ಎ ಗ್ರೇಡ್ ಹುದ್ದೆಯ ಪಟ್ಟಿಯಲ್ಲೇ ಆಕೆಯ ಹೆಸರೂ ಇದೆ. ಆಕೆಯ ಇಷ್ಟೆಲ್ಲ ದುಗುಡ ನೋವಿಗೆ ಕಾರಣವೇನೆಂದರೆ ರೆವಿನ್ಯೂ ಇಲಾಖೆಯ ಅಸಿಸ್ಟೆಂಟ್ ಕಮಿಷನರ್ ಹುದ್ದೆ ತನ್ನ ಕೈತಪ್ಪಿ ಹೋಯಿತು ಎಂಬುದು ಮಾತ್ರ.

ಈಕೆಯ ಕೈತಪ್ಪಿ ಹೋದ ಹುದ್ದೆ ಮತ್ತಾವ ಘಟಾನುಘಟಿಯ ಕೈ ಸೇರಿರಬಹುದೆಂಬ ಕುತೂಹಲದಿಂದ ಕೆದಕುತ್ತಾ ಹೋದರೆ ನಿಮಗೆ ಆಶ್ಚರ್ಯವೆನಿಸಬಹುದಾದ ಸಂಗತಿ ಎದುರಾಗುತ್ತದೆ. ನಂಬಿದ್ರೆ ನಂಬಿ, ಬಿಟ್ರೆ ಬಿಡಿ. ಈ ಹುದ್ದೆಗೆ ಅರ್ಹತೆ ಪಡೆದುಕೊಂಡಿರುವುದು ಕಡುಬಡತನದಲ್ಲಿರುವ ಸುಪ್ರಿಯಾ ಬಾಣಗಾರ್ ಎಂಬ ಅಭ್ಯರ್ಥಿ.

ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕಿನವಳಾದ ಸುಪ್ರಿಯಾ ಹಾಲಿ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾಳೆ. ಆಕೆಯ ತಂದೆ ಕೆಲ ವರ್ಷಗಳ ಹಿಂದೆ ಹೃದಯಾಘಾತಕ್ಕೊಳಗಾಗಿ ಈ ಕುಟುಂಬ ಅವರಿಗೆ ಚಿಕಿತ್ಸೆ ಕೊಡಿಸಲಾಗದ ಕಾರಣಕ್ಕೆ ತೀರಿಕೊಂಡಿದ್ದಾರೆ. ಹೀಗಾಗಿ ಹಿರಿಯಳಾದ ಸುಪ್ರಿಯಳ ಮೇಲೇ ಇಡೀ ಕುಟುಂಬದ ಜವಾಬ್ದಾರಿ ಬಿದ್ದಿದೆ. ಇಂಥಾ ಸನ್ನಿವೇಶದಲ್ಲಿರುವ ಈ ಸುಪ್ರಿಯಾ ಬಾಣಗಾರ್ ಏನೇ ತಿಪ್ಪರಲಾಗ ಹಾಕಿದರೂ 80 ಲಕ್ಷ ಹಾಗಿರಲಿ, 80 ಸಾವಿರವನ್ನೂ ಹೊಂದಿಸಲಾಗದ ಸ್ಥಿತಿಯಲ್ಲಿದ್ದಾಳೆ. ಹೌದು, ಇದು ಈ ಹಗರಣದ ಆರ್ಭಟದಲ್ಲಿ ನಾವು ನಂಬಲೇಬೇಕಾದ ಸತ್ಯಸಂಗತಿ.

ಅಷ್ಟು ಮಾತ್ರವಲ್ಲ, ಈಕೆ ಕೆಎಎಸ್ ಪರೀಕ್ಷೆಗಾಗಿ ಕನಿಷ್ಠ ಕೋಚಿಂಗ್ ಕ್ಲಾಸ್‌ಗಳಿಗೆ ಹೋಗುವ ಚೈತನ್ಯವೂ ಇಲ್ಲದೆ ಲೈಬ್ರರಿಗಳಲ್ಲಿ ಕೂತು ಪರೀಕ್ಷೆಗಳಿಗೆ ತಯಾರಿ ನಡೆಸಿದ್ದ ವ್ಯಕ್ತಿ, ಇದೂ ಒಂದು ಕಡೆ ಇರಲಿ.

ಈ ಇಬ್ಬರೂ ಅಭ್ಯರ್ಥಿಗಳು ಜಾತಿಯಿಂದ ಎಸ್‌ಟಿ ಕೆಟಗರಿಯ ನಾಯಕ ಜನಾಂಗಕ್ಕೆ ಸೇರುತ್ತಾರೆ. ಆದರೆ ಇಬ್ಬರ ಹಿನ್ನೆಲೆಯಲ್ಲಿ ಅಜಗಜಾಂತರ ವ್ಯತ್ಯಾಸವಿದೆ.

ಈ ಒಟ್ಟಾರೆ ಹಗರಣದಲ್ಲಿ ಇನ್ನಷ್ಟು ಒಳಸುಳಿಗಳಿವೆ. ಡಾಕ್ಟರ್ ಮೈತ್ರಿಯ ಆರೋಪ ಮತ್ತು ದೂರಿನ ಹಿನ್ನೆಲೆಯಲ್ಲಿ ಸದನದಲ್ಲೂ ಈ ವಿಷಯ ಗದ್ದಲಕ್ಕೆ ಕಾರಣವಾಯಿತು. ಮಾಜಿ ಸಿಎಂ ಯಡ್ಡಿಯವರು ಈ ಭ್ರಷ್ಟಾಚಾರದ ವಿರುದ್ಧ ಗದ್ದಲವೆಬ್ಬಿಸಿದರು. ಪರಿಣಾಮವಾಗಿ ಸರ್ಕಾರ ಈ ಹಗರಣವನ್ನು ಸಿಐಡಿ ತನಿಖೆಗೆ ನೀಡುವಂತಾಯಿತು.

ಒಟ್ಟಾರೆ ಈ ಪ್ರಕರಣದ ಆಳಕ್ಕೆ ಇಳಿಯುತ್ತಿದ್ದಂತೆ ಭ್ರಷ್ಟಾಚಾರ ನಡೆದಿರುವ ಸಾಧ್ಯತೆಗಳಷ್ಟೆ ನಾನಾ ಷಡ್ಯಂತ್ರಗಳು ನಡೆದಿರುವ ಸಾಧ್ಯತೆಗಳು ನಿಚ್ಚಳವಾಗಿ ಕಂಡುಬರುತ್ತವೆ.

ಈ ಪ್ರಕರಣದ ತನಿಖೆಗೆ ಆಗ್ರಹಿಸಿ ಮಹಾ ಲೆಕ್ಕ ಪರಿಶೋಧಕರಿಗೆ ಹಾಗೂ ವಿಧಾನಸೌಧ ಪೊಲೀಸ್ ಠಾಣೆಗೆ

▶▶ 08



ಕೆಪಿಎಸ್‌ಸಿ ಜಟಾಪಟಿ ಶುರುವಾಗಿದ್ದು ಯಾವಾಗ?

ಕೆಪಿಎಸ್‌ಸಿ ಎಂಬ ಸಾಂವಿಧಾನಿಕ ಸಂಸ್ಥೆ ಮತ್ತು ರಾಜ್ಯ ಸರ್ಕಾರದ ನಡುವೆ ನಡೆಯುತ್ತಿರುವ ಜಟಾಪಟ ಆರಂಭವಾಗಿದ್ದು ಹೇಗೆ ಎಂದು ಕೆದಕುತ್ತಾ ಹೋದರೆ ಕೆಲವು ಕುತೂಹಲಕಾರಿಯಾದ ಸಂಗತಿಗಳು ಹೊರಬೀಳುತ್ತವೆ. ಸರ್ಕಾರದ ಆಯಕಟ್ಟಿನಲ್ಲಿ ಕುಳಿತಿರುವ ಕೆಲವು ಪಟ್ಟಭದ್ರ ಅಧಿಕಾರಶಾಹಿಗಳು ಮೊದಲಿನಿಂದಲೂ ಈ ಪ್ರಕ್ರಿಯೆಗೆ ಅಡ್ಡಗಾಲು ಹಾಕಿರುವುದು ಬೆಳಕಿಗೆ ಬರುತ್ತದೆ.

ವ್ಯಕ್ತಿತ್ವ ಪರೀಕ್ಷೆಯ ಸಂದರ್ಶನ ವೇಳಾಪಟ್ಟಿಯ ಪ್ರಕಾರ 2013ರ ಏಪ್ರಿಲ್‌ನಲ್ಲಿ ನಡೆಯಬೇಕಾಗಿತ್ತು, ಅದರಂತೆ ಏಪ್ರಿಲ್ 1 ಮತ್ತು 2ರಂದು ಸಂದರ್ಶನಗಳು ನಡೆದವು. ಅಷ್ಟರಲ್ಲಿ ಈ ಪ್ರಕ್ರಿಯೆಯನ್ನು ನಿಲ್ಲಿಸುವಂತೆ ಕೆಪಿಎಸ್‌ಸಿಗೆ ಸರ್ಕಾರದಿಂದ ಒಂದು ಪತ್ರ ರವಾನೆಯಾಯ್ತು. ಅದಕ್ಕೆ ನೀಡಲಾಗಿದ್ದ ಕಾರಣ ಚುನಾವಣಾ ನೀತಿಸಂಹಿತೆ ಜಾರಿಯಲ್ಲಿದೆ ಎಂಬುದು. ಚುನಾವಣಾ ಸಮಯವಾದ್ದರಿಂದ ಆಗ ಅಧಿಕಾರಿಗಳದೇ ಪಾರುಪತ್ಯ ಎಂಬುದನ್ನು ನಾವು ಮರೆಯಬಾರದು.


ಆದರೆ ವಾಸ್ತವದಲ್ಲಿ ನೀತಿಸಂಹಿತೆಗೂ ಸದರಿ ನೇಮಕಾತಿಗೂ ಸಂಬಂಧವೇ ಇರಲಿಲ್ಲ. 362 ಗೆಜೆಟೆಡ್ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಆರಂಭವಾಗಿ ಸುಮಾರು ಎರಡು ವರ್ಷಗಳೇ ಆಗಿತ್ತು. ಸಂದರ್ಶನದ ಹೊರತಾಗಿ ಉಳಿದ ಎಲ್ಲ ಪ್ರಕ್ರಿಯೆಗಳೂ ಪೂರ್ಣಗೊಂಡಿದ್ದವು. ಮೇಲಾಗಿ ಕೆಪಿಎಸ್‌ಸಿ ಒಂದು ಸಾಂವಿಧಾನಿಕ ಸಂಸ್ಥೆಯಾಗಿದ್ದು ಅದು ತನ್ನ ಕಾರ್ಯಭಾರವನ್ನು ಮುಂದುವರೆಸಿಕೊಂಡು ಹೋಗಲು ಯಾವುದೇ ಅಡ್ಡಿಯೂ ಇರಲಿಲ್ಲ. ಕಾನೂನು ಹಾಗೂ ನಿಯಮಾವಳಿಗಳು ಹೀಗಿದ್ದರೂ ಸರ್ಕಾರದ ಆಯಕಟ್ಟಿನಲ್ಲಿದ್ದ ಕೆಲವು ಪಟ್ಟಭದ್ರ ಅಧಿಕಾರಿಗಳು ಕೆಪಿಎಸ್‌ಸಿಗೆ ಬೆದರಿಕೆ ರೂಪದ ಆದೇಶವನ್ನು ರವಾನಿಸಿದ್ದರು. ಬಲ್ಲ ಮೂಲಗಳ ಪ್ರಕಾರ 'ಸಂದರ್ಶನವನ್ನು ಮುಂದೂಡದೇ ಹೋದರೆ ಕೆಪಿಎಸ್‌ಸಿಯ ನೇಮಕಾತಿಯನ್ನು ಸರ್ಕಾರ ತಿರಸ್ಕರಿಸುತ್ತದೆ' ಎಂಬ ಬೆದರಿಕೆ ಆ ಪತ್ರದಲ್ಲಿತ್ತು.

ಹುದ್ದೆಯ ಆಕಾಂಕ್ಷಿಯಾಗಿದ್ದ ಅಭ್ಯರ್ಥಿಯೊಬ್ಬರು ಕೆಎಟಿ ಯಲ್ಲಿ ಮೊಕದ್ದಮೆ ಹೂಡಿ ಆದೇಶ ಪಡೆದ ನಂತರವೇ ಮೇ 7 ರಿಂದ ಮತ್ತೆ ಸಂದರ್ಶನದ ಪ್ರಕ್ರಿಯೆ ಆರಂಭವಾಗಿದ್ದು. ಸಂದರ್ಶನ ಪ್ರಕ್ರಿಯೆ ಮರುಪ್ರಾರಂಭವಾದ ಮೂರೇ ದಿನಗಳಲ್ಲಿ ಆಗಿನ ಅಧ್ಯಕ್ಷ ಗೋನಾಳ್ ಭೀಮಪ್ಪ ನಿವೃತ್ತಿಯಾದರು ಎಂಬುದನ್ನು ಇಲ್ಲಿ ನೆನಪಿಸುವುದು ಒಳಿತು.

ಅಂದರೆ ಯಾವುದೇ ಅವ್ಯವಹಾರ, ಹಗರಣ ಯಾವುದೂ ಇಲ್ಲದಿದ್ದ ಸಂದರ್ಭದಲ್ಲೇ ನಿಯಮಾವಳಿಗಳನ್ನು ಮೀರಿ ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿಯಬೇಕೆಂಬ ಪ್ರಯತ್ನಗಳು ನಡೆದಿದ್ದವು ಎಂಬುದಂತೂ ವಿಚಿತ್ರವಾದರೂ ಸತ್ಯ. ಹಾಗಾದರೆ ಅಂಥಾ ಜರೂರತ್ತು ಯಾರಿಗಿತ್ತು? ದಲಿತ ಹಿನ್ನೆಲೆಯ ಅಧ್ಯಕ್ಷನನ್ನು ಒಪ್ಪಿಕೊಳ್ಳಲಾಗದ ಸಂಕುಚಿತ ಮನಸ್ಸುಗಳು ಕೆಲಸ ಮಾಡಿದ್ದವೆ? ಚಿನ್ನದ ಮೊಟ್ಟೆ ಇಡುವ ಕೆಪಿಎಸ್‌ಸಿಯ ಚೇರ್ಮನ್‌ಗಿರಿಗಾಗಿ ಅಧಿಕಾರಗಳಲ್ಲೇ ಆಂತರಿಕ ಕಚ್ಚಾಟ ಉಂಟಾಗಿತ್ತೇ? ಇಂಥಾ ಪ್ರಶ್ನೆಗಳಿಗೆ ಸದ್ಯಕ್ಕಂತೂ ಉತ್ತರವಿಲ್ಲ.







ನಮ್ಮ ಬೆಂಬಲ ಯಾರಿಗೆ?

ಕೆಪಿಎಸ್‌ಸಿಯಲ್ಲಿ ಆಸೀನರಾಗಿರುವ ಸದಸ್ಯರ ಪರವಾಗಿಯೋ ಅಥವಾ ಭ್ರಷ್ಟಾಚಾರದಲ್ಲಿ ತೊಡಗಿರುವ ಮತ್ತಾರ ಪರವಾಗಿಯೋ ವಕಾಲತ್ತು ವಹಿಸಬೇಕಾದ ಹೊಲಸು ಕರ್ಮ ನಮಗೆ ಬೇಕಿಲ್ಲ, ಉಪ್ಪು ತಿಂದವರು ನೀರು ಕುಡಿಯಲಿ; ಭ್ರಷ್ಟರು ಜೈಲು ಸೇರಲಿ.

ಆದರೆ ನಿಮ್ಮ ಅಂತಃಕರಣಕ್ಕೇ ಸವಾಲೊಡ್ಡುವ ಈ ಅಭ್ಯರ್ಥಿಗಳ ಬಗ್ಗೆ ಒಮ್ಮೆ ಯೋಚಿಸಲೇಬೇಕು. ಎಚ್‌ಡಿ ಕೋಟೆ ತಾಲೋಕಿನ ರವಿ ಎಂಬ ಸೋಲಿಗರ ಹುಡುಗ ಈ ಬಾರಿ ಆಯ್ಕೆಯಾಗಿದ್ದಾನೆ. ಆತನಿಗೆ ಲಕ್ಷಗಟ್ಟಲೆ ಲಂಚ ಕೊಡುವ ಸಾಮರ್ಥ್ಯ ಹಾಗಿರಲಿ, ತಾನು ಓದಲು ಬೇಕಾದ ಪುಸ್ತಕಗಳನ್ನು ಕೊಳ್ಳಲೂ ಕಾಸಿಲ್ಲ. ಆತನ ಕಾಲಿನಲ್ಲಿರುವ ಹರಿದ ಹವಾಯ್ ಚಪ್ಪಲಿಗಳು ಆತನ ಇಡೀ ಕತೆಯನ್ನು ಹೇಳುತ್ತವೆ.


ಕೀರ್ತನ ಎಂಬ ಮಡಿವಾಳ ಸಮುದಾಯದ ಅಭ್ಯರ್ಥಿ ಹಾಲಿ ಒಂದು ಬಳೆಶಾಪ್ ಇಟ್ಟುಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದಾಳೆ. ತನ್ನ ಬಳೆ ಶಾಪಿನಲ್ಲಿ ಕೂತೇ ಕೆಪಿಎಸ್‌ಸಿ ಪರೀಕ್ಷೆಗೆ ತಯಾರಿ ನಡೆಸಿ ಅಂತೂಇಂತೂ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾಳೆ.

ಕೆಂಪಹೊನ್ನಯ್ಯ ಎಂಬ ಅಭ್ಯರ್ಥಿಯ ಕತೆ ಮತ್ತಷ್ಟು ದಾರುಣವಾದುದು. ಈತ ಹುಟ್ಟುಕುರುಡ. ಪರೀಕ್ಷೆ ಬರೆಯಲು ಒಬ್ಬ ಹೈಸ್ಕೂಲ್ ವಿದ್ಯಾರ್ಥಿಯನ್ನು ಸಹಾಯಕನನ್ನಾಗಿ ನೇಮಿಸಿಕೊಂಡು ಆತನ ಮೂಲಕ ಬರೆಸಿ ಆಯ್ಕೆಯಾಗಿ ಅಧಿಕಾರಿಯಾಗುವ ಕನಸು ಕಾಣುತ್ತಿದ್ದಾನೆ.

ಹೀಗೆ ಹೇಳುತ್ತಾ ಹೋದರೆ ನಮ್ಮ ಅಂತಃಕರಣ ಕಲಕುವಂಥಾ ಸಾಕಷ್ಟು ಉದಾಹರಣೆಗಳು ನಮ್ಮ ಮುಂದೆ ಬರುತ್ತವೆ. ಭ್ರಷ್ಟಾಚಾರದಲ್ಲಿ ತೊಡಗಿದ್ದವರಿಗೆ ಶಿಕ್ಷೆಯಾಗಬೇಕಾದ್ದು ಎಷ್ಟು ನ್ಯಾಯೋಚಿತವೋ ಇಂಥಾ ಅಮಾಯಕ ಅಭ್ಯರ್ಥಿಗಳಿಗೆ ಅನ್ಯಾಯವಾಗದಂತೆ ತಡೆಯಬೇಕಾದ್ದು ಕೂಡ ಅಷ್ಟೆ ನ್ಯಾಯಬದ್ಧವಾದುದು. ಅಲ್ಲವೆ?

ಬಾಗೇಪಲ್ಲಿ: ವಿನಾಯಕ ಹೈಸ್ಕೂಲ್‌ನಲ್ಲಿ 'ಫೋರ್ಜರಿ' ಕಮಾಲ್

ಅಕ್ಷರ ದೇಗುಲದಲ್ಲಿ ಭರ್ಜರಿ ಗೋಲ್‌ಮಾಲ್


ದೈಹಿಕ ಶಿಕ್ಷಕ ಸುಧಾಕರ ರೆಡ್ಡಿ

ಬಾಗೇಪಲ್ಲಿಯ ಪಾತಪಾಳ್ಯ ಹೋಬಳಿಗೆ ಅಂಟಿಕೊಂಡಂತಿರುವ ನಾರೇಮದ್ದೇಪಲ್ಲಿಯಲ್ಲಿ ಪುಟ್ಟದೊಂದು ಹೈಸ್ಕೂಲ್ ಇದೆ. ಅದು ಹೆಸರಿಗಷ್ಟೆ ವಿನಾಯಕ ವಿದ್ಯಾಮಂದಿರ, ಅಲ್ಲಿ ನಡೆಯೋದೆಲ್ಲಾ ಥರ್ಡ್‌ಕ್ಲಾಸ್ ಪೊಲಿಟಿಕ್ಸ್. ಅತ್ತ ರಾಜಕಾರಣಿಯೂ ಆಗದ ಇತ್ತ ಹಿರಿಯ ನಾಗರಿಕನೆಂಬ ಗೌರವವನ್ನೂ ಉಳಿಸಿಕೊಳ್ಳದ ಎನ್.ಎ. ಹನುಮಂತರಾವ್‌ನಂತವನ ಅಧ್ಯಕ್ಷಗಿರಿಗೂ ಹಾಗೂ ಸಕಲಕಲಾವಲ್ಲಭ (ಬೋಧನೆಯೊಂದನ್ನು ಬಿಟ್ಟು) ದೈಹಿಕ ಶಿಕ್ಷಕ ಸುಧಾಕರ್ ರೆಡ್ಡಿಯಂತವನ ಉಸ್ತುವಾರಿಕೆಗೂ ಸಿಲುಕಿರುವ ಆ ನತದೃಷ್ಟ ಶಾಲೆ ಪಕ್ಕಾ ಗ್ರಾಮಪಂಚಾಯ್ತಿ ಆಫೀಸಿನಂತಾಗಿ ಹೋಗಿದೆ. ಲೋಕಲ್ ಪೊಲೀಸರಿಂದ ಹಿಡಿದು ಶಿಕ್ಷಣ ಇಲಾಖೆವರೆಗೆ ಎಲ್ಲರನ್ನೂ ಬುಟ್ಟಿಗೆ ಹಾಕಿಕೊಂಡಿರುವ 'ಹನುಮಸುಧಾ' ಜೋಡಿ ಸರ್ಕಾರದ ಶೈಕ್ಷಣಿಕ ಅನುದಾನವನ್ನು ಹಾಗೂ ಸಾರ್ವಜನಿಕರ ಜಮೀನುಗಳನ್ನು ನುಂಗಿಹಾಕಲು ನಡೆಸಿರುವ ಗೋಲ್‌ಮಾಲ್‌ಗಳು ಒಂದೆರಡಲ್ಲ. ಮಕ್ಕಳ ಹಾಜರಾತಿ ಭತ್ಯೆ, ಸ್ಕಾಲರ್‌ಶಿಪ್ ನುಂಗಿಹಾಕುವ ನೀಚ ಕಾಯಕದಿಂದ ಮೊದಲ್ಗೊಂಡು ಆರಂಭದಿಂದ ಕೆಲಸವನ್ನೇ ಮಾಡದವರಿಗೆ ಹಣ ಪಡೆದು ಕಾಯಮ್ಮಾತಿಯ ಶಿಫಾರಸ್ಸು ಮಾಡುವುದು, ಕೆಲಸ ಕೊಡುತ್ತೇವೆಂದು ನಂಬಿಸಿ ಶಾಲೆಯ ಹೆಸರಲ್ಲಿ ಜಮೀನು ಪಡೆದು ಯಾಮಾರಿಸುವುದು, ನಿಯತ್ತಾಗಿ ಕೆಲಸ ಮಾಡುವ ಶಿಕ್ಷಕರಿಗೆ ಕಿರುಕುಳ ಕೊಟ್ಟು ಮಕ್ಕಳ ಮುಂದೆಯೇ ಜಗಳ ಆಡುವಂತಹ ವಾತಾವರಣ ಸೃಷ್ಟಿಸುವುದು ಇವೇ ಇವರ ಕೃತ್ಯಗಳು.

ಫೋರ್ಜರಿ ಪ್ರತಾಪಗಳು

1993-94ನೇ ಸಾಲಿನಲ್ಲಿ ಈ ಶಾಲೆ ಆರಂಭವಾದಾಗ ಮಕ್ಕಳಿಗೆ ಅನುಕೂಲವಾಗಲಿ ಎನ್ನುವ ಸದುದ್ದೇಶವನ್ನೇ ಹೊಂದಿತ್ತು. ಗ್ರಾಮಸ್ಥರಾದ ಎಸ್. ಗಂಗಪ್ಪ ಎನ್.ಎಫ್ ಅಮೀರ್, ಕೆ.ಬಿ.ಮಹೇಶ್, ಹಬೀಬಾ ಮೊದಲಾದವರು ವಿನಾಯಕ ಹೈಸ್ಕೂಲ್‌ಗೆ ಜನ್ಮ ನೀಡಿದ್ದರು. ಆ ಗುಂಪಿನಲ್ಲಿ ಹನುಮಂತರಾವ್ ಕೂಡಾ ಒಬ್ಬವನಾಗಿದ್ದ. ಅಮೀರ್ ಎಂಬಾತ ಇಡೀ ಕಮಿಟಿಗೆ ಅಧ್ಯಕ್ಷನಾಗಿದ್ದ. ಆರಂಭದಲ್ಲಿ ಮಕ್ಕಳಿಂದ ಬರುತ್ತಿದ್ದ ಫೀಜನ್ನೆ ವೇತನವನ್ನಾಗಿ ಶಿಕ್ಷಕರು ಹಂಚಿಕೊಂಡು ಹಾಗೋ, ಹೀಗೋ ಶಾಲೆ ಶುರುಮಾಡಿದ್ದರು. ಗ್ರಾಮದ ಸಮುದಾಯಭವನ, ಆಂಜನೇಯಸ್ವಾಮಿ ದೇವಸ್ಥಾನದ ಅಂಗಳದಲ್ಲಿ ಹೀಗೆ ಚೆಲ್ಲಾಪಿಲ್ಲಿಯಾಗಿ ನಡೆಯುತ್ತಿದ್ದರೂ ಅಕ್ಷರದಾಸೋಹದ ತನ್ನ ಮೂಲ ಕಾಯಕಕ್ಕೆ ಮೋಸ ಮಾಡಿರಲಿಲ್ಲ, ಅಷ್ಟರಲ್ಲಾಗಲೆ ಶಾಲೆಯ ದೈಹಿಕ ಶಿಕ್ಷಕನ ಸ್ಥಾನಕ್ಕೆ ಪಕ್ಕನಿಸಿದ್ದ ಮೋಡಿಯ ಮಾತುಗಾರ ಸುಧಾಕರ್ ರೆಡ್ಡಿ ಮತ್ತು ಹನುಮಂತರಾವ್ ಸೇರಿಕೊಂಡು ಶಾಲೆಯ ನೆಪದಲ್ಲಿ ಕಮಾಯಿ ಮಾಡಿಕೊಳ್ಳುವ ಕನಸು ಕಂಡಿದ್ದೇ ತಡ ಇವರಿಬ್ಬರ ಅಪರಾ-ತಪರಾಗಳು ಶುರುವಾಗಿದ್ದವು.

ತಮ್ಮ ಕೆಲಸಕ್ಕೆ ಮುಳುವಾಗಲಿದ್ದ ಬೇರೆ ಸದಸ್ಯರನ್ನು ನಿವಾರಿಸಿಕೊಳ್ಳಲು ಹನುಮಂತರಾವ್ ಮೊರೆ ಹೋದದ್ದು ಫೋರ್ಜರಿ ಉಪಾಯಕ್ಕೆ. ಶಿಕ್ಷಕರೇ ಶಾಲೆಯನ್ನು ನಡೆಸಿಕೊಂಡು ಹೋಗುತ್ತಿದ್ದರಿಂದ ಮಂಡಳಿಯ ಸದಸ್ಯರಾರು ಇತ್ತ ಅಷ್ಟಾಗಿ ಬರುತ್ತಿರಲಿಲ್ಲ. ಅದನ್ನೇ ಬಂಡವಾಳ ಮಾಡಿಕೊಂಡ ಹನುಮಂತರಾವ್ ಬೇರೆಯವರಿಗೆ ವಿಷಯವನ್ನೇ ತಿಳಿಸದೆ ಫೇಕ್ ಮೀಟಿಂಗ್‌ಗಳನ್ನು ವ್ಯವಸ್ಥೆ ಮಾಡುತ್ತಿದ್ದ. ನಿರಂತರ ಮೂರು ಸಭೆಗಳಿಗೆ ಗೈರುಹಾಜರಾದ ಸದಸ್ಯನನ್ನು ಸಮಿತಿಯಿಂದ ಅಮಾನತು ಮಾಡುವ ನಿಯಮವನ್ನೇ ದುರುಪಯೋಗ ಪಡಿಸಿಕೊಂಡು ಒಬ್ಬೊಬ್ಬ ಸದಸ್ಯರನ್ನೇ ಸಮಿತಿಯಿಂದ ಕಿತ್ತು ಹಾಕುತ್ತಾ ಬಂದ. ಹಾಗೆ ಒಬ್ಬರನ್ನು ಕಿತ್ತು ಹಾಕುವಾಗ ಬೇರೆ ಸದಸ್ಯರ ಒಪ್ಪಿಗೆ ಬೇಕಲ್ಲ, ಅದಕ್ಕೆ ಆತ ಬಳಸಿಕೊಂಡದ್ದು ಅಲ್ಲಿ ಕೆಲಸ ಮಾಡುತ್ತಿದ್ದ ಶಿಕ್ಷಕರನ್ನೆ. 'ಇವರನ್ನೆಲ್ಲಾ ಕಿತ್ತು ಹಾಕಿದರೆ ನೀವೆ ಶಾಲಾ ಸಮಿತಿಗೆ ಸದಸ್ಯರಾಗಬಹುದು, ಆಗ ಬೇರೆಯವರ ಮರ್ಜಿ ನಿಮಗಿರುವುದಿಲ್ಲ' ಎಂದು ನಯವಾಗಿ ಅವರನ್ನು ನಂಬಿಸಿ, ಅವರಿಂದಲೇ ಬಾಕಿ ಸದಸ್ಯರ ಫೋರ್ಜರಿ ಸಹಿ ಮಾಡಿಸಿ ತನ್ನ ಕಾರ್ಯಸಾಧಿಸಿಕೊಳ್ಳುತ್ತಾ ಬಂದ. 1997ರ ಹೊತ್ತಿಗೆ ಅಧ್ಯಕ್ಷ ಸ್ಥಾನದಲ್ಲಿದ್ದ ಅಮೀರ್ ಜಾಗಕ್ಕೆ ತಾನೇ ವಕ್ಕರಿಸುವ ಮಟ್ಟಿಗೆ ಕುಯುಕ್ತಿ ನಡೆಸಿದ್ದ. ಇದಕ್ಕೆ ಸಾಥ್ ನೀಡುತ್ತಾ ಬಂದ ದೈಹಿಕ ಶಿಕ್ಷಕ ಸುಧಾಕರ್ ರೆಡ್ಡಿ ಸಹಜವಾಗಿಯೇ ಶಾಲೆಯ ಮೇಲೆ ಜಬರ್ದಸ್ತ್ ಶುರು ಮಾಡಿದ್ದಲ್ಲದೆ ತನ್ನ ಹೆಂಡತಿ ಕೆ.ಎಚ್. ಪುಷ್ಪಲತಾಳೆ 1993ರಿಂದಲೂ ಶಾಲಾ ಆಡಳಿತ ಮಂಡಳಿಯ ಕಾರ್ಯದರ್ಶಿಯಾಗಿದ್ದಾಳೆ ಎಂಬ ಫೋರ್ಜರಿ ಸುಳ್ಳು ದಾಖಲೆಗಳನ್ನೂ ಸೃಷ್ಟಿಸಿಕೊಂಡ. ಅಸಲಿಗೆ ಈ ಸುಧಾಕರ್ ರೆಡ್ಡಿಗೆ ಮದುವೆಯಾದದ್ದೇ 1995-96ರಲ್ಲಿ, ಹಾಗಿದ್ದರು ಅವನ ಹೆಂಡತಿಗೆ 1993ರಿಂದಲೇ ಕಾರ್ಯದರ್ಶಿ ಭಾಗ್ಯ! ನೆಪಮಾತ್ರಕ್ಕೆ ಅಲ್ಲೊಬ್ಬ ಮುಖ್ಯಶಿಕ್ಷಕ ಇದ್ದನೇ ಹೊರತು ಶಾಲೆ ನಿರ್ವಹಣೆಯ ಅಸಲಿ ಯಜಮಾನ ಸುಧಾಕರ್ ರೆಡ್ಡಿಯೇ ಆಗಿದ್ದ ಮತ್ತು ಈಗಲೂ ಆಗಿದ್ದಾನೆ.

ಜಮೀನಿಗಾಗಿ ನಂಬಿಕೆ ದ್ರೋಹ


1997 ಸೆಪ್ಟೆಂಬರ್ ತಿಂಗಳಲ್ಲಿ ಶಾಲೆಗೆ ಪ್ರಪ್ರಥಮ ಬಾರಿಗೆ ಶಿಕ್ಷಣ ಇಲಾಖೆಯಿಂದ ಇನ್ಸ್‌ಪೆಕ್ಷನ್ ಬಂದ ಬಿಇಒ ತಂಡ ಶಾಲೆಗೊಂದು ಕಟ್ಟಡವೇ ಇಲ್ಲದ್ದನ್ನು ತನ್ನ ವರದಿಯಲ್ಲಿ ಉಲ್ಲೇಖಿಸಿತ್ತು. ಈ ವರದಿ ಹನುಮಂತರಾವ್ ಮತ್ತು ಸುಧಾಕರ್ ಜೋಡಿಗೆ ಹಸಿದ ರೋಗಿಗೆ ಆಮ್ಲೆಟ್ ಕೊಟ್ಟಂತಾಗಿತ್ತು. ಇದನ್ನೇ ನೆಪ ಮಾಡಿಕೊಂಡು ದಾನಿಗಳಿಂದ ಹಣ ಮತ್ತು ಜಮೀನು ಕಬಳಿಸುವ ಯೋಜನೆಯೊಂದನ್ನು ಹನುಮಂತರಾವ್ ರೂಪಿಸಿದ್ದ. ಅದರಂತೆ ಗ್ರಾಮದಲ್ಲಿ ಅರ್ಚಕ ಕೆಲಸ ಮಾಡಿಕೊಂಡಿದ್ದ ಅಶ್ವತ್ಥ ನಾರಾಯಣಶಾಸ್ತ್ರಿಯನ್ನು ಸಂಪರ್ಕಿಸಿದ ಹನುಮಂತರಾವ್ 'ನೀವು ನಮಗೆ ಶಾಲೆಗೆಂದು ಜಮೀನು ದಾನ ಮಾಡಿದರೆ ಶಾಲೆಯಲ್ಲಿ ನಿಮ್ಮ ಮಗ ಅನಂತನಿಗೆ ಗುಮಾಸ್ತ ಹುದ್ದೆ ಕೊಡುತ್ತೇವೆ. ಇನ್ನೇನು ಸ್ವಲ್ಪ ದಿನದಲ್ಲೇ ಶಾಲೆಗೆ ಸರ್ಕಾರದ ಮಾನ್ಯತೆ ದೊರೆಯುವುದರಿಂದ ನಿಮ್ಮ ಕುಟುಂಬಕ್ಕೂ ಅನುಕೂಲವಾಗುತ್ತೆ' ಎಂಬ ಆಫರೊಂದನ್ನು ಇಟ್ಟಿದ್ದ. ಇದಕ್ಕೆ ಒಪ್ಪಿದ ಶಾಸ್ತ್ರಿಗಳು ಸರ್ವೇ ನಂಬರ್ 338ರಲ್ಲಿದ್ದ ತಮ್ಮ 9 ಎಕರೆ 10 ಗುಂಟೆ ಜಮೀನಿನಲ್ಲಿ 20 ಗುಂಟೆ ಜಮೀನನ್ನು 13.12.2001ರಲ್ಲಿ ಶಾಲೆಗೆ ಬಿಟ್ಟು ಕೊಟ್ಟಿದ್ದರು.

ನಂತರದಲ್ಲಿ ಶಾಸ್ತ್ರಿಗಳ ಮಗ ಅನಂತ್ ಶಾಲೆಯಲ್ಲಿ ಕೆಲಸ ಕೇಳಲು ಹೋದಾಗ 'ಸದ್ಯಕ್ಕೆ ಶಾಲೆ ನಡೆಯುವುದೇ ದುಸ್ತರವಾಗಿದೆ. ಮಕ್ಕಳ ಫೀಜನ್ನೇ ಸಂಬಳವನ್ನಾಗಿ ಹಂಚಿಕೊಂಡು ಮೇಷ್ಟ್ರುಗಳು ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ. ಹಾಗಾಗಿ ನೀವೂ ಕೆಲಸಕ್ಕೆ ಸೇರಿದರೆ ಸಂಬಳ ಹಂಚಿಕೊಳ್ಳುವುದು ಇನ್ನೂ ಕಷ್ಟವಾಗಿ ಬಿಡುತ್ತೆ. ಸದ್ಯದಲ್ಲೇ ಸರ್ಕಾರದ ಜಿ.ಒ ಸಿಗುವುದು ಡೌಟು. ನೀವು ಬೇರೆ ಏನಾದರು ಕೆಲಸ ಮಾಡಿಕೊಂಡಿರಿ. ಸರ್ಕಾರದ ಅನುದಾನ ಸಿಗುವ ಲಕ್ಷಣ ಕಾಣಿಸಿಕೊಂಡ ಕೂಡಲೇ ನಿಮಗೆ ಗುಮಾಸ್ತ ಹುದ್ದೆ ನೀಡುವುದಲ್ಲದೆ ಅನುದಾನಕ್ಕೆ ನಿಮ್ಮ ಹೆಸರನ್ನೂ ಶಿಫಾರಸ್ಸು ಮಾಡ್ತೀವಿ' ಎನ್ನುವ ಭರವಸೆಯನ್ನು ಹನುಮಂತರಾವ್ ನೀಡಿದ್ದ. ಅದನ್ನು ನಂಬಿಕೊಂಡ ಅರ್ಚಕರ ಕುಟುಂಬ ಇಷ್ಟು ದಿನ ಸುಮ್ಮನಿತ್ತು. ಕಳೆದ ವರ್ಷ ಅನುದಾನಕ್ಕಾಗಿ ಆರಂಭದಿಂದಲೂ ಕೆಲಸ ಮಾಡಿಕೊಂಡಿರುವ ಸಿಬ್ಬಂದಿಗಳ ಹೆಸರನ್ನು ಕಳಿಸಿಕೊಡಿ ಎಂದು ಸರ್ಕಾರ ಆದೇಶ ಮಾಡುತ್ತಿದ್ದಂತೆಯೇ ಅನಭಿಷಕ್ತ ಕಾರ್ಯದರ್ಶಿ ಕಮ್ ದೈಹಿಕ ಶಿಕ್ಷಕ ಸುಧಾಕರ್ ರೆಡ್ಡಿಯ ಖತರ್ನಾಕ್ ಬುದ್ಧಿ ಕೆಲಸ ಮಾಡಿತ್ತು. ಹೇಗೂ ಶಾಲೆಗೆಂದು ನೀಡಿರುವ ಜಾಗವನ್ನು ದಾನಿಗಳು ವಾಪಾಸ್ ಪಡೆಯುವುದು ಸಾಧ್ಯವಿಲ್ಲ. ಹೀಗಿರುವಾಗ ಸುಖಾಸುಮ್ಮನೆ ಒಂದು ಹುದ್ದೆಯನ್ನು ಶಾಸ್ತ್ರಿ ಕುಟುಂಬಕ್ಕೆ ಬಿಟ್ಟು ಕೊಡುವ ಬದಲು ಅದನ್ನೇ ಭಾರೀ ಬೆಲೆಗೆ ಮಾಡಿಕೊಂಡರೆ ಹೇಗೆ ಎಂಬ ಆಲೋಚನೆ ಆತನ ತಲೆಯಲ್ಲಿ ಮಿಂಚಿದ್ದೇ ತಡ ಅಧ್ಯಕ್ಷ ಹನುಮಂತರಾವ್‌ಗೂ ಅದನ್ನು ವರ್ಗಾಯಿಸಿದ್ದ.

ಜಮೀನು ಪಡೆಯುವಾಗ ನೀಡಿದ್ದ ವಾಗ್ದಾನವನ್ನೇ ಮರೆತು ಶಾಸ್ತ್ರಿಯ ಮಗ ಅನಂತ್‌ಗೆ ಗುಮಾಸ್ತ ಹುದ್ದೆಯನ್ನು ಶಿಫಾರಸ್ಸು ಮಾಡುವ ಬದಲು ವಿ. ರಾಮಾಂಜನಪ್ಪ ಎಂಬಾತನಿಗೆ ಅದನ್ನು ದುಬಾರಿ ಬೆಲೆಗೆ ಮಾರಿಕೊಂಡಿದ್ದರು. ಅಲ್ಲದೆ ಈತ ಶಾಲೆ ಪ್ರಾರಂಭವಾದ ಅಂದರೆ 1993ರಿಂದಲೂ ಗುಮಾಸ್ತ ಕೆಲಸ ಮಾಡುತ್ತಿದ್ದಾನೆಂದು ದಾಖಲೆಯಲ್ಲೂ ಘೋಷಿಸಿಕೊಂಡಿದ್ದಾರೆ. ಅಸಲಿಗೆ ಈ ರಾಮಾಂಜನಪ್ಪ ವಿನಾಯಕ ಪ್ರೌಢಶಾಲೆಯ ಸಿಬ್ಬಂದಿಯೇ ಅಲ್ಲ. ಪಕ್ಕದ ಕಾನ್ವೆಂಟ್ ಒಂದರಲ್ಲಿ ಪ್ರಿನ್ಸಿಪಾಲ್ ಆಗಿ ಕೆಲಸ ಮಾಡಿಕೊಂಡಿರುವಾತ. 1997ರಲ್ಲಿ ಪ್ರಪ್ರಥಮ ಬಾರಿಗೆ ಶಾಲೆಯ ತನಿಖೆ ನಡೆಸಿದ ಬಿಇಒ ವರದಿಯಲ್ಲಿ 'ಕೆಲಸ ಮಾಡುತ್ತಿರುವ ಶಿಕ್ಷಕರ ಪಟ್ಟಿ'ಯಲ್ಲಿ ಈ ರಾಮಾಂಜನಪ್ಪನ ಹೆಸರೇ ಇಲ್ಲ. ಆದರೂ ಹಣದ ಆಸೆಗೆ ಆತ 1993ರಿಂದಲೂ ಕೆಲಸ ಮಾಡಿಕೊಂಡಿದ್ದಾನೆಂದು ಶಿಫಾರಸ್ಸು ಮಾಡಿದ್ದಾರೆ. ಊರಿನ ಮಕ್ಕಳ ಒಳಿತಿಗೆಂದು ಜಮೀನು ನೀಡಿ ಇವರಿತ್ತ ಭರವಸೆಯನ್ನೆ ನಂಬಿಕೊಂಡು ಇಲ್ಲಿಯವರೆಗೆ ಕಾದ ಶಾಸ್ತ್ರಿ ಕುಟುಂಬಕ್ಕೆ ಹನುಮಸುಧಾ ಜೋಡಿ ಬೆನ್ನಿಗೆ ಚೂರಿ ಹಾಕಿದೆ.


ಲಕ್ಷ್ಮೀಸಾಗರ್ ಅನುದಾನದಲ್ಲಿ ನಿರ್ಮಿಸಲಾದ ಶಾಲಾ ಕಟ್ಟಡ

ಈ ಕುರಿತು ಅನಂತಶಾಸ್ತ್ರಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ಸ್ವಾಮಿವರೆಗೆ ದೂರನ್ನು ಒಯ್ದರೂ ಅವರಿಗೆ ನ್ಯಾಯ ಸಿಕ್ಕಿಲ್ಲ. ಇತ್ತೀಚೆಗಷ್ಟೆ ಸಮಗ್ರ ತನಿಖೆ ನಡೆಸುವಂತೆ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರರ ಕಾರ್ಯದರ್ಶಿಗಳು ಮೌಖಿಕವಾಗಿ ಸಂಬಂಧಪಟ್ಟವರಿಗೆ ಸೂಚಿಸಿದ್ದರೂ ಸುಧಾಕರ್ ರೆಡ್ಡಿಯ 'ಋಣಭಾರ' ಶಿಕ್ಷಣ ಇಲಾಖೆಯ ಉನ್ನತ ಮೂಲಗಳನ್ನು ಕಟ್ಟಿಹಾಕಿವೆ. ಡಿಡಿಪಿಐ ಅಜಿತ್ ಪ್ರಸಾದ್ ಕುಂಟುನೆಪದಲ್ಲಿ ತನಿಖೆಯನ್ನು ಮುಂದೂಡುತ್ತಿದ್ದಾರೆ. ಬಿಇಒ ವೆಂಕಟೇಶ್‌ಗೆ ಸುಧಾಕರ್ ರೆಡ್ಡಿ ಹೇಳಿದ್ದೆ ಸತ್ಯ


ಅಧ್ಯಕ್ಷ ಹನುಮಂತ ರಾವ್

ತೋರಿಸಿದ್ದೇ ದಾಖಲೆಯಂತಾಗಿರುವುದು ದುರಾದೃಷ್ಟ.

ಭರ್ಜರಿ ಅನುದಾನ

ಶಾಸ್ತ್ರಿ ಕುಟುಂಬವನ್ನು ನಂಬಿಸಿ ನಿವೇಶನವನ್ನು ಗಿಟ್ಟಿಸಿಕೊಂಡ ಅವರಿಗೆ ಕಟ್ಟಡ ಕಟ್ಟುವ ಸಾಮರ್ಥ್ಯವಾಗಲಿ, ಅನುದಾನವನ್ನು ಹೊತ್ತು ತರುವ ಚಾಕ್ಯತೆಯಾಗಲಿ ಇರಲಿಲ್ಲ. ಆಗ ಅವರು ಮೊರೆ ಹೋದದ್ದು ಅದೇ ಊರಿನ ಪ್ರೊಫೆಸರ್ ಎನ್.ಎ. ನರಸಿಂಹಯ್ಯನವರನ್ನು. ಆಗಿನ್ನು ಅವರು ಹಿಂದುಳಿದ ವರ್ಗಗಳ ಆಯೋಗದ ಸದಸ್ಯರಾಗಿದ್ದರು. ಆಗಲೂ ಸಹ ನೇರವಾಗಿ ಅಖಾಡಕ್ಕಿಳಿಯದ ಹನುಮಂತರಾವ್ ಶಾಲಾಶಿಕ್ಷಕರನ್ನು ಅವರ ಬಳಿ ಕಳಿಸಿ ಮಕ್ಕಳ ಗೋಳನ್ನೆ ಮುಂದು ಮಾಡಿ ರೋದಿಸಿಕೊಳ್ಳುವಂತೆ ತಯಾರಿ ಮಾಡಿದ್ದ. ಸದುದ್ದೇಶದ ಈ ಕಾಯಕಕ್ಕೆ ಒಪ್ಪಿದ ಪ್ರೊ. ನರಸಿಂಹಯ್ಯನವರು ಆಗಿನ ರಾಜ್ಯಸಭಾ ಸದಸ್ಯರಾಗಿದ್ದ ಎ. ಲಕ್ಷ್ಮಿಸಾಗರ್ ಅವರ ಮನವೊಲಿಸಿ ಅವರ ನಿಧಿಯಿಂದ ಹಣ ಬಿಡುಗಡೆ ಮಾಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಸಣ್ಣಪುಟ್ಟ ಸಹಾಯ ನಿರೀಕ್ಷಿಸಿದ್ದ ಹನುಮಸುಧಾ ಜೋಡಿಗೆ ಅಚ್ಚರಿಯಾಗುವಂತೆ ಲಕ್ಷ್ಮಿಸಾಗರ್ ಅವರು ಬರೋಬ್ಬರಿ 10 ಲಕ್ಷದ ಬೃಹತ್ ಅನುದಾನವನ್ನೇ ದೊರಕಿಸಿಕೊಟ್ಟಿದ್ದರು. ಆ ಹಣದಲ್ಲಿ ಶಾಸ್ತ್ರಿಯವರಿಂದ ಪಡೆದ ಜಮೀನಿನಲ್ಲೇ ಶಾಲೆ ಕಟ್ಟುವ ಬದಲು ಹೊಸದಾಗಿ ಜಮೀನನ್ನು ಖರೀದಿಸಿ ಅದರಲ್ಲಿ ಶಾಲಾ ಕಟ್ಟಡವನ್ನು ಕಟ್ಟಿಸಿಕೊಂಡ ಹನುಮಸುಧಾ ಜೋಡಿ, ಶಾಸ್ತ್ರಿಗಳ ಜಮೀನನ್ನು ಮಕ್ಕಳ ಆಟದ ಮೈದಾನದ ಹೆಸರಲ್ಲಿ ಈಗಲೂ ಖಾಲಿ ಉಳಿಸಿಕೊಂಡಿರುವ ಉದ್ದೇಶವೇ ಯಾರಿಗೂ ಅರ್ಥವಾಗುತ್ತಿಲ್ಲ.

ದೇವಸ್ಥಾನದ ಜಗುಲಿ, ಸಮುದಾಯ ಭವನದ ಅಂಗಳದಿಂದ ಆರಂಭವಾದ ಶಾಲೆ ಏಕಾಏಕಿ ಕೋಟ್ಯಂತರ ಆಸ್ತಿಯ ಅಕ್ಷಯಪಾತ್ರೆಯಾಗುತ್ತಿದ್ದಂತೆ ಹನುಮಂತರಾವ್ ಮತ್ತು ಸುಧಾಕರ್ ಇಡೀ ಶಾಲೆಯನ್ನು ತಮ್ಮ ಖಾಸಗಿ ಸ್ವತ್ತಾಗಿಸಿಕೊಳ್ಳಲು ಮುಗಿಬಿದ್ದರು. ಶಾಲೆಯ ತುಂಬಾ ತಮ್ಮ ಸಂಬಂಧಿಕರನ್ನೇ ಅಥವಾ ಬಾಲಬಡುಕ ಶಿಕ್ಷಕರನ್ನೇ ನೇಮಿಸಿಕೊಂಡರೆ ತಾವು ಇಷ್ಟಬಂದಂತೆ ದೋಚಬಹುದೆಂದು ಯೋಚಿಸಿದ ಸುಧಾಕರ್ ರೆಡ್ಡಿ ತನ್ನ ಸಂಬಂಧಿಕರನ್ನೆಲ್ಲ ತಂದು ಶಾಲೆಗೆ ತುಂಬಲು ಶುರುಮಾಡಿದ್ದ. ಉಳಿದ ಶಿಕ್ಷಕರು ಇವರ ದರ್ಬಾರಿನಲ್ಲಿ ತೆಪ್ಪಗಿರಬೇಕಿತ್ತು. ಅಕಸ್ಮಾತ್ ಯಾರಾದರು ಅದನ್ನು ಪ್ರಶ್ನಿಸಿದರೆ ಅಂತಹವರಿಗೆ ಸಿಕ್ಕಾಪಟ್ಟೆ ಟಾರ್ಚರ್ ನೀಡುತ್ತಾರೆ.

ಸುಧಾಕರ್ ರೆಡ್ಡಿ ತನ್ನ ಹೆಂಡತಿ ಶಾಲೆಯ ಆರಂಭದಿಂದಲೂ ಕಾರ್ಯದರ್ಶಿ ಎಂಬ ದಾಖಲೆ ಸೃಷ್ಟಿಸಿಕೊಂಡದ್ದನ್ನು ಪ್ರಶ್ನಿಸಿದ ಶಾಲೆಯ ಮುಖ್ಯೋಪಾಧ್ಯಾಯ ವೆಂಕಟರೆಡ್ಡಿಯನ್ನು ಬೆದರಿಸಿ ಓಡಿಸಿಯೇ ಬಿಟ್ಟಿದ್ದಾರೆ. ಆತನನ್ನು ಶಾಲೆಯಿಂದ ಹೊರಗಟ್ಟಲು ಹನುಮಸುಧಾ ಜೋಡಿ ಮಾಡಿದ ಹಕೀಕತ್ತುಗಳು ಸಾಕಷ್ಟಿವೆ. ಮೊದಲು ಇತರೆ ಶಿಕ್ಷಕರನ್ನು ಮುಖ್ಯ ಶಿಕ್ಷಕನ ವಿರುದ್ಧ ಎತ್ತಿಕಟ್ಟಿ ಶಾಲೆಯ ವಾತಾವರಣವನ್ನೇ ಹದಗೆಡಿಸಿದ್ದರು. ಹದಿನಂತರ ಮಕ್ಕಳ ಎದುರಿಗೇ ಮೇಷ್ಟ್ರುಗಳು ಮೈಕೈ ಮುಟ್ಟಿ ಹೊಡೆದಾಡಿಕೊಳ್ಳುವಂತೆಯೂ ಮಾಡಿದ್ದರು. 2008ರಲ್ಲಿ ಈ ಸಂಬಂಧ ಹಿಂದಿ ಶಿಕ್ಷಕ ಈಶ್ವರಾಚಾರಿ ಮತ್ತು

⏭ 08





06 ◀◀ ದೂರು ದಾಖಲಾಗಿದೆ. ಹೀಗೆ ದೂರು ದಾಖಲಿಸಿದವರಲ್ಲಿ ಮೈತ್ರಿ ಎಂಬುವವರ ಜೊತೆಗೆ ಗಂಗಾಧರಯ್ಯ ಎಂಬ ವ್ಯಕ್ತಿಯೂ ಇದ್ದರು. ಆದರೆ ಇದುವರೆಗೆ ಈ ಗಂಗಾಧರಯ್ಯ ಯಾರು? ಎಲ್ಲಿಂದ ಬಂದರು? ಈಗ ಎಲ್ಲಿದ್ದಾರೆ ಎಂಬ ಸಂಗತಿಗಳು ತೀರಾ ನಿಗೂಢವಾಗಿದ್ದು ಹಲವು ಅನುಮಾನಗಳಿಗೆ ದಾರಿಮಾಡಿಕೊಡುತ್ತಿದೆ.

ಇನ್ನೊಂದು ಅನುಮಾನಾಸ್ಪದ ಸಂಗತಿಯೇನೆಂದರೆ ಸಿಐಡಿ ವರದಿ ತಯಾರಾಗಿ ಇನ್ನೂ ಸರ್ಕಾರಕ್ಕೆ ತಲುಪುವ ಮುನ್ನವೇ ಅದು ಕೆಲವು ಖಾಸಗಿ ವ್ಯಕ್ತಿಗಳ ಕೈಸೇರಿದ್ದು. ಮಾತ್ರವಲ್ಲದೆ ಪತ್ರಿಕೆಗಳಲ್ಲಿ ಅದು ಲೇಖನಗಳ ಸರಮಾಲೆಯ ರೂಪದಲ್ಲಿ ಪ್ರಕಟವಾಗಿದೆ. ರಾಜಕೀಯ ಪಕ್ಷವೊಂದು ಅದನ್ನು ತನ್ನ ವೆಬ್‌ಸೈಟಿನಲ್ಲಿ ಪ್ರಕಟಿಸಿಯೂ ಆಗಿದೆ. ಹಾಗಾದರೆ ಸರ್ಕಾರದ ರಹಸ್ಯ ದಾಖಲೆಯೊಂದು ಹೀಗೆ ಖಾಸಗಿ ವ್ಯಕ್ತಿಗಳ ಕೈಸೇರುವಂತಾಗಲು ಕಾರಣರಾರು? ಈ ವಿವಾದದ ಮೂಲನೆಲೆ ಪಟ್ಟಭದ್ರ ಅಧಿಕಾರಿಗಳೇ ಆಗಿದ್ದಾರೆಯೆ?

ಎಸ್‌ಸಿ, ಎಸ್‌ಟಿ ಮುಂತಾದ ನಿರ್ಲಕ್ಷಿತ ಸಮುದಾಯಗಳ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಬಾರಿ ಆಯ್ಕೆಯಾಗಿರುವುದು ಮತ್ತೊಂದು ಕುತೂಹಲಕರ ಸಂಗತಿ. ಅದರಲ್ಲೂ ಜನರಲ್ ಕೆಟಗರಿಯಲ್ಲಿ ಸಾಕಷ್ಟು ಮಂದಿ ದೀನದಲಿತರು ಆಯ್ಕೆಯಾಗಿರುವುದು ಈ ಬಾರಿಯ ವಿಶೇಷ. ಹಾಗೆ ನೋಡಿದರೆ ಇಷ್ಟು ಪ್ರಮಾಣದಲ್ಲಿ ಕೆಳವರ್ಗದ ಅಭ್ಯರ್ಥಿಗಳು ಆಯ್ಕೆಯಾಗಿರುವುದು ಕೆಪಿಎಸ್‌ಸಿ ಇತಿಹಾಸದಲ್ಲಿ ಇದೇ ಮೊದಲು. ಈ ಅಂಶ ಜಾತಿವಾದಿಗಳಿಗೆ ನುಂಗಲಾರದ ತುತ್ತಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಜಾತಿವಾದಿಗಳು ಈ ವಿವಾದವನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದನ್ನು ಸಾಮಾಜಿಕ ನ್ಯಾಯಪ್ರಜ್ಞೆ ಇರುವವರು ತಳ್ಳಿಹಾಕಲು ಸಾಧ್ಯವಿಲ್ಲ.

ದಲಿತರು ಮತ್ತು ಅಲ್ಪಸಂಖ್ಯಾತ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಿದ್ದನ್ನು ಕಂಡು ಸಹಿಸಲಾಗದ ಕೇಶವಕೃಪದ ವಟುಗಳು ಈ ಪ್ರಕರಣವನ್ನು ಸಾಕಷ್ಟು ದೊಡ್ಡದು ಮಾಡಲು ಷಡ್ಯಂತ್ರ ಹೆಣೆದಿದ್ದಾರೆ ಎಂಬ ಸಂಗತಿ ಈಗ ಹಾದಿಬೀದಿಗಳಲ್ಲಿ ಚರ್ಚೆಯ ಸಂಗತಿಯಾಗಿದೆ. ಕೆಪಿಎಸ್‌ಸಿ ಯಲ್ಲಿರುವವರೆಲ್ಲರೂ ಸಾಚಾಗಳು ಸತ್ಯಹರಿಶ್ಚಂದ್ರರು ಎಂದು ಹೇಳಲಾಗದು ಎಂಬುದೇನೋ ನಿಜ. ಆದರೆ ಎಸ್‌ಸಿ. ಎಸ್‌ಟಿ ಅಭ್ಯರ್ಥಿಗಳು ದೊಡ್ಡ ಪ್ರಮಾಣದಲ್ಲಿ ಆಯ್ಕೆಯಾಗುವುದನ್ನು ಸಹಿಸಲಾಗದ ಜಾತಿವಾದಿ ಮನಸ್ಸುಗಳು ಒಟ್ಟಾರೆ ಈ ಪ್ರಕ್ರಿಯೆಯಲ್ಲಿ ಕೈವಾಡ ತೋರುತ್ತಿರುವುದೂ ಅಷ್ಟೇ ಸತ್ಯ. ಜೊತೆಗೆ ಕೆಲವು ಅಧಿಕಾರಿಗಳ ಆಂತರಿಕ ಸ್ವಪ್ರತಿಷ್ಠೆಗಳೂ ಸೇರಿಕೊಂಡು ಈ ಸಮಸ್ಯೆ ದಿನೇದಿನೇ ಜಟಿಲವಾಗುತ್ತಿದೆ.

ಮೊದಲನೆಯದಾಗಿ ಈ ಒಟ್ಟಾರೆ ಪ್ರಕ್ರಿಯೆ ನಡೆದಿದ್ದು ಈ ಸರ್ಕಾರದ ಅವಧಿಗಿಂತ ಪೂರ್ವದಲ್ಲಿ. 2011ರಲ್ಲಿ ಅಂದಿನ ಸರ್ಕಾರ 362 ಗೆಜೆಟೆಡ್ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿತ್ತು. ಕೇವಲ 362 ಹುದ್ದೆಗಳಿಗೆ ಬಂದ ಅರ್ಜಿಗಳ ಸಂಖ್ಯೆ 1,38,800! ಅದರಲ್ಲಿ 91,367 ಮಂದಿ ಪ್ರಿಲಿಮಿನರಿ ಪರೀಕ್ಷೆ ಬರೆದರು. ಇವರಲ್ಲಿ 1:20 ರ ಅನುಪಾತದಲ್ಲಿ 7188 ಮಂದಿ ಮುಖ್ಯ ಪರೀಕ್ಷೆಗಾಗಿ ಆಯ್ಕೆ ಮಾಡಲಾಯಿತು. 2012ರ ಡಿಸೆಂಬರ್‌ನಲ್ಲಿ ಮುಖ್ಯಪರೀಕ್ಷೆ ನಡೆದು 1085 ಮಂದಿಯನ್ನು (1:3 ರ ಅನುಪಾತದಲ್ಲಿ) ಸಂದರ್ಶನದ ಮೂಲಕ ಅಂತಿಮ ವ್ಯಕ್ತಿತ್ವ ಪರೀಕ್ಷೆಗೆ ಆರಿಸಲಾಗಿದೆ.

ಈ ನೇಮಕಾತಿ ಪ್ರಕ್ರಿಯೆ ಸಿದ್ದರಾಮಯ್ಯ ಸರ್ಕಾರ ರಚನೆಯಾಗುವಷ್ಟರಲ್ಲೇ ಒಂದು ವಿವಾದವಾಗಿ ಮಾರ್ಪಟ್ಟಿತ್ತು. ಆದರೆ ಈ ಪ್ರಕರಣವನ್ನು ಸಿದ್ದರಾಮಯ್ಯನವರ ಸರ್ಕಾರದ ತಲೆಗೆ ಕಟ್ಟಿ, ಇಕ್ಕಟ್ಟಿಗೆ ಸಿಲುಕಿಸಲು ರಾಜಕೀಯ ಪಕ್ಷಗಳು ಹಾಗೂ ಕೆಲವು ಮಾಧ್ಯಮ ಸಂಸ್ಥೆಗಳು ಇಸ್ಸಿಲ್ಲದಂತೆ ಹೆಣಗುತ್ತಿರುವುದಂತೂ ನಾಚಿಕೆಗೇಡಿನ ಸಂಗತಿ.

ಇಂಥಾ ಸಂದಿಗ್ಧ ಸಂದರ್ಭದಲ್ಲಿ ಸರ್ಕಾರದ ನಡವಳಿಕೆ ಬಹಳ ಮಹತ್ವದ್ದು. ದಿನೇದಿನೇ ಈ ವಿವಾದ ಗೊಂದಲದ ಗೂಡಾಗುತ್ತಿರುವ ಪರಿಣಾಮವಾಗಿ ಅಮಾಯಕ ಅಭ್ಯರ್ಥಿಗಳು ಬಲಿಪಶುಗಳಾಗುವ ಆತಂಕ ಎದುರಿಸುತ್ತಿದ್ದಾರೆ.



ನೇಮಕಾತಿ ಪ್ರಕ್ರಿಯೆಯನ್ನೇ ರದ್ದುಪಡಿಸುವುದಾಗಿ ಪ್ರಕಟಗೊಂಡ ಸುದ್ದಿ ತಿಳಿದು ಇಬ್ಬರು ಅಭ್ಯರ್ಥಿಗಳ ಪೋಷಕರು ಆತ್ಮಹತ್ಯೆ ಮಾಡಿಕೊಂಡಿರುವ ದಾರುಣ ವರದಿಗಳೂ ಬಂದಿವೆ. ಅಂದರೆ ಆ ದೀನದಲಿತ ಅಭ್ಯರ್ಥಿಗಳ ಪರಿಸ್ಥಿತಿಯ ಸೂಕ್ಷ್ಮತೆಯನ್ನು ಯಾರಾದರೂ ಅರ್ಥಮಾಡಿಕೊಳ್ಳಬಹುದು.

ಈ ವಿಷಯದಲ್ಲಿ ಸರ್ಕಾರ ತೀವ್ರ ಒತ್ತಡದಲ್ಲಿರುವುದು ಮೇಲುನೋಟಕ್ಕೆ ಕಂಡುಬರುವ ಸಂಗತಿ. ಅಧಿಕಾರಶಾಹಿಗಳ ಹಾಗು ರಾಜಕೀಯವಾಗಿ ಆಯಕಟ್ಟಿನ ಸ್ಥಾನದಲ್ಲಿ ಆಸೀನರಾಗಿರುವ ವ್ಯಕ್ತಿಗಳ ಸ್ವಹಿತಾಸಕ್ತಿ ಹಾಗೂ ಸ್ವಪ್ರತಿಷ್ಠೆಗಳಿಗೆ ಸರ್ಕಾರ ಮಣಿದರೆ ಅಮಾಯಕ ಅಭ್ಯರ್ಥಿಗಳಿಗೆ ಅನ್ಯಾಯವಾಗುವುದು ಖಚಿತ.

ಇಂಥಾ ಸಂದರ್ಭದಲ್ಲಿ ಸರ್ಕಾರ ಕಳೆಯನ್ನು ತೆಗೆದು ಬೆಳೆಯನ್ನು ಬಲಪಡಿಸಬೇಕೇ ಹೊರತು ಇಡೀ ಬೆಳೆಯನ್ನೇ ನಾಶಪಡಿಸಲು ಚಿಂತಿಸುವುದು ಯೋಗ್ಯವಲ್ಲ.

ಈ ವಿಷಯದಲ್ಲಿ ನಮ್ಮ ನ್ಯಾಯದಾನ ವ್ಯವಸ್ಥೆಯ ಮಾದರಿಯನ್ನು ಅನುಸರಿಸಬಹುದು. ನ್ಯಾಯದಾನ ವ್ಯವಸ್ಥೆಯಲ್ಲಿ ಯಾವುದೇ ಕಾರಣಕ್ಕೂ ಯಾವೊಬ್ಬ ನಿರಪರಾಧಿಗೂ ಶಿಕ್ಷೆಯಾಗದಂತೆ ಸಾಕಷ್ಟು ಎಚ್ಚರಿಕೆ ತೆಗೆದುಕೊಳ್ಳಲಾಗುತ್ತದೆ. ಹೀಗಿರುವಾಗ ನ್ಯಾಯಬದ್ಧವಾಗಿ ಆಯ್ಕೆಯಾಗಿರುವ ದೀನದಲಿತರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಸಾಕಷ್ಟು ಕಸರತ್ತು ನಡೆಸಬೇಕಾದ ಅಗತ್ಯವಂತೂ ಇದೆ.

ಹಾಗೆ ನೋಡಿದರೆ ಕೆಪಿಎಸ್‌ಸಿ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ಎಂಬುದು ಇದೇ ಮೊದಲನೆಯದಲ್ಲ; ಅಥವಾ ಇಂದಿಗೆ ಮುಗಿಯುವಂಥದೂ ಅಲ್ಲ. ಹೀಗಾಗಿ ಕೆಪಿಎಸ್‌ಸಿಯಲ್ಲಿ ಪಾರದರ್ಶಕತೆಯನ್ನು ತರಲು ಸರ್ಕಾರ ಈ ಕೂಡಲೇ ಕ್ರಮ ತೆಗೆದುಕೊಳ್ಳಬೇಕು.

ಇದರ ಜೊತೆಗೆ ಈಗಾಗಲೇ ಖಾಲಿಯಾಗಿರುವ ಸುಮಾರು 250 ಹುದ್ದೆಗಳನ್ನು ಭರ್ತಿ ಮಾಡಲು ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಆ ಮೂಲಕ ಮತ್ತಷ್ಟು ಅವಕಾಶಗಳನ್ನು ಹೆಚ್ಚಿಸಿದಂತಾಗುವುದಲ್ಲದೆ ಸರ್ಕಾರದ ಮೇಲಿನ ಒತ್ತಡವೂ ಕಡಿಮೆಯಾಗಬಹುದು.

ಈಗ ಆಯ್ಕೆಯಾಗಿರುವ ಅಭ್ಯರ್ಥಿಗಳಲ್ಲಿ ಭ್ರಷ್ಟಾಚಾರದಲ್ಲಿ ಪಾಲ್ಗೊಂಡಿರುವವರನ್ನು ಹೊರತುಪಡಿಸಿ ಉಳಿದವರ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು. ಅಗತ್ಯ ಕಂಡುಬಂದಲ್ಲಿ ಎಲ್ಲಾ ಅಭ್ಯರ್ಥಿಗಳಿಂದಲೂ "ಮುಚ್ಚಳಿಕೆ ಪತ್ರ" ಬರೆಸಿಕೊಂಡ ನಂತರವೇ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಬಹುದು.

ಅದು ಬಿಟ್ಟು ನೆಗಡಿ ಬಂದಾಗ ಮೂಗನ್ನು ಕೊಯ್ಯುವ ಕ್ರಮ ಅಪೇಕ್ಷಣೀಯ ಎನಿಸಿಕೊಳ್ಳುವುದಿಲ್ಲ. ಇದರಿಂದ ತೊಂದರೆಗೆ ಸಿಲುಕುವವರು ಅಮಾಯಕ ಅಭ್ಯರ್ಥಿಗಳು ಎಂಬುದನ್ನು ಸರ್ಕಾರ ಮರೆಯಬಾರದು.


● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಅಕ್ಷರ ದೇಗುಲದಲ್ಲಿ...

07 ◀◀ ವೆಂಕಟರೆಡ್ಡಿ ಜಗಳ ಪೊಲೀಸ್ ಠಾಣೆ ಏರುವಂತೆ ಮಾಡಿದ್ದರು. ವೆಂಕಟರೆಡ್ಡಿ ಮೇಲೆ ಕೇಸುಗಳು ದಾಖಲಾಗುವಂತೆ ಮಾಡಲು ಪರಿಶಿಷ್ಟ ಗುಂಪಿನ ಕೆಲವರಿಗೆ ಮದ್ಯಪಾನ ಮಾಡಿಸಿ ಶಾಲಾ ವೇಳೆಯಲ್ಲಿ ಶಾಲಾ ಆವರಣದಲ್ಲಿ ಅರಚಾಡುವಂತೆ ಹೇಳಿಕೊಡುತ್ತಿದ್ದರು. ಮುಖ್ಯ ಶಿಕ್ಷಕನಾಗಿ ಅದನ್ನೇನಾದರು ಪ್ರಶ್ನಿಸಲು ವೆಂಕಟರೆಡ್ಡಿ ಮುಂದಾದರೆ ಸುಖಾಸುಮ್ಮನೆ ಜಗಳ ತೆಗೆದು ವೆಂಕಟರೆಡ್ಡಿ ಮೇಲೆ ಜಾತಿನಿಂದನೆ ಕೇಸ್ ಜಡಿಸುವುದು ಅವರ ಹುನ್ನಾರವಾಗಿರುತ್ತಿತ್ತು; ಇದೆಲ್ಲಕ್ಕೂ ವೆಂಕಟರೆಡ್ಡಿ ಜಗ್ಗದಿದ್ದಾಗ ಒಮ್ಮೆ ಶಾಲಾ ಆಡಳಿತ ಮಂಡಳಿ ಸಭೆಯ ನೆಪದಲ್ಲಿ ಕೆಲ ಲೋಕಲ್ ಗೂಂಡಾಗಳನ್ನು ಕರೆತಂದಿದ್ದ ಅಧ್ಯಕ್ಷ ಹನುಮಂತರಾವ್ ಮುಖ್ಯ ಶಿಕ್ಷಕನ ಮೇಲೆ ಹಲ್ಲೆಗೂ ಯತ್ನಿಸಿದ್ದ. ಹಾಗೂಹೀಗೂ ಬಚಾಯಿಸಿಕೊಂಡು ಎಸ್ಕೇಪಾಗಿದ್ದ ಮುಖ್ಯಶಿಕ್ಷಕ ಇವರ ಭಯಕ್ಕೆ ಕೆಲ ದಿನ ಶಾಲೆಯತ್ತ ತಲೆಯನ್ನೇ ಹಾಕಿರಲಿಲ್ಲ, ಅದನ್ನೇ ಕಾದುಕೊಂಡಿದ್ದ ಹನುಮಂತರಾವ್ ಮತ್ತು ಸುಧಾಕರ್ ರೆಡ್ಡಿ ಅನಧಿಕೃತ ಗೈರುಹಾಜರಿಯ ನೆಪವೊಡ್ಡಿ ಆತನನ್ನು ಕೆಲಸದಿಂದಲೇ ಕಿತ್ತು ಹಾಕಿದ್ದರು.

ಸೃಷ್ಟಿಯಾದವು ಸುಳ್ಳು ಹುದ್ದೆಗಳು

ನಾರೇಮದ್ದೆಪಲ್ಲಿಯ ವಿನಾಯಕ ಪ್ರೌಢಶಾಲೆಗೆ ಸರ್ಕಾರಿ ಅನುದಾನದ ಜೆಬಿ ಸಿಗುವ ಸೂಚನೆ ಕಾಣಿಸುತ್ತಿದ್ದಂತೆಯೇ ಅಲ್ಲಿ ಅಕ್ರಮಗಳ ಭರಾಟೆ ಮತ್ತಷ್ಟು ಜೋರಾಗಿತ್ತು, ಜಮೀನು ನೀಡಿದ್ದ ಅನಂತಶಾಸ್ತ್ರಿಯ ಬದಲು ಕೆಲಸವನ್ನೇ ಮಾಡದ ಕಾನ್ವೆಂಟ್ ಮಾಸ್ತರನಿಗೆ ಗುಮಾಸ್ತ ಹುದ್ದೆಯ ಭಾಗ್ಯ ಕೊಡಿಸಿದ್ದ ಸುಧಾಕರ್ ರೆಡ್ಡಿ ಅಕ್ಷರಶಃ ಹುದ್ದೆಗಳ ಮಾರಾಟದ ದಂಧೆಯನ್ನೇ ಆರಂಭಿಸಿಬಿಟ್ಟಿದ್ದ. ಲಕ್ಷಾಂತರ ಹಣ ಪಡೆದು ಅನರ್ಹರಿಗೆಲ್ಲ ಸೇವಾಭಾಗ್ಯ ಕಲ್ಪಿಸಿದ್ದಾನೆ. 2010ರವರೆಗೂ ಆ ಶಾಲೆಯಲ್ಲಿ ತೋಟಗಾರಿಕೆ ಶಿಕ್ಷಕರೇ ಇರಲಿಲ್ಲ, ಆದರೂ ಎನ್.ನಾಗರಾಜ್ ಎಂಬಾತ 1993-94 ರಿಂದಲೂ ಹಾರ್ಟಿಕಲ್ಚರ್ ಶಿಕ್ಷಕನಾಗಿದ್ದಾನೆ ಎಂದು ತೋರಿಸಿದ್ದಾರೆ. ಅದೇರೀತಿ ಹನುಮಸುಧಾ ಭಯಕ್ಕೆ ಶಾಲೆಯಿಂದ ತೆಗೆದುಹಾಕಲ್ಪಟ್ಟ ಮುಖ್ಯ ಶಿಕ್ಷಕ ವೆಂಕಟರೆಡ್ಡಿಯ ಸೇವಾನುಭವವನ್ನು ಮತ್ತೊಬ್ಬ ನಾಗರಾಜ್ ಎನ್ನುವ ಆಸಾಮಿಗೆ ಲಭಿಸುವಂತೆ ಮಾಡಿದ್ದಾರೆ. ಆರಂಭದಿಂದಲೂ ಗಣಿತ ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದ ಸುರೇಂದ್ರ ಬಾಬು ಎಂಬವರಿಗೆ 2007ರಲ್ಲಿ ಸರ್ಕಾರಿ ಕೆಲಸ ಸಿಕ್ಕಿದ್ದರಿಂದ ಅವರ ಸ್ಥಾನಕ್ಕೆ 2007ರಿಂದ ನಾಗಮಲ್ಲಿರೆಡ್ಡಿ ಎಂಬಾತನನ್ನು ಕೆಲಸಕ್ಕೆ ತೆಗದುಕೊಳ್ಳಲಾಗಿತ್ತು. ಆದರೆ ನಾಗಮಲ್ಲಿರೆಡ್ಡಿಯೂ 1993ರಿಂದಲೇ ಕೆಲಸ ಮಾಡಿಕೊಂಡಿದ್ದರೆಂದು ಸರ್ಕಾರದ ಸೌಲತ್ತುಗಳಿಗೆ ಶಿಫಾರಸ್ಸು ಮಾಡಲಾಗಿದೆ. 2008ರಲ್ಲಿ ಜೀವಶಾಸ್ತ್ರ ಶಿಕ್ಷಕನಾಗಿ ಸೇರಿಕೊಂಡಿರುವ ಮುನಿಕೃಷ್ಣಪ್ಪನಿಗೂ ಅವರಿಗಿಂತ ಮುಂಚೆ ಕೆಲಸ ಮಾಡಿಕೊಂಡಿದ್ದ ಆದಿನಾರಾಯಣಪ್ಪನವರ ಸೇವಾನುಭವವನ್ನು ದತ್ತು ನೀಡಿ ಕವಾಯಿ ಮಾಡಿಕೊಂಡಿದ್ದಾರೆ. ಹೀಗೆ ಒಂದೊಂದು ಅಕ್ರಮ ಶಿಫಾರಸ್ಸಿಗೂ ಭಾರಿ ಹಣ ಕೈ ಬದಲಾವಣೆಯಾಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಇದಕ್ಕೆಲ್ಲ ಅಧ್ಯಕ್ಷ



ಕಿಮ್ಮನೆ ರತ್ನಾಕರ್

ಹನುಮಂತರಾವ್ ಮತ್ತು ಹೆಂಡತಿಯನ್ನು ಕಾರ್ಯದರ್ಶಿಯನ್ನಾಗಿಸಿ ಮೆರೆದಾಡುತ್ತಿರುವ ದೈಹಿಕ ಶಿಕ್ಷಕ ಸುಧಾಕರ್ ರೆಡ್ಡಿಯ ಕರಾಮತ್ತುಗಳೆ ಕಾರಣ ಎನ್ನುವುದರಲ್ಲಿ ಎರಡು ಮಾತಿಲ್ಲ. ಯಾಕೆಂದರೆ ಹಲವಾರು ಕಡೆ ಸ್ವತಃ ಸುಧಾಕರ್ ರೆಡ್ಡಿಯೇ 'ಸರ್ಕಾರದ ಅನುದಾನದ ಫೈಲ್ ಮೂವ್ ಮಾಡುವಲ್ಲಿ ನನ್ನ ಹನ್ನೆರಡು ಲಕ್ಷ ಕೈಬಿಟ್ಟಿದೆ' ಎಂದು ಹೇಳಿಕೊಂಡು ತಿರುಗಾಡುತ್ತಿದ್ದಾನೆ. ಎಲ್ಲಾ ಸರಿಯಿದ್ದರೆ ಅಷ್ಟೆಲ್ಲಾ ಲಂಚ ಪ್ರಸ್ತಾಪ ಏಕಾಗುತ್ತಿತ್ತು?

ಇನ್ನಾದರು ಶಿಕ್ಷಣ ಇಲಾಖೆಯ ಸ್ಥಳೀಯ ಡಿಡಿಪಿಐ ಮತ್ತು ಬಿಇಒಗಳು ಎಚ್ಚೆತ್ತುಕೊಂಡು 'ಋಣಮುಕ್ತ'ರಾಗಿ ಖಡಕ್ ತನಿಖೆಗೆ ಇಳಿಯದೇ ಹೋದರೆ ಸರ್ಕಾರದ ಅನುದಾನ ಅನರ್ಹರ ಕೈ ಸೇರುವುದಲ್ಲದೆ ಅರ್ಹರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಇಂತಹ ಭ್ರಷ್ಟ ವಾತಾವರಣದಲ್ಲಿ ವಿದ್ಯಾಭ್ಯಾಸ ಮಾಡಿದ ಮಕ್ಕಳು ಮುಂದೆ ಅದಿನ್ನೆಂತಹ ಪ್ರಜೆಗಳಾಗಬಹುದೆನ್ನುವ ಕಾರಣಕ್ಕಾದರು ಶಿಕ್ಷಣ ಇಲಾಖೆ ಇಂಥವರ ಕಪಿಮುಷ್ಟಿಯಿಂದ 'ವಿನಾಯಕ ಪ್ರೌಢಶಾಲೆ'ಯನ್ನು ರಕ್ಷಿಸಬೇಕಿದೆ.

● ಗಿರೀಶ್ ತಾಳಿಕಟ್ಟೆ

ಫೀನಿಕ್ಸ್ ಆಗುತ್ತಾರಾ ಗೌಡರು?



'ಬೂದಿಯಿಂದ ಮತ್ತೆ ಫೀನಿಕ್ಸ್‌ನಂತೆ ಹುಟ್ಟಿಬರುತ್ತೇನೆ' ಎಂದು ಅಂದು ಗುಡುಗಿದ್ದರು 'ಕರ್ನಾಟಕದ ದೊಡ್ಡಗೌಡ್ರು'.

ರಾಜಕೀಯ ಆಸಕ್ತರು ಬಹುತೇಕ ಮರೆತಿರಲಿಕ್ಕಿಲ್ಲ. ಅಂದಿನ ಎಐಸಿಸಿ ಅಧ್ಯಕ್ಷ ಸೀತಾರಾಂ ಕೇಸರಿ ಅವರ ಅವಕೃಪೆಗೆ ಪಾತ್ರರಾಗಿ ಲೋಕಸಭೆಯಲ್ಲಿ ತಮ್ಮ ವಿರುದ್ಧ ಮಂಡಿಸಲಾಗಿದ್ದ ಅವಿಶ್ವಾಸ ಗೊತ್ತುವಳಿಗೆ ಉತ್ತರಿಸುತ್ತಿದ್ದ ಅಂದಿನ ಪ್ರಧಾನಿ ದೇವೇಗೌಡರು ಗುಡುಗಿದ್ದು ಅಕ್ಷರಶಃ ಇದೇ ವಾಕ್ಯವನ್ನು. ಕರ್ನಾಟಕದ ಶೂದ್ರ ಜನಾಂಗದ 'ಚಾಣಕ್ಯ ರಾಜಕಾರಣಿ' ದೇವೇಗೌಡರ ಈ ಸವಾಲನ್ನು ನಮ್ಮ ಕನ್ನಡಿಗ ರಾಜಕಾರಣಿಗಳೇ ಅವಹೇಳನ ಮಾಡಿದ್ದರು. 'ಏಕ್ ವರ್ಷ್ ಕಾ ಸುಲ್ತಾನ್' ಎಂದು ಕನ್ನಡಿಗ ಪ್ರಧಾನಿಯ ಪದಚ್ಯುತಿಯನ್ನು ಸೆಲೆಬ್ರೆಟ್ ಮಾಡಿದ್ದರು.

ಆದರೆ ಪ್ರಬುದ್ಧ ಓದುಗರನ್ನು ಹೊಂದಿರುವ 'ದಿ ಹಿಂದು' ತನ್ನ ನ್ಯಾಷನಲ್ ಎಡಿಷನ್‌ನಲ್ಲಿ ಪ್ರಕಟಿಸಿದ ಸುದ್ದಿಯ ಮುಖಪುಟದ ತಲೆಬರಹ ಹೀಗಿತ್ತು; **'Gowda lost confidence; but won hearts'**. ದೇವೇಗೌಡರು ಅಂದಿನ ಮಟ್ಟಿಗೆ ಅದೆಷ್ಟು ಜನಸಾಮಾನ್ಯರ ಹೃದಯ ಗೆದ್ದಿದ್ದರೋ ಇಲ್ಲವೊ ಗೊತ್ತಿಲ್ಲ. ಆದರೆ ರಾಷ್ಟ್ರಮಟ್ಟದ ಜಾತ್ಯತೀತ ನಾಯಕರಾದ ಸೀತಾರಾಂ ಯೆಚೂರಿಯಂತಹ ಎಡಪಂಥೀಯರಿಂದ ಹಿಡಿದು ಮುಲಾಯಂಸಿಂಗ್ ಯಾದವ್‌ರಂತಹವರ ಮನಸ್ಸನ್ನೂ ಗೆದ್ದುಬಿಟ್ಟಿದ್ದರು. ಕುಮಾರಸ್ವಾಮಿ ಬಿಜೆಪಿಯೊಂದಿಗಿನ ಸಖ್ಯ ಮಾಡಿಕೊಂಡರು ಎಂಬ ಕಪ್ಪುಚುಕ್ಕೆಯಿದ್ದರೂ ಗೌಡರು ಈಗ 'ತೃತೀಯ ರಂಗ'ದ ಮರುಹುಟ್ಟಿಗೆ ಪ್ರಮುಖ ಪಾತ್ರಧಾರಿಯಾಗಿ, ಒಂದರ್ಥದಲ್ಲಿ ಅಘೋಷಿತ ನಾಯಕರೂ ಆಗಿಬಿಟ್ಟಿದ್ದಾರೆ. ತೃತೀಯ ರಂಗ ಅಧಿಕಾರಕ್ಕೆ ಬರುತ್ತೋ ಇಲ್ಲವೋ, ದೇವೇಗೌಡರು ಮತ್ತೊಮ್ಮೆ ಪ್ರಧಾನಿಯಾಗುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ ರಾಷ್ಟ್ರ ರಾಜಕಾರಣದಲ್ಲಿ ಫೀನಿಕ್ಸ್ ರೀತಿ 'ಸುಟ್ಟ ಬೂದಿಯಿಂದಲೇ ಹುಟ್ಟಿಬರುವ ಅವಕಾಶ'ವಂತೂ ಗೋಚರಿಸುತ್ತಿದೆ. ಇದಕ್ಕೆ ಇಂಬಾಗಿ ಬೇಕಿರೋದು ಕರ್ನಾಟಕದಿಂದ ಸಾಕಷ್ಟು ಸಂಖ್ಯೆಯಲ್ಲಿ ಜೆಡಿಎಸ್ ಅಭ್ಯರ್ಥಿಗಳು ಗೆದ್ದುಬರುವುದು.

ಅಂಡರ್ ಎಸ್ಟಿಮೇಟ್

ಇವತ್ತು ಚುನಾವಣಾಪೂರ್ವ ಸಮೀಕ್ಷೆಗಳನ್ನು ಏಕಕಂಠದಿಂದ ಉಲಿಯುತ್ತಿರುವ ಮಾಧ್ಯಮ ಕ್ಷೇತ್ರದ ವಿಪ್ರವೃಂದ 'ಜೆಡಿಎಸ್ ಅಬ್ಬಬ್ಬಾ ಎಂದರೆ ಎರಡು ಸ್ಥಾನ ಗೆಲ್ಲಬಹುದಷ್ಟೇ. ಒಂದು ಹಾಸನ, ಎರಡು ತುಮಕೂರು' ಎಂದು ಬೊಂಬಡ ಬಜಾಯಿಸುತ್ತಿವೆ. ಇಂದು ಮಾತ್ರವಲ್ಲ; ಕಳೆದೆರಡು ದಶಕಗಳಿಂದಲೂ. ಹೀಗೆ 'ಲೋಕಸಭಾ ಚುನಾವಣೆಗಳಲ್ಲಿ ಎರಡಂಕಿ ದಾಟಲಾರದು. ವಿಧಾನಸಭಾ ಚುನಾವಣೆಗಳಲ್ಲಿ ಮೂವತ್ತಕ್ಕಿಂತ ಹೆಚ್ಚು ಗಳಿಸಲಾರದು' ಎಂದು ತುತ್ತೂರಿ ಊದುತ್ತಲೇ ಬಂದಿವೆ. ಆದರೆ ಜೆಡಿಎಸ್‌ನ ನಿಜವಾದ ಸಾಮರ್ಥ್ಯವನ್ನು ಮುಂಚಿತವಾಗಿಯೇ ತಿಳಿಸುತ್ತಾ ಬಂದಿದ್ದು ನಮ್ಮ ಪತ್ರಿಕೆ ಮಾತ್ರ. ಹಿಂದಿನ ಚುನಾವಣಾ ಸಮೀಕ್ಷೆಗಳಲ್ಲಿ ಪತ್ರಿಕೆ ಜೆಡಿಎಸ್‌ಗೆ ನೀಡಿದ್ದ ಮಾರ್ಕ್ಸ್ ಹೆಚ್ಚೂಕಡಿಮೆ ನಿಖರವಾಗಿತ್ತು.

1996ರಲ್ಲಿ ರಾಜ್ಯದಿಂದ ಲೋಕಸಭೆಗೆ ಹದಿನೆಂಟು ಸ್ಥಾನಗಳನ್ನು ಗೆದ್ದು ಎಲ್ಲರೂ ಹುಬ್ಬೇರುವಂತೆ ಮಾಡಿತ್ತು ಜೆಡಿಎಸ್. ಅಚ್ಚರಿಯ ಬೆಳವಣಿಗೆಯಲ್ಲಿ ದೇವೇಗೌಡರು ತೃತೀಯರಂಗದ ನಾಯಕರಾಗಿ ಪ್ರಧಾನಿಯಾಗಿಯೂ ಬಿಟ್ಟರು. ಅಷ್ಟೇ ರಭಸವಾಗಿ ಮಾಜಿಯೂ ಆಗಿಹೋದರು.


ಇಂದಿನ ಪರಿಸ್ಥಿತಿಯೇ ಬೇರೆ


ಅಂದು ದೇವೇಗೌಡರು ಪ್ರಧಾನಿಯಾದ ಸನ್ನಿವೇಶವೇ ಬೇರೆ. ಆಗವರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಕೈಯಲ್ಲಿ ಅಧಿಕಾರವಿತ್ತು, ಕಾಂಚಾಣವಿತ್ತು. ಆದರೆ ಇಂದು ಅಧಿಕಾರ ಕಳೆದುಹೋಗಿ ವರ್ಷಗಳೇ ಉರುಳಿಹೋಗಿವೆ. ಒಂದೆಡೆ ದೆಹಲಿ ಗದ್ದುಗೆಯಲ್ಲೂ ಕಾಂಗ್ರೆಸ್. ಕರ್ನಾಟಕ ಸಿಂಹಾಸನದ ಮೇಲೂ ಕಾಂಗ್ರೆಸ್. ಇದರ ಜೊತೆಗೆ ಮೋದಿ ಅಲೆಯೆಂಬ ಭ್ರಮೆಯಲ್ಲಿ ತೇಲುತ್ತಿರುವ ಝಣಝಣ ಅಕ್ರಮ ಕಾಂಚಾಣದ ಬಿಜೆಪಿ. ಇಂತಹವರ ಮಧ್ಯೆ ಜೆಡಿಎಸ್ ಎರಡಂಕಿ ದಾಟೋದು ಅಷ್ಟು ಸುಲಭದ ಮಾತಲ್ಲ. ಆದರೂ 'ಚಾಣಕ್ಯ ರಾಜಕಾರಣಿ' ದೇವೇಗೌಡರ ತಂತ್ರಗಾರಿಕೆಯನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಸಾಧ್ಯವಾದಷ್ಟು ಸ್ಥಾನಗಳನ್ನು ಗೆಲ್ಲಲು ಏನೆಲ್ಲಾ ಮಾಡಲು ಜೆಡಿಎಸ್ ತಯಾರಾಗಿದೆ? ಜೆಡಿಎಸ್ ಎಷ್ಟು ಸ್ಥಾನ ಗೆಲ್ಲಬಹುದು? ಎಲ್ಲೆಲ್ಲಿ? ಎಂಬ ಕುತೂಹಲ ಇದ್ದೇ ಇದೆ.

ಯೋಗಿಯ ಜೆಡಿಎಸ್ ಪ್ರವೇಶ

ಬೆಳ್ಳಿತೆರೆಯ 'ಸೈನಿಕ' ಯೋಗೇಶ್ವರ್ ಸೈಕಲ್‌ನಿಂದ ಇಳಿದು ತೆನೆ ಹೊರಲು ತಯಾರಾಗಿದ್ದಾರೆ ಎಂಬುದು ಲೇಟೆಸ್ಟ್ ನ್ಯೂಸ್. ಆರು ತಿಂಗಳ ಹಿಂದಷ್ಟೇ ಬೆಂಗಳೂರು ಗ್ರಾಮಾಂತರ ಲೋಕಸಭಾ ಉಪಚುನಾವಣೆಯಲ್ಲಿ ಮುಖಭಂಗ ಅನುಭವಿಸಿದ್ದ ಜೆಡಿಎಸ್ ಶತಾಯಗತಾಯ ಅದನ್ನು ಮರುಗಳಿಸಲು ಯಾವುದೇ ರಾಜಿಗೂ ಸಿದ್ಧ. ಕಳೆದೈದು ವರ್ಷದಲ್ಲಿ ಮೂರು ಚುನಾವಣೆಯಲ್ಲಿ ಸ್ಪರ್ಧಿಸಿ ಹ್ಯಾಟ್ರಿಕ್ ಸಾಧಿಸಿರುವ ಯೋಗೇಶ್ವರ್‌ಗೂ ಇದು ಅನಿವಾರ್ಯ. ಕುಮಾರಣ್ಣನ ಮೇಲೆ ಮುನಿಸಿಕೊಂಡು ಡಿ.ಕೆ. ಶಿವಕುಮಾರ್‌ಗೆ ಒಲಿದಿದ್ದ ಯೋಗೇಶ್ವರ್‌ಗೆ ಜೆಡಿಎಸ್ ಬಗೆಗೆ ಮಮಕಾರ ಹುಟ್ಟಿದಂತಿದೆ. ಅವರು ಪ್ರತಿನಿಧಿಸುವ ಸಮಾಜವಾದಿ ಪಕ್ಷದ ಏಕಮೇವಾದ್ವಿತೀಯ ಶಾಸಕನಾಗಿರುವುದಕ್ಕಿಂತಲೂ, ಸಂಸತ್ ಸದಸ್ಯನಾಗುವುದೇ ಮೇಲು ಎಂಬ ಆಸೆ ಯೋಗೇಶ್ವರ್‌ದು. ಸಮಾಜವಾದಿ ಪಕ್ಷದಿಂದಲೇ ಸ್ಪರ್ಧಿಸಿದರೆ ಚನ್ನಪಟ್ಟಣ ಹೊರತಾಗಿ ಉಳಿದ ವಿಧಾನಸಭಾ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸೋದು ಕಷ್ಟ. ಅದೇ ಜೆಡಿಎಸ್‌ನಿಂದ ಸ್ಪರ್ಧಿಸಿದರೆ, ತನ್ನ ವೈಯಕ್ತಿಕ ವರ್ಚಸ್ಸಿನ ಮತಗಳೊಂದಿಗೆ ಜೆಡಿಎಸ್ ಮತಗಳು ದೊರೆಯುತ್ತವೆ ಎಂಬ ರಣತಂತ್ರ ಈ 'ಸೈನಿಕ'ನದು.

ಹೇಳಿಕೇಳಿ ಬೆಂಗಳೂರು ಗ್ರಾಮಾಂತರ ಜೆಡಿಎಸ್‌ನ ಭದ್ರಕೋಟೆ. ಹಾಗಾಗಿಯೂ ಅಲ್ಲಿ ಕಾಂಗ್ರೆಸ್ ಗೆಲ್ಲೋದಕ್ಕೆ





ಹಲವಾರು ಕಾರಣಗಳಿದ್ದವು. ವಿಶೇಷವಾಗಿ 'ಈ ಕ್ಷೇತ್ರವೇನು ದೇವೇಗೌಡರ ಫ್ಯಾಮಿಲಿಯ ಜಹಾಂಗೀರಾ? ದೇವೇಗೌಡರು ಮಾತ್ರ ಒಕ್ಕಲಿಗರ ಲೀಡ್ರಾ?' ಎಂಬ ಆಕ್ರೋಶ ಜೆಡಿಎಸ್ ಕಾರ್ಯಕರ್ತರಲ್ಲೇ ಇತ್ತು. ಜೊತೆಗೆ ಡಿ.ಕೆ.ಶಿವಕುಮಾರ್ ಬಗ್ಗೆ ಒಕ್ಕಲಿಗರಿಗೇ ಒಂದು ರೀತಿಯ ಸಹಾನುಭೂತಿ ಬಂದುಬಿಟ್ಟಿತ್ತು. ಈ ಬಾರಿ ಡಿ.ಕೆ.ಸುರೇಶ್‌ರನ್ನು ಗೆಲ್ಲಿಸಿದರೆ ನಮ್ಮ ಒಕ್ಕಲಿಗ ಜನಾಂಗದ ಡಿಕೆಶಿ ಮಂತ್ರಿಯಾಗುತ್ತಾರೆ ಎಂಬ ದೂರದ ಆಸೆಯೂ ಆ ಜಾತಿಯವರಿಗಿತ್ತು. ಶತಾಯಗತಾಯ ತನ್ನ ಶಕ್ತಿ ಪ್ರದರ್ಶಿಸಲೇ ಬೇಕು ಎಂಬ ಹಠಕ್ಕೆ ಬಿದ್ದಿದ್ದ ಡಿಕೆಶಿ ಕೂಡಾ ಯೋಗೇಶ್ವರ್ ಅವರಂತಹ ಸಾಂಪ್ರದಾಯಿಕ ಎದುರಾಳಿಯ ಎದುರು ತನ್ನ ಎಂದಿನ ಸ್ವಾಭಿಮಾನವನ್ನು ಬಿಟ್ಟು ಒಳಒಪ್ಪಂದ ಮಾಡಿಕೊಂಡು ಬಿಟ್ಟಿದ್ದರು. ಜೆಡಿಎಸ್‌ನ ಹಿತಶತ್ರುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡ ಶಿವಕುಮಾರ್ ತಮ್ಮನನ್ನು ಎಂಪಿಯನ್ನಾಗಿಸಿದರು. ತನ್ಮೂಲಕ ತಾವು ಸಚಿವರಾಗಿ ಬಿಟ್ಟರು.

ಈಗ ಅಂದಿನ ಚಿತ್ರ ಅದಲುಬದಲಾಗಿದೆ. ಡಿಕೆಶಿಯ ಎಂದಿನ ದರ್ಪ ಮತದಾರರಲ್ಲಿ ಹೇಸಿಗೆ ಹುಟ್ಟಿಸಿದೆ. ದೇವೇಗೌಡರು-ಕುಮಾರಸ್ವಾಮಿಯವರ ಬಗ್ಗೆ ಸಹಾನುಭೂತಿ ಮೂಡಲಾರಂಭಿಸಿದೆ. ಯಾವ ಯೋಗೇಶ್ವರ್ ಅವರಂಥವರನ್ನು ಮುಂದಿಟ್ಟುಕೊಂಡು ಡಿ.ಕೆ. ಸುರೇಶ್‌ರನ್ನು ಗೆಲ್ಲಿಸಿಕೊಂಡರೂ ಅಂತಹ ಯೋಗೇಶ್ವರ್ ಅವರೇ ತೆನೆ ಹೊರಲು ಸಿದ್ಧರಾಗುತ್ತಿರೋದು ಜೆಡಿಎಸ್‌ನಲ್ಲಿ ಆಸೆಯನ್ನು ಚಿಗುರಿಸಿದೆ.

ಬಿಜೆಪಿಗೆ ತೇಜಸ್ವಿನಿ ಗೌಡ

ಕಳೆದ ಚುನಾವಣೆಯಲ್ಲಿ ಅನಿತಾ ಕುಮಾರಸ್ವಾಮಿಯವರ ಪರ ಬಹಿರಂಗ ಪ್ರಚಾರಕ್ಕೆ ಇಳಿದು ಬೆನ್ನಿಗೆ ಇರಿದಿದ್ದ ಮಾಜಿ ಉಪಮುಖ್ಯಮಂತ್ರಿ ಆರ್. ಅಶೋಕ್‌ರ ತಂತ್ರಗಾರಿಕೆ ಜೆಡಿಎಸ್‌ಗೂ ಅರ್ಥವಾಗಿದೆ. ಮಾತ್ರವಲ್ಲ, ಈ ಬಾರಿ ಬಿಜೆಪಿಯಿಂದ ಮಾಜಿ ಸಂಸದೆ ತೇಜಸ್ವಿನಿ ಗೌಡ ಕಣಕ್ಕಿಳಿಯುವ ಸಾಧ್ಯತೆ ಇದೆ. ಮಾಜಿ ಮುಖ್ಯಮಂತ್ರಿ ಸದಾನಂದ ಗೌಡರ ಮಧ್ಯಸ್ಥಿಕೆ ಸಫಲವಾದರೆ, ತೇಜಸ್ವಿನಿ ಗೌಡ ಇಲ್ಲಿ ಅಭ್ಯರ್ಥಿಯಾಗುವುದರಲ್ಲಿ ಎರಡು ಮಾತಿಲ್ಲ. ಡಿ.ಕೆ.ಶಿವಕುಮಾರ್ ಅವರ ಕಡುವೈರಿಯಾದ ತೇಜಸ್ವಿನಿ ಡಿ.ಕೆ. ಗೆಲುವಿನ ಹಾದಿಗೆ ಖಂಡಿತಾ ಮುಳ್ಳಾಗಲಿಲ್ಲ. ಜೊತೆಗೆ ಮೋದಿ ಅಲೆ. ರಾಜರಾಜೇಶ್ವರಿ ನಗರ, ಆನೇಕಲ್, ಬೆಂಗಳೂರು ದಕ್ಷಿಣ – ಇಲ್ಲಿ ಬಿಜೆಪಿಯ ಸಾಕಷ್ಟು ಪ್ರಾಬಲ್ಯವಿದೆ. ಹಾಗಾದರೆ ಕಾಂಗ್ರೆಸ್‌ಗೆ ನಷ್ಟ ನಿಶ್ಚಿತ. ಲಾಭವೇನಿದ್ದರೂ ಜೆಡಿಎಸ್‌ಗೇ ಎಂಬ ಲೆಕ್ಕಾಚಾರವಿದೆ.

ಆದರೆ ಯೋಗೇಶ್ವರ್ ಸೇರ್ಪಡೆ ಬಗ್ಗೆ ಒಂದಷ್ಟು ಅಡೆತಡೆಗಳಿವೆ. ಕರ್ನಾಟಕದಲ್ಲಿ ಎಡಪಂಥೀಯರಿಗೆ ಒಂದು ಸ್ಥಾನ ಬಿಟ್ಟುಕೊಡುವುದೆಂದು ನಿಶ್ಚಯವಾಗಿದೆ. ಸಮಾಜವಾದಿ ಪಕ್ಷಕ್ಕೂ ಒಂದು ಸ್ಥಾನ ಬೇಕೆಂಬುದು ಮುಲಾಯಂಸಿಂಗ್ ಯಾದವ್ ಒತ್ತಾಯ. ಒಂದು ವೇಳೆ ಸಮಾಜವಾದಿ ಪಕ್ಷಕ್ಕೆ ಒಂದು ಸ್ಥಾನ ಬಿಟ್ಟುಕೊಡೋದಾದರೆ ಮುಲಾಯಂರ ಆಯ್ಕೆ ಸಹಜವಾಗಿಯೇ ಯೋಗೇಶ್ವರ್ ಹಾಗೂ ಬೆಂಗಳೂರು ಗ್ರಾಮಾಂತರವಾಗಿರುತ್ತೆ. ಬಲ್ಲ ಮೂಲಗಳ ಪ್ರಕಾರ ದೇವೇಗೌಡರು ಯೋಗೇಶ್ವರ್ ಜೆಡಿಎಸ್ ಪರ ಸ್ಪರ್ಧಿಸುವುದಕ್ಕೆ ಮುಲಾಯಂಸಿಂಗ್‌ರ ಮನ ಒಲಿಸಿದ್ದಾರಂತೆ.

ಮೈಲ್ ಮೇಡಂ ರಮ್ಯಾ ಗತಿ?

ಮಂಡ್ಯ ಮೊದಲಿನಿಂದಲೂ ಜೆಡಿಎಸ್‌ನ ಪಾಳೆಪಟ್ಟು. ದೇವೇಗೌಡರಿಂದ ಕಣ್ಣೀರು ಹಾಕಿಸಿದರು ಎಂದು, ಮಂಡ್ಯದ



ಗಂಡಿಗೆ ಕಲ್ಲೆಸೆದವರು ಎಂದು ಈ ಭಾಗದ ಜನರು ಭಾವಿಸುತ್ತಾರಲ್ಲದೆ ಮಂಡ್ಯಕ್ಕೂ-ದೇವೇಗೌಡರಿಗೂ ಒಂದು ಭಾವನಾತ್ಮಕ ಸಂಬಂಧವಿತ್ತು. ಆದರೆ ಕಳೆದ ಸಂಸತ್ ಚುನಾವಣೆಯ ಸಂದರ್ಭದಲ್ಲಿ ರಮ್ಯಾ ವಿರುದ್ಧ ಮಾಜಿ ಶಾಸಕ ಶ್ರೀನಿವಾಸರ ಅತಿರೇಕದ ಹೇಳಿಕೆಯೇ ಜೆಡಿಎಸ್‌ಗೆ ಮುಳ್ಳಾಯ್ತು ಎನ್ನುವವರೂ ಇದ್ದಾರೆ. ರಮ್ಯಾಳ ಜನ್ಮವೃತ್ತಾಂತವನ್ನು ಶ್ರೀನಿವಾಸ್ ಕೆದಕಿದ್ದೇ ಕಾಂಗ್ರೆಸ್ ವರದಾನವಾಯ್ತು. ಜೊತೆಗೆ ರಮ್ಯಾರ ಸಾಕುತಂದೆಯ ಆಕಸ್ಮಿಕ ಸಾವು, ಆಕೆ ಹರಿಸಿದ ಕಣ್ಣೀರು ಮಂಡ್ಯದ ಗಂಡುಗಳ ಗುಂಡುಕಲ್ಲಿನಂಥ ಹೃದಯವನ್ನೂ ಕರಗಿಸಿಬಿಟ್ಟಿತು. ರಮ್ಯಾ ಎಲ್ಲರ ನಿರೀಕ್ಷೆಗಳನ್ನು ಸುಳ್ಳು ಮಾಡಿ ಜಯಗಳಿಸಿದ್ದರು.

ಅಂದು ಅತ್ತೂ-ಕರೆದು, ಎಲ್ಲರ ಸಹಾನುಭೂತಿಯನ್ನು ಗಿಟ್ಟಿಸಿದ 'ಅರೆಗೌಡ್ತಿ' ರಮ್ಯಾಳನ್ನು ಕಂಡರೆ ಸಾಕು ಈಗ ಅಲ್ಲಿನ ಜನ 'ಮ್ಯಾಡಂ ಬಂದ್ರು ದಾರಿ ಬಿಡಿ, ಮೇಡಂಗೆ ಒಂದು ಮೈಲ್ ಮಾಡಿ' ಎಂದು ಪದ್ದೆ ಕಾಂಗೈಗಳೇ ಕೋರಸ್ ಹಾಡುತ್ತಿವೆ. ಯಾರಾದರೂ ರಮ್ಯಾಳನ್ನು ಯಾವುದಾದರೂ ಕಾರ್ಯಕ್ರಮಕ್ಕೆ ಆಹ್ವಾನಿಸಬೇಕಾದರೆ ಆಕೆಗೊಂದು ಮೇಲ್ ಮಾಡಬೇಕಂತೆ. ಮೇಸೇಜ್ ರವಾನೆಯಾಗಬೇಕಂತೆ. ಯಾರಾಹರು ಮುದುಕಿ 'ಯವ್ವಾ ನನ್ನ ಕೆಲ್ಸ ಆಗ್ಲಿಲ್ಲ ಕಣವ್ವಾ' ಎಂದು ಪ್ರಶ್ನಿಸಿದರೆ 'ಮೆಸೇಜ್ ಕಳಿಸಿದ್ದೀನಲ್ಲ ಅಜ್ಜೆ' ಎಂದು ಉಲಿಯುತ್ತಂತೆ ರಮ್ಯಾ ಎಂಬ ಮಂಡ್ಯದ ಗಿಳಿ. ಪಾಪ ತನ್ನ ಕೆಲಸವಾಗಬೇಕೆಂದರೆ ಒಂದು ಮೊಬೈಲ್ ಬೇಕು ಮತ್ತು ಅದರಿಂದ ಮೆಸೇಜೂ ಕಳಿಸಬೇಕು ಎಂದು ಮತ ಕೊಟ್ಟ ಮುದುಕಿಗೆ ಹೇಗೆ ಗೊತ್ತಾಗಬೇಕು!

ತಿರುಗುಬಿದ್ದಿದ್ದಾರೆ ಮಂಡ್ಯದ ಗಂಡುಗಳು!

ಮಂಡ್ಯದಲ್ಲಿ ರಮ್ಯಾ ಗೆಲ್ಲಲು ಹಲವಾರು ಜನ ಕಾಂಗ್ರೆಸ್ಸಿಗರು ಶ್ರಮಪಟ್ಟಿದ್ದರು. ನಟ ಅಂಬರೀಷ್ ಅವರ ಬಲಗೈ ಬಂಟ ಹಾಗೂ ಯುವ ನಾಯಕ ಗಾಣಿಗ ರವಿಕುಮಾರ್ ಗೌಡನಂತಹ ನಾಯಕರು ರಮ್ಯಾರನ್ನು ಮಂಡ್ಯಾದ್ಯಂತ ಹೊತ್ತು ಮೆರೆಸಿದ್ದರು. ಜೊತೆಗೆ ಶ್ರೀರಂಗಪಟ್ಟಣದ ರವೀಂದ್ರ ಶ್ರೀಕಂಠಯ್ಯ, ಪಾಂಡವಪುರದಲ್ಲಿ ಪುಟ್ಟಣ್ಣಯ್ಯ, ಕೆ.ಆರ್. ಪೇಟೆಯಲ್ಲಿ ಮಾಜಿ ಸ್ಪೀಕರ್ ಕೃಷ್ಣ, ಮದ್ದೂರಿನಲ್ಲಿ ಕಲ್ಪನಾ ಸಿದ್ಧರಾಜು ಮುಂತಾದ ಜನನಾಯಕರು ಪ್ರಾಮಾಣಿಕವಾಗಿ ದುಡಿದಿದ್ದರಿಂದ ರಮ್ಯಾರ ಗೆಲುವು ಸಾಧ್ಯವಾಗಿತ್ತು. ಆದರೆ ರಮ್ಯಾ ಗೆದ್ದು ಬಂದ ನಂತರ ಬೇರೆಯವರನ್ನು ಬಿಡಿ ಅಂಬರೀಷರನ್ನೇ ಲೆಕ್ಕಕ್ಕೆ ಇಟ್ಟುಕೊಂಡಿಲ್ಲ. ಇದು ರಮ್ಯಾಗೆ ದೊಡ್ಡ ಪೆಟ್ಟು ನೀಡುವ ಸಾಧ್ಯತೆ ಇದೆ.

ರಕ್ಷಿತಾ ಮೇಡಂ ಬರ್ತಾರಾ?

ಇತ್ತೀಚೆಗೆ ದೇವೇಗೌಡರು, ಕುಮಾರಸ್ವಾಮಿ, ಎ. ಕೃಷ್ಣಪ್ಪನಂತಹವರ ಕಾಲಿಗೆ ಚಿತ್ರನಟಿ ರಕ್ಷಿತಾ ಮತ್ತಾಕೆಯ ಪತಿ ನಿರ್ದೇಶಕ ಪ್ರೇಮ್ ಉದ್ದಂಡ ನಮಸ್ಕಾರ ಹಾಕುತ್ತಿದ್ದಾರೆ. ರಕ್ಷಿತಾ ಬಹಿರಂಗವಾಗೇ ಜೆಡಿಎಸ್‌ನಿಂದ ಸ್ಪರ್ಧಿಸುವ ಬಯಕೆಯನ್ನು ವ್ಯಕ್ತಪಡಿಸಿದ್ದಾರೆ. ಇದರ ಜೊತೆಗೆ ಭವಾನಿ ರೇವಣ್ಣ ಹೆಸರನ್ನೂ ತೇಲಿಬಿಡಲಾಗಿದೆ. ದೇವೇಗೌಡರು ಇವರಿಬ್ಬರನ್ನು ಬದಿಗಿರಿಸಿ ಪುಟ್ಟರಾಜುವಿಗೆ ಟಿಕೆಟ್ ನೀಡುವ ಸಾಧ್ಯತೆಗಳಿವೆ.

ಕೆಲವೇ ತಿಂಗಳುಗಳ ಹಿಂದೆ ರಮ್ಯಾರ ಎದುರು ಹೀನಾಯ ಸೋಲು ಅನುಭವಿಸಿದ್ದ ಪುಟ್ಟರಾಜು ಮತ್ತೆ ಗೆಲ್ಲಲು ಸಾಧ್ಯವೇ? ಹೀಗೆಂದು ಪ್ರಶ್ನಿಸಿದರೆ ಸ್ಥಳೀಯರು ಕುತೂಹಲಕಾರಿ ವಿಷಯವೊಂದನ್ನು ಉದಾಹರಣೆಯಾಗಿ ನೀಡುತ್ತಾರೆ. 2013 ರ ವಿಧಾನಸಭಾ ಚುನಾವಣೆಯಲ್ಲಿ ಮೇಲುಕೋಟೆ ಕ್ಷೇತ್ರದಿಂದ ಸ್ಪರ್ಧಿಸಿದ್ದ ಎಲ್.ಡಿ. ರವಿ ಗಳಿಸಿದ್ದು ಕೇವಲ 2500 ಮತ. ಅದೇ ನಾಲ್ಕು ತಿಂಗಳ ನಂತರ ನಡೆದ ಲೋಕಸಭಾ ಚುನಾವಣೆಯಲ್ಲಿ ಮೇಲುಕೋಟೆಯಿಂದ ಸಿಕ್ಕಿದ್ದು ಬರೋಬ್ಬರಿ 45 ಸಾವಿರ. ನಾಲ್ಕು ತಿಂಗಳಿಗೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯೊಂದರಲ್ಲಿ ನಡೆದ ಈ ಅಚ್ಚರಿ, ಇಂದಿನ ಮಂಡ್ಯ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಪರವಾಗಿ ಏಕಾಗಬಾರದು ಎನ್ನುತ್ತಾರೆ ಜಿಲ್ಲೆಯ ರಾಜಕೀಯವನ್ನು ಹತ್ತಿರದಿಂದ ಬಲ್ಲವರು.

ಅಭಿವೃದ್ಧಿಯೊಂದೇ ಇಲ್ಲಿ ಮಾನದಂಡವಲ್ಲ!

ರಮ್ಯಾ ಕೇವಲ ನಾಲ್ಕೈದು ತಿಂಗಳುಗಳಲ್ಲಿ ಅದ್ಭುತ ಕೆಲಸ ಮಾಡಿದ್ದಾರೆ ಎಂದು ಹೇಳುವವರೂ ಇದ್ದಾರೆ. ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಅಂದಿನ ಸಚಿವರಾಗಿದ್ದ ಚೆಲುವರಾಯಸ್ವಾಮಿಯವರು ನಾಗಮಂಗಲ ಕ್ಷೇತ್ರದಲ್ಲಿ 300 ರಿಂದ 400 ಕೋಟಿ ರೂಪಾಯಿಗಳ ಕಾಮಗಾರಿ ಮಾಡಿಸಿದ್ದರು. 'ಇಷ್ಟು ಮಾಡಿದ ನನ್ನನ್ನು ಸೋಲ್ಸೊ ಗಂಡ್ಸು ಯಾರಿದ್ದಾನು ನಾಗಮಂಗಲದಲ್ಲಿ?' ಎಂದು ಮೀಸೆ ತಿರುಗಿಸಿದ್ದರು. ಆದರೆ ಚುನಾವಣೆಯ ಫಲಿತಾಂಶ ಬಂದಾಗ ಚೆಲುವರಾಯಸ್ವಾಮಿ ಸೋತು ಸುಣ್ಣವಾಗಿದ್ದರು. ಮಂಡ್ಯದ ಜನ ತಮಗೆ ಅಭಿವೃದ್ಧಿ ಅಲ್ಲ, ದಿನನಿತ್ಯ ತಮ್ಮ ಕಷ್ಟಸುಖ ವಿಚಾರಿಸುವ ಜನಪ್ರತಿನಿಧಿ ಬೇಕು ಎಂಬ ಮೆಸೇಜನ್ನು ಸ್ಪಷ್ಟವಾಗಿ ರವಾನಿಸಿದ್ದರು. 'ನಾಲ್ಕೈದು ತಿಂಗಳಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರವನ್ನು ಐದಾರು ಬಾರಿ ರೌಂಡ್ ಹಾಕಿದ್ದೇನೆ' ಎನ್ನುವ ಮೈಲ್ ಮೇಡಂ ರಮ್ಯಾಗೂ ಚೆಲುವರಾಯಸ್ವಾಮಿಗೆ ಆದ ಗತಿಯೇ ಆಗುತ್ತದೆ ಎಂಬ ವಿಶ್ವಾಸ ಜಿಲ್ಲಾ ಜೆಡಿಎಸ್‌ನದು.

ಇನ್ನುಳಿದಂತೆ ಹಾಸನ, ತುಮಕೂರು, ಚಿತ್ರದುರ್ಗ, ಕೋಲಾರ, ಉತ್ತರ ಕನ್ನಡ, ಚಿಕ್ಕಬಳ್ಳಾಪುರ, ಮೈಸೂರು ಮುಂತಾದ ಲೋಕಸಭಾ ಕ್ಷೇತ್ರಗಳು ತಮಗೊಲಿಯಬಹುದು ಎಂಬ ಲೆಕ್ಕಾಚಾರ ಜೆಡಿಎಸ್‌ದು.

'ಇನ್ನೇನು ಸರ್ವನಾಶ ಆಗೋಯ್ತು' ಎನ್ನುವಾಗ ಗೆಲುವಿನಿಂದ ವಿಜೃಂಭಿಸೋದು; ವಿಜಯಪತಾಕೆ ಹಾರಿಸೋದು ಶತಸಿದ್ಧ ಅಂದ್ಕೊಂಡಾಗ ಸೋಲಿನ ಸರಣಿ ಅನುಭವಿಸೋದು ಜೆಡಿಎಸ್‌ನ ವೈರುಧ್ಯಗಳಲ್ಲಿ ಒಂದು. ಅಂತೆಯೇ ಜೆಡಿಎಸ್ ಪಕ್ಷದ ಏಕೈಕ ಸಂಸದನಾಗಿ ಲೋಕಸಭೆಯ ಕಡೆಯ ಬೆಂಚ್‌ನಲ್ಲಿ ಕೂರುತ್ತಿದ್ದ ದೇವೇಗೌಡರ ಅಲ್ಪಕಾಲದಲ್ಲೇ ಪ್ರಧಾನಿಯಾದದ್ದು ಕೂಡಾ ಇಂತಹ ವೈರುಧ್ಯಗಳ ಸರಣಿಯ ಕೊಂಡಿಯೇ. ಹೀಗಾಗಿ 'ಸುಟ್ಟ ಬೂದಿಯಿಂದ ಮತ್ತೊಮ್ಮೆ ಫೀನಿಕ್ಸ್ ರೀತಿ ಹುಟ್ಟಿ ಬರುತ್ತೇನೆ' ಎಂದು ತೊಡೆತಟ್ಟಿದ ಮಾಜಿ ಪ್ರಧಾನಿಯ ಸವಾಲಿಗೆ ಕರ್ನಾಟಕದ ಮತದಾರರು ಯಾವ ರೀತಿ ಉತ್ತರಿಸುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

● ಬಿ.ನಾರಾಯಣ್



ಕನಕಪುರ ರಿಪಬ್ಲಿಕ್
ಪೊಲೀಸರೇ ರೌಡಿಗಳು: ಡೀಕೆ ಹೇಳಿದ್ದೇ ಕಾನೂನು!

ರೆಡ್ಡಿ ಬ್ರದರ್‌ಗಳ ಬಳ್ಳಾರಿ ರಿಪಬ್ಲಿಕ್‌ಗೂ ಡೀಕೆ ಸಹೋದರರ ಕನಕಪುರ ರಿಪಬ್ಲಿಕ್‌ಗೂ ದೊಡ್ಡ ವ್ಯತ್ಯಾಸವೇನಿಲ್ಲ. ಅಲ್ಲಿ ತನಗಿಷ್ಟ ಬಂದ ಗಣಿಗೆ ನುಗ್ಗಿ ಅದಿರು ದೋಚುವ ರೆಡ್ಡಿಗಳ ಅಟ್ಟಹಾಸವನ್ನು ಡೀಕೆ ಇಲ್ಲಿ ಪೊಲೀಸರನ್ನು ಛೂ ಬಿಟ್ಟು ಮಾಡಿಸುತ್ತಾನೆ.

ಕನಕಪುರದ ಮಟ್ಟಿಗೆ ಪೊಲೀಸರೇ ರೌಡಿಗಳಾದರೆ ಡೀಕೆ ಹೇಳಿದ್ದ ಬಾಯ್ದೆ ಕಾನೂನು. ವ್ಯತ್ಯಾಸವೆಂದರೆ ಇಲ್ಲಿ ಬಲಿಪಶುಗಳೇನಿದ್ದರೂ ನಿರ್ಗತಿಕ ದಲಿತರು!

ಕನಕಪುರ ಸುತ್ತಮುತ್ತಲ ಅರಣ್ಯಗಳ ಗ್ರಾನೈಟ್ ಲೂಟಿ, ಸೂರಿ ಗ್ಯಾಂಗ್ ಗೂಂಡಾಗಿರಿ, ತನಗಾಗದವರನ್ನು ಹೊಸಕಿ ಹಾಕುವ ಡೀಕೆ ವಿಕೃತಿಗಳೆಲ್ಲ ಒತ್ತಟ್ಟಿಗಿರಲಿ. ಡೀಕೆ ದೊಡ್ಡಪ್ಪ ದ್ಯಾವರಸೇಗೌಡನ ಪಾಳೇಪಟ್ಟಾದ ಕೊಗ್ಗೇ ದೊಡ್ಡಿಯ ನಿರ್ಗತಿಕ ದಲಿತ ಕುಟುಂಬವೊಂದು ಅನ್ಯಾಯವಾಗಿ ಪಟ್ಟ ಪಜೀತಿ, ಸಂಕಟ ಚಿತ್ರಹಿಂಸೆಯಿದೆಯಲ್ಲ ಬಹುಶಃ ಗಣಿಕಳ್ಳ ರೆಡ್ಡಿಗಳು ಕೂಡ ಈ ಮಟ್ಟಕ್ಕಿಳಿದಿರಲಿಕ್ಕಿಲ್ಲ.

ಘಟನೆ ನಡೆದು ಹೆಚ್ಚು ದಿನಗಳೇನಾಗಿಲ್ಲ. ಇಲ್ಲಿಗೆ ಮೂರು ತಿಂಗಳ ಹಿಂದೆ ಅಂದರೆ 2013ರ ಅಕ್ಟೋಬರ್ 22ರ ನಡುರಾತ್ರಿ 1ರ ಹೊತ್ತಿಗೆ ಕನಕಪುರದ ಪೊಲೀಸ್ ಇನ್ಸ್‌ಪೆಕ್ಟರ್ ಸಿದ್ದೇಗೌಡ ಮತ್ತು ಸಾತನೂರು ಸಬ್ ಇನ್ಸ್‌ಪೆಕ್ಟರ್ ಜಯರಾಮ್ ನೇತೃತ್ವದಲ್ಲಿ ಹತ್ತಕ್ಕೂ ಅಧಿಕ ಪೊಲೀಸ್ ಪೇದೆಗಳಿದ್ದ ಖಾಕಿ ಪಡೆಯೊಂದು ಇದ್ದಕ್ಕಿದ್ದಂತೆ ಬೆಂಗಳೂರು ಹೊರವಲಯದ ಮನೆಯೊಂದಕ್ಕೆ ಲಗ್ಗೆಯಿಟ್ಟಿದೆ. ಅದು ಮಾಗಡಿರಸ್ತೆ ತಾವರೆಕೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಮಂಚನಕುಪ್ಪೆಯ ಮಲ್ಲೇಶಪ್ಪ ಎಂಬ ಪೊಲೀಸ್ ಪೇದೆಯ ಮನೆ.

ನಡುರಾತ್ರಿ ಖಾಕಿ ಪಡೆ

ತಮ್ಮ ಠಾಣಾ ವ್ಯಾಪ್ತಿಯಲ್ಲದ ತಮ್ಮದೇ ಇಲಾಖೆಗೆ ಸೇರಿದ ಪೇದೆಯೊಬ್ಬನ ಮನೆಗೆ ಆ ನಡುರಾತ್ರಿ ದಾಳಿಯಿಟ್ಟ ಕನಕಪುರದ ಇನ್ಸ್‌ಪೆಕ್ಟರ್ ಸಿದ್ದೇಗೌಡರ ಖಾಕಿ ಪಡೆ ಯಾರೇ ರೌಡಿ ಕ್ರಿಮಿನಲ್ಲೊಬ್ಬನನ್ನು ಉಟ್ಟ ಬಟ್ಟೆಯಲ್ಲೇ ಎಳೆದೊಯ್ಯುವ ಹಾಗೆ ಪೇದೆ ಮಲ್ಲೇಶಪ್ಪನ ಮನೆ ಬಾಗಿಲು ದಬ್ಬಿ ಆತನನ್ನು ಅನಾಮತ್ತಾಗಿ ಜೀಪಿಗೆ ಎತ್ತಾಕಿಕೊಂಡಿದೆ. ಕಂಗಾಲಾದ ಆತನ ಪತ್ನಿ, ಮಕ್ಕಳ ಮೇಲೆ ಲಾಠಿ ಬೀಸುತ್ತಾರೆ. ಬಟ್ಟೆ ಹಾಕಿಕೊಳ್ಳುವುದಕ್ಕೂ ಅವಕಾಶ ನೀಡದೆ ಮಲ್ಲೇಶಪ್ಪನನ್ನು ಪಂಚೆ ಬನಿಯನ್ನಿನಲ್ಲೇ ಜೀಪಿಗೆ ತುರುಕಿಕೊಂಡ ಕನಕಪುರ ಪೊಲೀಸರು ಕೈಗೆ ಬೇಡಿ ಹಾಕಲಿಲ್ಲ ಎಂಬುದನ್ನು ಬಿಟ್ಟರೆ ಅಕ್ಷರಶಃ ಅಪರಾಧಿಯಂತೆ ಪೇದೆ ಮಲ್ಲೇಶಪ್ಪನನ್ನು ಹೊತ್ತೊಯ್ಯುತ್ತಾರೆ.

ಹಾಗೆ ಜೀಪಿಗೆ ತುರುಕಿಕೊಂಡ ಮಲ್ಲೇಶಪ್ಪ ಬೇರೆ ಯಾರೂ ಅಲ್ಲ ಡೀಕೆ ದೊಡ್ಡಪ್ಪ ದ್ಯಾವರಸೇಗೌಡನ ಕೊಗ್ಗೇದೊಡ್ಡಿಯ ತೋಟಿ ಮಲ್ಲಯ್ಯನ ಮಗ. ಸದ್ಯ ತೋಟಿ ಮಲ್ಲಯ್ಯನಾಗಲಿ, ಆತನ ಗಂಡುಮಕ್ಕಳ ಪೈಕಿ ಮಲ್ಲೇಶಪ್ಪನ ಹೊರತಾಗಿ ಬೇರೆ ಯಾರೂ ಬದುಕಿಲ್ಲ. ತೋಟಿ ಮಲ್ಲಯ್ಯನ ಪಳೆಯುಳಿಕೆಯೆಂಬಂತೆ ಆತನ ಏಳೆಕರೆ ಭೂಮಿಯೊಂದೇ ಆ ಊರಿನಲ್ಲಿರುವ ಏಕೈಕ ಸೊತ್ತು.

ಕನಕಪುರ ತಾಲ್ಲೂಕು ಉಯ್ಯಂಬಳ್ಳಿ ಹೋಬಳಿಯ ಮಾಹಳ್ಳಿ ಸರ್ವೆ ನಂ. 6ರಲ್ಲಿರುವ ಮೂರೆಕರೆ ತೋಟಿ ಇನಾಮ್ತಿ ಜಮೀನು ಮತ್ತು ಅದಕ್ಕೆ ಹೊಂದಿಕೊಂಡಿರುವ ನಾಲ್ಕೆಕರೆ ಬಗರ್‌ಹುಕುಂ ಸಾಗುವಳಿ ಭೂಮಿ ಸೇರಿದಂತೆ ಒಟ್ಟು ಏಳೆಕರೆಯ ಸೊತ್ತಿರುವುದು ಪ್ರವಾಸಿ ಪ್ರಸಿದ್ಧ ಮೇಕೆ ದಾಟುವಿನಲ್ಲಿ, ಕಾವೇರಿ ಮತ್ತು ಅರ್ಕಾವತಿ ನದಿಗಳು ಸೇರುವ ಸಂಗಮ ತಾಣಕ್ಕೆ ಕೂಗಳತೆಯಲ್ಲಿರುವ ಈ ಭೂಮಿ ತೋಟಿ ಮಲ್ಲಯ್ಯನಿಗೆ ಬಂದದ್ದು ತೋಟಿ ಇನಾಮತಿಯ ಮೂಲಕವೆ.

1963ರಿಂದಲೂ ಉಳುಮೆ ಮಾಡಿಕೊಂಡೇ ಬಂದ ತೋಟಿ ಮಲ್ಲಯ್ಯ ಕಾಲವಾದನಂತರ ಆತನ ಮಕ್ಕಳು ಉತ್ತೂಬಿತ್ತು ಮಾಡಿಯೇ ಬದುಕು ಸಾಗಿಸಿದ್ದಾರೆ. ಸದ್ಯ ಈ ಭೂಮಿಯಲ್ಲಿ ಗುಡಿಸಲು ಕಟ್ಟಿಕೊಂಡು ವಾಸಿಸುತ್ತಿರುವುದು ತೋಟಿ ಮಲ್ಲಯ್ಯನ ಹಿರಿಮಗನ ವಿಧವಾ ಪತ್ನಿ ಲಕ್ಷ್ಮಮ್ಮ, ಮಲ್ಲಯ್ಯನ 3 ಮತ್ತು 4ನೇ ಮಕ್ಕಳ ಪತ್ನಿಯರಾದ ಚಿಕ್ಕತಾಯಮ್ಮ ಮತ್ತು ಮಾರಕ್ಕ ಎಂಬ ಮೂವರು ನಿರ್ಗತಿಕ ದಲಿತ ವಿಧವೆಯರು ಮತ್ತವರ ಅನಾಥ ಮಕ್ಕಳು!


ದಲಿತರ ಆಸ್ತಿ ಆಕ್ರಮಿಸಿ ಡೀಕೆ ಗ್ಯಾಂಗ್ ನಿರ್ಮಿಸಿದ ಕಾಂಪೌಂಡ್

ಡೀಕೆ ದೊಡ್ಡಪ್ಪ ವಂಚನೆ

ಬದುಕಿದ್ದಾಗ ತೋಟಿ ಮಲ್ಲಯ್ಯ ಡೀಕೆಯ ದೊಡ್ಡಪ್ಪ ದ್ಯಾವರಸೇಗೌಡನ ಮನೆಯಲ್ಲಿ ಜೀತವನ್ನೂ ಮಾಡಿದ್ದ. ಸಾಯುವ ಮುನ್ನ ತನ್ನ ಮಕ್ಕಳನ್ನು ಕರೆದು ತನಗಿದ್ದ ತೋಟಿ ಇನಾಮ್ತೀ ಭೂಮಿ ಮತ್ತು ಅದನ್ನು ಆಕ್ರಮಿಸಿಕೊಂಡಿದ್ದ ದ್ಯಾವರಸೇಗೌಡನ ವಂಚನೆಯನ್ನೂ ಬಾಯಿಬಿಟ್ಟಿದ್ದ. ತಂದೆಯ ನಿಧನಾನಂತರ ಮಕ್ಕಳು ಕೋರ್ಟ್ ಮೆಟ್ಟಿಲೇರಿ ಜಮೀನು ಬಿಡಿಸಿಕೊಂಡರು. 1973ರಲ್ಲಿ ದ್ಯಾವರಸೇಗೌಡನಿಂದ ಕಿತ್ತುಕೊಂಡ ಜಮೀನನ್ನು ಸರ್ಕಾರ ತೋಟಿ ಮಲ್ಲಯ್ಯನ ಮಕ್ಕಳಿಗೆ ಮರುಮಂಜೂರಾತಿ ಮಾಡಿದ್ದರಿಂದಾಗಿ ಭೂಮಿಯ ಆರ್‌ಟಿಸಿ (ಪಹಣಿ) ಎಂ.ಆರ್‌.ಗಳೆಲ್ಲ ತೋಟಿ ಮಲ್ಲಯ್ಯನ ಹೆಸರಲ್ಲೇ ದಾಖಲಾದವು.

ಆದರೆ ಡೀಕೆ ಸಾತನೂರು ಶಾಸಕನಾಗಿ ಗೆದ್ದಿದ್ದೇ ತಹಶೀಲ್ದಾರ್ ಆಗಿದ್ದ ಭ್ರಷ್ಟ ಚಿಕ್ಕ ಬೆಟ್ಟಯ್ಯನನ್ನು ಬಳಸಿಕೊಂಡು ಮತ್ತೆ ಪಹಣಿ, ಮ್ಯುಟೇಶನ್ನನ್ನು ದೊಡ್ಡಪ್ಪ ದ್ಯಾವರಸೇಗೌಡನ ಹೆಸರಿಗೆ ಮಾಡಿಸಿಬಿಟ್ಟ. ಇದರ ವಿರುದ್ಧ ಮತ್ತೆ ರಾಮನಗರದ ಉಪವಿಭಾಗಾಧಿಕಾರಿಗಳಿಗೆ ದೂರು ಕೊಟ್ಟ ಮಲ್ಲಯ್ಯನ ಮಕ್ಕಳ ಅರ್ಜಿಯನ್ನೇ ಸರ್ಕಾರ ಎತ್ತಿ ಹಿಡಿದಿತ್ತು, ಏಕೆಂದರೆ ತೋಟಿ ಇನಾಮ್ತೀ ಭೂಮಿಯನ್ನು ಮಾರುವುದಾಗಲಿ, ಕೊಳ್ಳುವುದಾಗಲಿ ಕಾನೂನು ಪ್ರಕಾರ ನಿಷಿದ್ಧ.

ಈ ಮಧ್ಯೆ ತಾನು ದ್ಯಾವರಸೇಗೌಡನಿಂದ ಖರೀದಿಸಿದ್ದೇನೆಂದು ಹೇಳಿಕೊಂಡು ಬೆಂಗಳೂರಿನ ಉದ್ಯಮಿ ಅಜಿತ್ ಶ್ರೀನಿವಾಸ್ ಎಂಬಾತ ಮತ್ತೆ ತನ್ನ ಹೆಸರಿಗೆ ಖಾತೆ ಮಾಡುವಂತೆ ಕನಕಪುರ ತಹಶೀಲ್ದಾರ್‌ಗೆ ಅರ್ಜಿ ಕೊಟ್ಟರೆ, ಅದನ್ನೂ ಸರ್ಕಾರ ವಜಾ ಮಾಡಿ ಯಾವುದೇ ಕಾರಣಕ್ಕೂ ತೋಟಿ ಇನಾಮ್ತೀ ಭೂಮಿಯ ಪರಭಾರೆ ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸಿತ್ತು. ಇದಾಗಿದ್ದು 2012ರಲ್ಲಿ. ಆವತ್ತಿನಿಂದ ಇವತ್ತಿನ ತನಕ ಮಾಹಳ್ಳಿ ಸರ್ವೆ ನಂಬರ್ ಆರಸೊತ್ತು ತೋಟಿ ವಂಶದ ಸಂಜಮ್ಮ ಮತ್ತು ನರಸಮ್ಮ ಎಂಬುವವರ ಹೆಸರಲ್ಲೇ ದಾಖಲಿಸಲ್ಪಡುತ್ತಿದೆ.


ಇಷ್ಟಾಗ್ಯೂ ಶತಗತಾಯ ತೋಟಿ ಮಲ್ಲಯ್ಯನ ಮಕ್ಕಳಿಂದ ಈ ಭೂಮಿಯನ್ನು ಕಿತ್ತುಕೊಳ್ಳಲೇಬೇಕೆಂಬ ದುರಾಶೆ ಡೀಕೆಯ ತಲೆಹೊಕ್ಕಿದೆಯೆಂದರೆ ಅದಕ್ಕಿರುವ ಕಾರಣವೇ ಬೇರೆಯಿದೆ. ಅದು ಡೀಕೆ ತಮ್ಮ ಸೂರಿ ಮತ್ತು ಆತನ ಪಾಲುದಾರ ವಿನಯ್ ಕಾರ್ತಿಕ್ ಎಂಬಾತ ಸೇರಿಕೊಂಡು ಕಾವೇರಿ-ಅರ್ಕಾವತಿ ಸಂಗಮ ತಾಣದಲ್ಲಿ ನಿರ್ಮಿಸ ಹೊರಟಿರುವ ಐಷಾರಾಮೀ ರೆಸಾರ್ಟ್!

ಐಷಾರಾಮಿ ರೆಸಾರ್ಟ್

ಪ್ರತಿ ಭಾನುವಾರ ಮತ್ತು ಶನಿವಾರದಂದು ಕಾವೇರಿ-ಅರ್ಕಾವತಿ ಸಂಗಮ ತಾಣ ಮೇಕೆದಾಟುವಿಗೆ ಕಮ್ಮಿಯೆಂದರೂ ಸಾವಿರ ಮಂದಿ ಪ್ರವಾಸಿಗರು ಬೆಂಗಳೂರಿನಿಂದ ಬರುತ್ತಾರೆ. ಅಂಥಲ್ಲೊಂದು ಐಷಾರಾಮಿ ರೆಸಾರ್ಟ್ ನಿರ್ಮಿಸಿಬಿಟ್ಟರೆ ಲಾಭದ ಜೊತೆಗೆ ತಮ್ಮ ಶೋಕಿ ಲೋಲುಪತೆಗೂ ಅನುಕೂಲವಾಗುತ್ತದೆ ಎಂಬ ದೂರಾಲೋಚನೆ ಡೀಕೆ ಸಹೋದರರನದ್ದು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸಿಂಧ್ಯಾ ವಿರುದ್ಧ ಗೆದ್ದ ಡೀಕೆ ಕಾಂಗ್ರೆಸ್ ಸರ್ಕಾರ ರಚನೆಯಾದ ತಿಂಗಳಿಗೇ ತೋಟಿ ಮಲ್ಲಯ್ಯನ ಸೊತ್ತನ್ನು ಲಪಟಾಯಿಸುವ ಮಾಸ್ಟರ್ ಪ್ಲಾನ್ ರೂಪಿಸಿಕೊಂಡಿದ್ದ. ಅದಕ್ಕೆಂದು ತನ್ನ ತಮ್ಮ ಡೀಕೆ ಸೂರಿಯನ್ನು ಛೂಬಿಟ್ಟ.

ತೋಟಿ ಮಲ್ಲಯ್ಯನ ಮಕ್ಕಳ ಪೈಕಿ ಸದ್ಯ ಉಳಿದಿರುವುದು ಪೊಲೀಸ್ ಪೇದೆ ಮಲ್ಲೇಶಪ್ಪ ಮತ್ತು ಆತನ ಹಿರಿಯಣ್ಣನ ಮಗ ಶಿವಣ್ಣ. ಸಿದ್ದು ಮುಖ್ಯಮಂತ್ರಿಯಾದ ತಿಂಗಳಿಗೇ ಸೂರಿ ಉಪಾಯವಾಗಿ ಪೇದೆ ಮಲ್ಲೇಶಪ್ಪನನ್ನು ತನ್ನ ಸದಾಶಿವನಗರದ ಬಂಗಲೆಗೆ ಕರೆಸಿಕೊಂಡ. ಎದುರಿಗೇ ಡೀಕೆಯ ಮನೆಯಿತ್ತಾದ್ದರಿಂದ ಮಲ್ಲೇಶಪ್ಪನನ್ನು ಬರಹೇಳಿದ ಡೀಕೆ ಆದೂಇದು ಮಾತಾಡಿ 'ಏನಪ್ಪಾ ಮಾಡ್ದೆ ನಿನ್ನ ಜಮೀನಿನ ವಿಷ್ಯ...?' ಎಂದು ಕೇಳಿಬಿಟ್ಟ. ಅದಕ್ಕೆ ಮಲ್ಲೇಶಪ್ಪ 'ನೋಡಿ ಸ್ವಾಮೀ, ನಮ್ಮ ವಂಶದ ಸೊತ್ತು ಅಂಥ ಇರೋದು ಅದೊಂದೇ. ಅದನ್ನು ಕೊಟ್ಟು ನಾವೆಲ್ಲ ಬೀದಿಗೆ ಬೀಳೊಕ್ಕಾಗುತ್ತಾ?' ಎಂದು ಭೀತಿಯಲ್ಲೇ ಪ್ರಶ್ನೆಯಿಟ್ಟ. ಅಷ್ಟಕ್ಕೇ ಕೆಂಡಾಮಂಡಲನಾದ ಡೀಕೆ 'ಮುಚ್ಕೊಂಡು ಹೇಳಿದಷ್ಟು ಮಾಡಯ್ಯ. ಮರ್ಯಾದೆಯಾಗಿ ಹತ್ತೋ


ಜಮೀನಿನ ಗುಡಿಸಲಿನಲ್ಲಿ ದಲಿತ ವಿಧವೆಯರು


ತೋಟಿ ಮಲ್ಲಯ್ಯನ ಸೊತ್ತಿನಲ್ಲಿ ವಿಧವೆಯರಾದ ಲಕ್ಷ್ಮಮ್ಮ ಮತ್ತು ಮಾರಕ್ಕ



ನಯ್ ಕಾರ್ತಿಕ್ ಎಂಬ ಸಾಹುಕಾರ್ ಚೆನ್ನಯ್ಯನ

ಮೊಮ್ಮಗನ ಅಕ್ರಮ ಸಂಪತ್ತಿನಲ್ಲಿ...!

ಕಾವೇರಿ-ಅರ್ಕಾವತಿ ಸಂಗಮದಲ್ಲಿ ಐಷಾರಾಮಿ ರೆಸಾರ್ಟ್ ನಿರ್ಮಿಸುವ ಡೀಕೆ ದುರಾಶೆಗೆ ಕಾರಣನಾದ ಯ್ ಕಾರ್ತಿಕ್ ಎಂಬ ಕಾಂಗ್ರೆಸ್ ಉದ್ಯಮಿಯೇ ಮಾಹಳ್ಳಿ ದಲಿತರ ಸೊತ್ತಿನ ಆಕ್ರಮಣದ ಹಿಂದಿರುವ ಧಾರನೆ?

ಬಹುಶಃ ಡೀಕೆ ಮತ್ತು ಸೂರಿ ಈತನನ್ನು ಮುಂದಿಟ್ಟುಕೊಂಡು ರೆಸಾರ್ಟ್ ನಿರ್ಮಿಸ ಹೊರಟಿದ್ದೇ ಈ ಪ್ರಶ್ನೆಗೆ ವಾಗಿರಲೂಬಹುದು. ಹಾಗಂತ ವಿನಯ್ ಕಾರ್ತಿಕ್ ನೇರವಾಗಿ ಗಂಡಾಗುಂಡಿಗಿಳಿಯುವುದಿಲ್ಲ. ಸದ್ಯ ದಲಿತರ ತ್ತು ಕಬಳಿಸಲು ಸೂರಿ ಮತ್ತು ವಿನಯ್ ಛೂ ಬಿಟ್ಟಿರುವುದು ಅಜಿತ್ ಶ್ರೀನಿವಾಸನ್ ಎಂಬ ಬೆಂಗಳೂರಿನ ಭೂ ಮನನ್ನು. ತಮಿಳುನಾಡು ಮೂಲದ ಅಜಿತ್ ಶ್ರೀನಿವಾಸನ್ ಬೆಂಗಳೂರಿನ ರಿಚ್ಮಂಡ್ ಸರ್ಕಲ್ಲಿನ ನಿವಾಸಿ. ಗೆ ವಿನಯ್ ಪರಿಚಯವಾಗಿದ್ದು ಗ್ರಾನೈಟ್ ದಂಧೆಯಲ್ಲಿ.

ಗಾಂಧಿನಗರದ ಮುದ್ದೇಮಾದಪ್ಪನ ಮೆಸ್‌ನ ಕಟ್ಟಡದಲ್ಲೇ ವಿನಯ್ ಕಾರ್ತಿಕ್‌ನ ಇನ್‌ಫ್ರೋಟೆಕ್ ಟೆಕ್ನಾಲಜಿಸ್ ಎಂಬ ಕಂಪೆನಿಯಿದೆ. ಇದಕ್ಕೆ ಸಂಸದ ಡೀಕೆ ಸೂರಿಯೇ ಪಾಲುದಾರ. ಇನ್‌ಫ್ರೋಟೆಕ್ ಕಂಪೆನಿಯ ಕಚೇರಿಯ ಯೇ ಡೀಕೆ-ಸೂರಿ ಒಡೆತನದ ಸುವಿ ಗ್ರಾನೈಟ್ ಕಂಪೆನಿಯ ಕಚೇರಿಯೂ ಇದೆ. ಈ ಸುವಿ ಗ್ರಾನೈಟ್‌ಗೂ ಯ್ ಕಾರ್ತಿಕ್ ಪಾರ್ಟ್‌ನರ್. ಡೀಕೆ ಫ್ಯಾಮಿಲಿ ಮತ್ತು ವ್ಯವಹಾರದಲ್ಲಿ ಇಷ್ಟೆಲ್ಲಾ ಪಾಲುದಾರಿಕೆಯಿರುವ ವಿನಯ್ ಕ್‌ನ ಜಾತಕವೇ ಭಯಾನಕ ಮತ್ತು ನಿಗೂಢ. ಕಮ್ಮಿಯೆಂದರೂ ಸಾವಿರ ಕೋಟಿಯ ಆಸ್ತಿವಂತನಾದ ವಿನಯ್ ೂರಿನ ಹಳೇ ಕಾಲದ ರಾಜಕೀಯ ಮುತ್ಸದ್ದಿ ಸಾಹುಕಾರ್ ಚನ್ನಯ್ಯನವರ ಮೊಮ್ಮಗನಂತೆ.

ಸಾಹುಕಾರ್ ಚನ್ನಯ್ಯನವರ ಮೊಮ್ಮಗನ ಸಹಸ್ರ ಕೋಟಿಯ ವಹಿವಾಟನಲ್ಲಿ ಡೀಕೆ ಪಾಲಿಲ್ಲದೆ ಆತ ದಲಿತರ ತ್ತಿಗೆ ವಕ್ಕರಿಸಲು ಹೇಗೆ ತಾನೆ ಸಾಧ್ಯ?



ಬಡ ದಲಿತರ ಸೊತ್ತಿಗಾಗಿ ಡೀಕೆ ಯಾವ ಮಟ್ಟದ ಅಟ್ಟಹಾಸಕ್ಕೆ ಕೈಹಾಕುತ್ತಾನೆಂಬುದಕ್ಕೆ ಆತನ ತಂದೆಯ ಅಂತ್ಯಸಂಸ್ಕಾರವೊಂದೇ ಸಾಕು.

ಜನವರಿ 3ಕ್ಕೆ ಡೀಕೆ ತಂದೆ ಕೆಂಪೇಗೌಡರು ತೀರಿಕೊಂಡಾಗ ಮೊದಲೇ ಮಂತ್ರಿಗಿರಿಯಿಂದ ವಂಚಿತನಾಗಿದ್ದೂ ಅಲ್ಲದೆ ಈಗ ತಂದೆಯನ್ನೂ ಕಳಕೊಂಡನೆಂದು ಅನೇಕರು ಡೀಕೆ ಬಗ್ಗೆ ಅನುಕಂಪದ ಮಾತಾಡಿದರಲ್ಲವೆ?

ಆದರೆ ಡೀಕೆ ತನ್ನ ತಂದೆಯ ಸಾವನ್ನೂ ಬಡ ದಲಿತರ ಭೂಮಿ ಕಬಳಿಕೆಗೆ ಯಾವ ರೀತಿ ಬಳಸಿಕೊಳ್ಳಬೇಕೆಂದು ಲೆಕ್ಕ ಹಾಕುತ್ತಿದ್ದ. ಮಾಹಳ್ಳಿ ಸರ್ವೆ ನಂಬರ್ 6ರ ದಲಿತರ ಭೂಮಿಗೆ ಹೊಂದಿಕೊಂಡೇ ಡೀಕೆಯ ಏಳಕರೆ ಜಮೀನಿದೆ. ಈ ಪೈಕಿ ಒಂದೆಕರೆಯನ್ನು ರೆಸಾರ್ಟ್ ನಿರ್ಮಾಣಕ್ಕೆಂದು ಸೂರಿ ತನ್ನ ಪತ್ನಿಯ ಹೆಸರಲ್ಲಿ ಭೂಪರಿವರ್ತನೆ ಮಾಡಿಸಿಕೊಂಡಿದ್ದೂ ಆಗಿದೆ. ತೀರಿಕೊಂಡ ತಂದೆಯ ಅಂತ್ಯಕ್ರಿಯೆಗೆ ತಮ್ಮದೇ ಜಮೀನಿದ್ದರೂ ಡೀಕೆ ಬ್ರದರ್ಸ್ ತಂದೆಯ ಶವವಿಟ್ಟು ಪೂಜಾವಿಧಿ ನಿರ್ವಹಿಸಿದ್ದು ತೋಟಿ ಮಲ್ಲಯ್ಯನ ಸೊತ್ತಿನಲ್ಲಿ!

ನೂರಾರು ಕುರಿ ಕಡಿದು ಸಾವಿರಾರು ಜನರನ್ನು ಸೇರಿಸಿ ತಂದೆ ತಿಥಿ ನಿಮಿತ್ತ ಗುಂಡೂ ತುಂಡಿನ ಸಮಾರಾಧನೆ ನಡೆಸಿದ ಡೀಕೆ ಬ್ರದರ್ಸ್ ತೋಟಿ ಮಲ್ಲಯ್ಯನ ಜಮೀನಿನಲ್ಲೇ ಪೂಜಾವಿಧಿ ನಡೆಸಿದ್ದಾರೆ. ಕೋರ್ಟು ಇಂಜಕ್ಷನ್ ಆದೇಶ ಕೊಟ್ಟಿದ್ದರೂ ಅದು ಕಾಲುಕಸ ಎಂಬಂತೆ ಪೊಲೀಸರನ್ನಿಟ್ಟುಕೊಂಡೇ ದಲಿತರ ಭೂಮಿಯಲ್ಲಿ ತಂದೆಯ ತಿಥಿ ಕಾರ್ಯ ನಡೆಸಿದ್ದಾರೆ. ಇಂಥ ದೌರ್ಜನ್ಯವನ್ನು ಪ್ರತಿಭಟಿಸಿದನೆಂಬ ಒಂದೇ ಕಾರಣಕ್ಕೆ ತೋಟಿ ಮಲ್ಲಯ್ಯನ ಮಗ ಪೇದೆ ಮಲ್ಲೇಶಪ್ಪನನ್ನು ತಾವೇ ಹಾಕಿಸಿದ ಸುಳ್ಳು ಕೇಸಿನ ಕಾರಣಕ್ಕೆ ಸಸ್ಪೆಂಡ್ ಮಾಡುವಂತೆ ರಾಮನಗರದ ಎಸ್ಪಿಯ ಮೂಲಕ ಬೆಂಗಳೂರು ಪೊಲೀಸ್ ಕಮೀಷನರ್‌ಗೆ ಪತ್ರವನ್ನೂ ಬರೆಸುತ್ತಾರೆ!

ತಂದೆ ಸಾವಾದರೇನು ಮಂತ್ರಿಗಿರಿಯ ಮಾನ ಹೋದರೇನು? ಬಡ ದಲಿತರ ಸೊತ್ತು ದಕ್ಕಬೇಕಷ್ಟೆ...?

ದೋ ಸಾವಿರ ಈಸ್ಕೊಂಡು ಜಮೀನು ಬಿಟ್ಟುಕೊಟ್ರೆ ಇಲ್ಲಾ ಅಂದ್ರೆ ಅದೆಂಗೆ ಜಮೀನಿನಲ್ಲಿರ್ತಿಯ ನಾನು ತ್ತೇನಿ...!' ಎಂದು ಹೂಂಕರಿಸಿಬಿಟ್ಟ.

ಅವತ್ತು ಡೀಕೆಯ ರೌಡಿ ಚಾಲು ಕಂಡಿದ್ದೇ ಪಕ್ಕದಲ್ಲೇ ವಿನಯ್ ಕಾರ್ತಿಕ್ 'ಆಯ್ತು ಕಣೋ, ನಾನೂ ಡೇ ಬಿಡ್ತೀನಿ. ಅದೆಂಗೆ ಜಮೀನ್ ಹತ್ರ ಬರ್ತೀಯೋ ಡೇ ಬಿಡ್ತೀನಿ...' ಎಂದು ಮಲ್ಲೇಶಪ್ಪನ ಮೇಲೆ ದ್ದಾನೆ.

ಅಕ್ಟೋಬರ್ 28ರ ರಾತ್ರಿ

ಇಷ್ಟಾಗಿದ್ದೇ ಭೀತಿಗೆ ಬಿದ್ದ ಮಲ್ಲೇಶಪ್ಪ ಕನಕಪುರದ ಎಫ್‌ಸಿ ಕೋರ್ಟ್‌ಗೆ ಡೀಕೆ, ಸೂರಿ, ಅಜಿತ್ ವಾಸ್, ವಿನಯ್ ಕಾರ್ತಿಕ್ ಮುಂತಾದವರ ವಿರುದ್ಧ ಕ್ಷನ್ ನೀಡುವಂತೆ ಪ್ರಾರ್ಥಿಸಿ ಅರ್ಜಿ ಹಾಕಿದ್ದಾನೆ. 6 ತಿಂಗಳ ಹಿಂದೆ ಅಂದರೆ 2013ರ ಆಗಸ್ಟ್ ದು ಕನಕಪುರದ ಮ್ಯಾಜಿಸ್ಟ್ರೇಟ್ ಕೋರ್ಟು ತೋಟಿ ಯ್ಯನ ಸೊತ್ತಿಗೆ ಪ್ರವೇಶ ಮಾಡದಂತೆ ಡೀಕೆ ಗ್ಯಾಂಗ್ ದ್ಧ ಇಂಜಕ್ಷನ್ ತಡೆಯನ್ನೂ ನೀಡಿದೆ. ತಡೆ ಗೊಳಿಸಲು ಡೀಕೆ ಏನೆಲ್ಲ ವಕೀಲರನ್ನಿಟ್ಟರೂ ಜಮೀನು ಟಿ ಇನಾಮ್ತಿಯಾದ್ದರಿಂದ ಸಾಧ್ಯವಾಗಲೇ

ಹಾಗೆ ಇಂಜಕ್ಷನ್ ಇದ್ದಾಗಲೂ ಇದಾಗಿ ೯ ತಿಂಗಳಿಗೆ ಡೀಕೆ ಗ್ಯಾಂಗಿನ ಐವತ್ತಕ್ಕೂ ಮಂದಿ 2013ರ ಅಕ್ಟೋಬರ್ 28ರ ರಾತ್ರಿ ಮಲ್ಲಯ್ಯನ ಜಮೀನಿನ ಮೇಲೆ ಮಾಡಿದ್ದೇ ಅಲ್ಲಿದ್ದ ಹೆಂಗಸರನ್ನು ತ್ತಾರೆ. ಗುಡಿಸಲು ಕಿತ್ತೆಸೆದಿದ್ದೇ ಅದರಲ್ಲಿದ್ದ ಸೆಲ್ಲ ಹೊತ್ತೊಯ್ದು ಮರುದಿನವೇ ಇಡೀ ನ್ನು ಸೇರಿಸಿ ಕಾಂಪೌಂಡ್ ಗೋಡೆ ನಿರ್ಮಿಸುತ್ತಾರೆ. ಮರುದಿನ ಬೆಳಗ್ಗೆ ತಿಂದ ವಿಧವೆಯರ ಸಮೇತ ಸಾತನೂರು ಸ್ ಠಾಣೆಗೆ ಬಂದ ಪೇದೆ ಮಲ್ಲೇಶಪ್ಪ ಯದ ತಡೆ ಉಲ್ಲಂಘಿಸಿದ್ದೂ ಅಲ್ಲದೆ, ವಿಧವೆಯರ ಮೇಲೆ ಕೈಮಾಡಿದ ಬಗ್ಗೆ ದಾಖಲಿಸುತ್ತಾರೆ. ಡೀಕೆ ಮತ್ತು ತಮ್ಮ ವಿರುದ್ಧ ಸಾತನೂರು ಪೊಲೀಸರು ಸ್ಸ್ ದಾಖಲಿಸುತ್ತಾರೆ. ಏಕೆಂದರೆ ದು ಡೀಕೆ ವಶಕ್ಕೆ ಬಂದಾಗಿಲ್ಲ...!

ದಕ್ಕೆ ಇದಕ್ಕೂ ಮೊದಲೇ ಡೀಕೆ ವಿದು ಅಟ್ಟಹಾಸಕ್ಕೆ ಕೈಯಿಟ್ಟು ದಿದು ಕನಕಪುರದ ಪೊಲೀಸ್ ವ್ಯವಸ್ಥೆಯನ್ನೇ ರೌಡಿ ಪಡೆಯನ್ನಾಗಿ ಪರಿವರ್ತಿಸಿದ್ದ!

ತೋಟಿ ಮಲ್ಲಯ್ಯನ ಸೊತ್ತಿಗೆ ರೌಡಿಗಳನ್ನು ನುಗ್ಗಿಸುವುದಕ್ಕೂ ಒಂದು ವಾರದ ಮೊದಲೇ ಅಂದರೆ 2013ರ ಅಕ್ಟೋಬರ್ 22ರ ರಾತ್ರಿ ಕನಕಪುರ ಪೊಲೀಸ್ ಇನ್ಸ್‌ಪೆಕ್ಟರ್ ಸಿದ್ದೇಗೌಡ, ಸಾತನೂರು ಸಬ್ ಇನ್ಸ್‌ಪೆಕ್ಟರ್ ಜೈರಾಮ್ ಸೇರಿದಂತೆ ಹತ್ತಾರು ಮಂದಿ ಪೇದೆಗಳು ಮೂರು ಪೊಲೀಸ್ ವಾಹನಗಳಲ್ಲಿ ಮೊದಲು ಕೊಗ್ಗೇದೊಡ್ಡಿಯಿಂದ ಮಲ್ಲೇಶಪ್ಪನ ಅಣ್ಣನ ಮಗ ಶಿವಣ್ಣನನ್ನು ಹೊತ್ತೊಯ್ದು ಕನಕಪುರ ಪೊಲೀಸ್ ಠಾಣೆಯ ಲಾಕಪ್ಪಿಗೆ ಹಾಕಿದ್ದಾರೆ. ಆನಂತರ ಇದೇ ಖಾಕಿ ಪಡೆ ಕನಕಪುರದಿಂದ 60 ಮೈಲಿಯಾಚೆಯ ಬೆಂಗಳೂರು ಹೊರವಲಯದ ಮಂಚನಕುಪ್ಪೆಗೆ ನುಗ್ಗಿ ಅಲ್ಲಿಂದ ಪೇದೆ ಮಲ್ಲೇಶಪ್ಪನನ್ನು ಎಳೆದೊಯ್ದಿದೆ.

ಲಾಕಪ್ಪಿನಲ್ಲಿ ಪೇದೆ

ಹೀಗೆ ಪೇದೆ ಮಲ್ಲೇಶಪ್ಪನನ್ನು ಹೊತ್ತೊಯ್ದು ಮಾರ್ಗ ಮಧ್ಯದಲ್ಲೇ ಗಾಡಿ ನಿಲ್ಲಿಸಿಕೊಂಡ ಇನ್ಸ್‌ಪೆಕ್ಟರ್ ಸಿದ್ದೇಗೌಡ 'ಯಾಕಯ್ಯಾ ತರ್ಲೆ ಮಾಡ್ತೀಯಾ? ಕೊಟ್ಟಷ್ಟು ಈಸ್ಕೊಂಡು ಜಮೀನು ಬಿಟ್ಟು ಕೊಡೋದು ಬಿಟ್ಟು ಇಲ್ಲದಿದ್ದ ಕಿತಾಪತಿ ಯಾಕಯ್ಯಾ...?' ಎಂದು ಪಳಗಿಸಲೆತ್ನಿಸಿದ್ದಾರೆ. ಇದ್ಯಾವುದಕ್ಕೂ ಮಲ್ಲೇಶಪ್ಪ ಜಗ್ಗದೇ ಹೋದಾಗ ಆತನನ್ನು ನೇರವಾಗಿ ಕನಕಪುರ ಠಾಣೆಗೊಯ್ದು ರಾತ್ರಿ ಇಡೀ ಲಾಕಪ್ಪಿನಲ್ಲಿಡುತ್ತಾರೆ. ಅಲ್ಲಿ ಓರ್ವ ಕ್ರಿಮಿನಲ್‌ನನ್ನು ನಡೆಸಿಕೊಂಡಂತೆ ಫಿಂಗರ್ ಪ್ರಿಂಟ್, ಫೋಟೋ ಇತ್ಯಾದಿ ತೆಗೆದು ಚಿತ್ರಹಿಂಸೆ ನೀಡುತ್ತಾರೆ. ಅಷ್ಟರಲ್ಲೇ ಕನಕಪುರದ ದಲಿತ ಸಂಘಟನೆಗಳಿಗಿದು ಗೊತ್ತಾಗಿ ಇನ್ನೇನು ಜನ ಠಾಣೆಗೆ ಮುತ್ತಿಗೆ ಹಾಕಬೇಕೆನ್ನುವಷ್ಟರಲ್ಲಿ ಬೆಳ್ಳಂಬೆಳಗ್ಗೆಯೇ ಠಾಣೆಯಲ್ಲೇ ಜಾಮೀನು ಕೊಟ್ಟಂತೆ ಮಾಡಿ ಮಲ್ಲೇಶಪ್ಪನನ್ನು ಬಿಡುಗಡೆ ಮಾಡುತ್ತಾರೆ.




ಸಂಸದ ಸೂರಿ


ಈ ಬಗ್ಗೆ ಮಲ್ಲೇಶ್ ಮಾನವ ಹಕ್ಕು ಆಯೋಗಕ್ಕೆ ದೂರು ಸಲ್ಲಿಸಿದ್ದಾಗಿದೆ. ಕನಕಪುರದಲ್ಲಿ ದಲಿತ ಸಂಘಟನೆಗಳು ಪ್ರತಿಭಟನೆಯನ್ನೂ ಮಾಡಿವೆ. ರಾಮನಗರದ ಎಸ್ಪಿ ಅನುಪಮ್ ಅಗರ್‌ವಾಲ್ ಇದ್ದುದರಲ್ಲಿ ಸಜ್ಜನರಾದರೂ ಡೀಕೆಯ ರಾಜಕೀಯ ತಾಕತ್ತಿನ ಮುಂದೆ ಬಾಯಿ ಮುಚ್ಚಿಕೊಂಡಿದ್ದಾರೆ. ಡೀಕೆ ಗ್ಯಾಂಗ್ ಆಕ್ರಮಿಸಿದ್ದು ತೋಟಿ ಇನಾಮ್ತೀ ಭೂಮಿಯನ್ನು. ಸರ್ಕಾರದ ದಾಖಲೆಗಳೇ ಹೇಳುವಂತೆ ಅದು ತೋಟಿ ಮಲ್ಲಯ್ಯನಿಗೆ ಸೇರಿದ್ದೇ ಹೊರತು ಅದಕ್ಕೂ ಡೀಕೆಗೂ ಆತನ ತಮ್ಮನಿಗೂ ಸೂತ್ರ ಸಂಬಂಧವಿಲ್ಲ. ಕಾನೂನು ಪ್ರಕಾರವೇ ಡೀಕೆ ಆಗಲಿ ಆತನ ಬೇನಾಮಿಗಳಾಗಲಿ ಅಂಥ ಭೂಮಿಗೆ ಕಾಲಿಟ್ಟರೆ ಅಪರಾಧವಾಗುತ್ತದೆ. ಅಂಥಾದ್ದರಲ್ಲಿ ಯಾರ ಹೆಸರಿಗೆ ಜಮೀನಿದೆಯೋ ಅಂಥವರನ್ನೇ ಅತಿಕ್ರಮ ಪ್ರವೇಶದ ಕೇಸು ಹಾಕಿ ಪೊಲೀಸರು ಲಾಕಪ್ಪಿಗೆ ದಬ್ಬುತ್ತಾರೆಂದರೆ ಕನಕಪುರದ ಮಟ್ಟಿಗೆ ದೇಶದ ಕಾಯ್ದೆ ಕಾನೂನು ಸತ್ತಿದೆಯೇ?

ನಡುರಾತ್ರಿ ಕಂಡೋರ ಸೊತ್ತಿಗೆ ನುಗ್ಗಿ ನಿರ್ಗತಿಕ ದಲಿತ ವಿಧವೆಯರನ್ನು ಥಳಿಸಿದ ಡೀಕೆ ಗೂಂಡಾ ಪಡೆಯ ವಿರುದ್ಧ ಕ್ರಮ ಜರುಗಿಸಲಾಗದ ಪೊಲೀಸರು, ದಲಿತರ ಭೂಮಿ ಕಿತ್ತುಕೊಂಡ ಬಲಾಢ್ಯರನ್ನು ಬಂಧಿಸಲಾಗದ ಪೊಲೀಸರು ಅನ್ಯಾಯಕ್ಕೊಳಗಾದ ದಲಿತರನ್ನೇ ಲಾಕಪ್ಪಿಗೆ ದಬ್ಬುತ್ತಾರೆಂದರೆ ರೌಡಿಗಳಿಗೂ, ಪೊಲೀಸರಿಗೂ ಏನು ವ್ಯತ್ಯಾಸ ಬಂತು?

ಬಳ್ಳಾರಿಯ ಗಣಿ ರೆಡ್ಡಿಗಳ ಅಟ್ಟಹಾಸವೇನಿದ್ದರೂ ಬಲಾಢ್ಯ ಗಣಿ ಕಳ್ಳರ ಮೇಲಷ್ಟೇ ಇರುತ್ತಿತ್ತು. ತೀರ ದಲಿತ ವಿಧವೆಯರು, ಬಡಬಗ್ಗರ ಸೊತ್ತಿಗೆ ಗಾಲಿ ರೆಡ್ಡಿ ಗ್ಯಾಂಗ್ ಕೈ ಹಾಕಿರಲಿಲ್ಲ. ಆದರೆ ಡೀಕೆ ಹಾಗಲ್ಲ. ಆತನಿಗೆ ದಲಿತ ವಿಧವೆಯರ ತುಂಡು ಭೂಮಿಯೂ ಬೇಕು. ಕನಕಪುರ ಕಾಡಿನ ಗ್ರಾನೈಟ್ ಗಣಿಗಳೂ ಬೇಕು. ತಾನೊಬ್ಬ ಮಂತ್ರಿ ಎಂಬುದನ್ನೂ ಮರೆತು ನಿರ್ಗತಿಕ ದಲಿತರ ಸೊತ್ತಿಗೆ ರೌಡಿಗಳನ್ನು ನುಗ್ಗಿಸುವ ಡೀಕೆ ಯಾವ ಮುಖ ಹೊತ್ತು ನಾಡಿಗೆ ನ್ಯಾಯ ಹೇಳುತ್ತಾನೆ?


● ದಾ.ಸೋಮನಾಥ್





ರಾಮದಾಸ್ V/s ಗೋ. ಮಧುಸೂದನ್

ಬೀದಿಗೆ ಬಿದ್ದ ಮೈಸೂರು ಬ್ರಾಹ್ಮಣ ಕಾಳಗ



ಮೈಸೂರು ಬ್ರಾಹ್ಮಣ ಪಾರುಪತ್ಯಕ್ಕಾಗಿ ನಡೆದ ಶೀತಲ ಸಮರವೊಂದು ಅಂತಿಮವಾಗಿ ರಾಮದಾಸ್ ಅವನತಿಗೆ ಕಾರಣವಾಯಿತೆ?

ಹೀಗೊಂದು ಅನುಮಾನದ ಹೊಗೆಯಾಡುತ್ತಿರುವುದು ಕೇವಲ ಮೈಸೂರು ಬಿಜೆಪಿಯಲ್ಲಷ್ಟೇ ಅಲ್ಲ ಅಲ್ಲಿನ ಬ್ರಾಹ್ಮಣ ಕುಟೀಲಗಳಲ್ಲೂ ಪದೇ ಪದೇ ಪ್ರತಿಧ್ವನಿಸುತ್ತಿದೆ. ಮೈಸೂರಿನ ಬಿಜೆಪಿ ಎಮ್ಮೆಲ್ಸಿ ಗೋ. ಮಧುಸೂದನ್ ಈ ಪ್ರಶ್ನೆಯ ಒಂದು ತುದಿಯಲ್ಲೂ, ಮಾಜಿ ಮಂತ್ರಿ ರಾಮದಾಸ್ ಮತ್ತೊಂದು ಅಂಚಿನಿಂದಲೂ ಗೋಚರಿಸುತ್ತಿರುವುದರಿಂದಲೇ ಇರಬೇಕು. ಕೆಲವರಿಗಿದು ಬಿಜೆಪಿ ಅಂತಃಕಲಹ, ಮತ್ತೆ ಕೆಲವರಿಗೆ ಮೈಸೂರು ಬ್ರಾಹ್ಮಣರ ಕಚ್ಚಾಟ, ಇನ್ನೂ ಕೆಲವರ ಪ್ರಕಾರ ಯಡ್ಡಿ-ಅನಂತ್ ಜಿದ್ದಾಜಿದ್ದಿಯ ಪರಿಣಾಮ!

ಮೈಸೂರು ಬಿಜೆಪಿ ಮಟ್ಟಿಗೆ ಸದ್ಯ ಅಧಿಪತಿಯಂತಿದದ್ದು ರಾಮದಾಸ್. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮೈಸೂರಿನ ಬಿಜೆಪಿ ಅಭ್ಯರ್ಥಿ ಯಾರಾಗಬೇಕು, ಏನೆಲ್ಲ ಕಾರ್ಯಾಚರಣೆ ನಡೆಸಬೇಕು, ಏನೇನು ತಂತ್ರ ರೂಪಿಸಬೇಕೆಂಬ ಹೊಣೆ ಬಿದ್ದದ್ದು ರಾಮದಾಸ್ ತಲೆಗೇ. ಏಕೆಂದರೆ ರಾಮದಾಸ್ ಕೇವಲ ಅನಂತ್‌ಗಷ್ಟೇ ಆತ್ಮೀಯನಲ್ಲ ಮೋದಿಗೂ ಪರಮಾಪ್ತ!

ಮೈಸೂರು ಬಿಜೆಪಿಯ ದುರ್ಗತಿಯೋ ಫಜೀತಿಯೋ ಗೊತ್ತಿಲ್ಲ. ಅದಕ್ಕೆ ಶತ್ರುಗಳೆಂದರೆ ಕಾಂಗ್ರೆಸ್ಸಾಗಲಿ, ಜೆಡಿಎಸ್ಸಾಗಲಿ ಅಲ್ಲ, ರಾಮದಾಸ್ ತಲೆಕಂಡರೇನೇ ಎಮ್ಮೆಲ್ಸಿ ಗೋ. ಮಧುಸೂದನ್ ಹೊಟ್ಟೆಯೊಳಕ್ಕೆ ಖಾರ ಕಲಿಸಿದಂತಾಗುತ್ತದೆ. ಮಾಜಿ ಸಂಸದ ವಿಜಯ್‌ಶಂಕರ್ ಮತ್ತು ಒಂದಷ್ಟು ಮಂದಿ ಪುಡಿ ರಾಜಕಾರಣಿಗಳನ್ನು ಬಿಟ್ಟರೆ ರಾಮದಾಸ್ ವಿರೋಧಿ ಬಿಜೆಪಿಗಳ ಸಂಖ್ಯೆಯೇ ದೊಡ್ಡದಿದೆ. ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮತ್ತು ಲೋಕಲ್ ಬಿಜೆಪಿ ಮುಖಂಡ ಆರ್ಕೆಸ್ಟ್ರಾ ಮಂಜನಿಗೂ ರಾಮದಾಸ್‌ಗೂ ಪುರಾತನ ಹಗೆಯಿದೆ. ಹಾಗೇ ಬಿಜೆಪಿಯ ಮತ್ತೊಬ್ಬ ಮಾಂಡಲಿಕನಂತಿರುವ ಮಾರುತಿರಾವ್ ಪವಾರ್‌ಗೆ ರಾಮದಾಸ್ ಮೀರಿಸಿ ತಾನು ಮಿಂಚಬೇಕೆಂಬ ಹೊಟ್ಟೆ ಕಿಚ್ಚಿದೆ.

ಇದಲ್ಲದೆ ಬಿಲ್ಡರ್ ಸಿದ್ದರಾಜು, ಯಡ್ಡಿ ಶಿಷ್ಯ ರಾಜೀವ್, ಕರಂದ್ಲಾಜೆ ನಿಷ್ಠರಾದಿಯಾಗಿ ರಾಮದಾಸ್ ವಿರುದ್ಧ ಕತ್ತಿ ಮಸೆಯುತ್ತಲೇ ಇದ್ದರು. ಇದಕ್ಕೆ ಕಾರಣ ಒಂದೆರಡಲ್ಲ. ಶಂಕರಲಿಂಗೇಗೌಡ ಬಿಜೆಪಿ ತೊರೆದ ಮೇಲಂತೂ ಮೈಸೂರು ಬಿಜೆಪಿಯ ಮಟ್ಟಿಗೆ ಅಧಿಪತಿಯಂತೆ ತಲೆ ಎತ್ತಿದ ರಾಮದಾಸ್ ವಿರುದ್ಧ ಒಳಗೊಳಗೇ ಅಸೂಯೆ, ಅಸಹನೆ, ಹೊಟ್ಟೆಕಿಚ್ಚು ಹೊಗೆಯಾಡುತ್ತಲೇ ಇದೆ.

ಹೀಗೆ ರಾಮದಾಸ್ ವಿರುದ್ಧ ಕತ್ತಿ ಮಸೆಯುತ್ತಿದ್ದ ಬಿಜೆಪಿಗಳ ಪೈಕಿ ಮೊದಲು ಕೇಳಿ ಬರುತ್ತಿದ್ದದ್ದು ಎಮ್ಮೆಲ್ಸಿ ಗೋ. ಮಧುಸೂದನ್ ಹೆಸರು. ಏಕೆಂದರೆ ಮೈಸೂರಿನ ಆರೆಸ್ಸೆಸ್ ಮತ್ತು ಬಿಜೆಪಿಯ ಮಟ್ಟಿಗೆ ಹಿರೀಕನೆಂದರೆ ಅದು ಗೋ. ಮಧುಸೂದನ್, ಆ ಕಾಲದಿಂದಲೂ ಮೈಸೂರು ಪ್ರಾಂತ್ಯದ ಬ್ರಾಹ್ಮಣರನ್ನು ಸಂಪರ್ಕಿಸಿಕೊಂಡೇ ಬಂದದ್ದು ಗೋ. ಮಧುಸೂದನ್. ಹುಟ್ಟಾ ಆರೆಸ್ಸೆಸ್ ಮತ್ತು ಕಾರ್ಯತಂತ್ರ ನಿಪುಣ. ಕೈಯಿಟ್ಟ ಪ್ರತಿ ಕೆಲಸವನ್ನೂ ಸದ್ದಿಲ್ಲದೆ ಮಾಡಿ ಮುಗಿಸಬಲ್ಲ ಚಾಣಾಕ್ಷ.

ಆದರೆ ರಾಮದಾಸ್ ಹಾಗಲ್ಲ, ಪಕ್ಕಾ ವ್ಯವಹಾರಸ್ಥ. ಮೂಲತಃ ಆರೆಸ್ಸೆಸ್‌ನವನಲ್ಲವಾದ್ದರಿಂದ ಒಳಗೊಳಗೇ ಬತ್ತಿ ಇಡುವುದಾಗಲಿ, ಮೇಲೆ ನಕ್ಕು ಬೆನ್ನಿಗಿರಿಯುವುದಾಗಲಿ ಗೊತ್ತಿಲ್ಲ. ಒಂದಾನೊಂದು ಕಾಲಕ್ಕೆ ಬಂಗಾರಪ್ಪ ಭಟ್ಟಂಗಿಯಂತಿದ್ದ ಮೂಡಾ ಅಧ್ಯಕ್ಷ ಪಿ. ಗೋವಿಂದರಾಜು ಛೇಲಾಗಿರಿ ಮಾಡಿಕೊಂಡೇ ರಾಜಕೀಯಕ್ಕೆ ಕಾಲಿಟ್ಟ ರಾಮದಾಸ್‌ಗೆ ಮೂಡಾ ಸಂಬಂಧಿ ರಿಯಲ್ ಎಸ್ಟೇಟ್ ತಂತ್ರಗಳೆಲ್ಲ ಕರಗತವಾದವು. ಇದರ ಫಲವಾಗೇ ರಾಮದಾಸ್ ಮತ್ತವರ ಜೋಡಿದಾರ ಸಾ.ರಾ. ಮಹೇಶ್ ಸೈಟು ದಂಧೆಗೆ ನಿಂತರು. ಯಥೇಚ್ಛವಾಗಿ ದುಡ್ಡು ಬಂತಾದ್ದರಿಂದ ಕಾಲಕ್ರಮೇಣ ರಾಜಕೀಯ ಪಿತ್ಥವೂ ನೆತ್ತಿಗೇರಿತು.

ರಾಮದಾಸ್‌ನನ್ನು ಬಿಜೆಪಿಗೆ ಕರೆತಂದು ಬೆಳೆಸಿದ್ದು ಶ್ರೀಕಂಠದತ್ತ ಒಡೆಯರ್. ಅವರ ಮೂಲಕವೇ ಅನಂತ್‌ಕುಮಾರ್‌ಗೆ ಆಪ್ತರಾದರು. ಜಾತಿಯಲ್ಲಿ ಅನಂತ್ ಮತ್ತು ರಾಮದಾಸ್ ಒಂದೇ ಆದ್ದರಿಂದ ಮೈಸೂರಿನ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಟಿಕೆಟ್ಟು ನಿರಾಯಾಸವಾಗಿ ರಾಮದಾಸ್ ಪಾಲಾಯಿತು. ಗೆದ್ದೂ ಬಿಟ್ಟ.

ರಾಮದಾಸ್ ಮಂತ್ರಿಯಾಗುವ ತನಕ ಅಂಥಾ ತಾಪತ್ರಯಗಳಿರಲಿಲ್ಲ, ಅದೇ ಹೊತ್ತಿಗೆ ಶೋಭಾ ಕರಂದ್ಲಾಜೆ ಮೈಸೂರು ಉಸ್ತುವಾರಿ ಸಚಿವೆಯಾಗಿದ್ದು ರಾಮದಾಸ್ ದುರ್ಗತಿಯ ಮುನ್ನುಡಿಯಾಗಿತ್ತು. ಹೇಳಿಕೇಳಿ ರಾಮದಾಸ್ ಅನಂತಕುಮಾರ್ ಅನುಯಾಯಿಯಾದ್ದರಿಂದ ರಾಮದಾಸ್ ಬಗ್ಗೆ ಅಸಹನೆಯಿದ್ದ ಮಾರುತಿರಾವ್ ಪವಾರ್, ಆರ್ಕೆಸ್ಟ್ರಾ ಮಂಜು, ಬಿಲ್ಡರ್ ಸಿದ್ದರಾಜು, ರಾಜೀವ್ ಮತ್ತು ಗೋ. ಮಧುಸೂದನ್ ಇತ್ಯಾದಿಗಳೆಲ್ಲ ಶೋಭಾ ಸುತ್ತಮುತ್ತಲೇ ಗಿರಕಿ ಹಾಕಲಾರಂಭಿಸಿದರು.

ಶೋಭಕ್ಕನಿಗೆ ಮೊದಲೇ ಅನಂತ್ ಕಂಡರೆ ಆಸಹನೆಯಿತ್ತಲ್ಲ, ಯಾರೆಲ್ಲ ರಾಮದಾಸ್ ವಿರುದ್ಧ ಕತ್ತಿ ಮಸೆಯುತ್ತಿದ್ದರೋ ಅಂಥವರನ್ನೆಲ್ಲ ಕರೆ ಕರೆದು ಮಣೆ ಹಾಕತೊಡಗಿದರು. ಆರ್ಕೆಸ್ಟ್ರಾ ಮಂಜು, ಸಿದ್ಧರಾಜು, ರಾಜೀವ್, ಗೋ. ಮಧುಸೂದನ್ ಮುಂತಾದವರ ಪಾಲಿಗೆ ಶೋಭಕ್ಕ ಅಕ್ಷರಶಃ ಭಾಗ್ಯದೇವತೆಯಾದರು. ಹಾಗಂತ ರಾಮದಾಸ್ ಗ್ರಹಚಾರವೇನೂ ಕೆಡಲಿಲ್ಲ, ಮೈಸೂರು ಭಾಗದ ಬ್ರಾಹ್ಮಣ ಕೋಟಾ ಮತ್ತು ಅನಂತ್‌ಕುಮಾರ್ ಪ್ರಭಾವದ ಫಲವಾಗಿ ವೈದ್ಯಕೀಯ ಶಿಕ್ಷಣ ಸಚಿವರಾದ ರಾಮದಾಸ್ ತನ್ನ ಮಂತ್ರಿಗಿರಿ ಬಳಸಿಕೊಂಡೆ ರಿಯಲ್ ಎಸ್ಟೇಟ್ ದೊರೆಯಾದ. ರಾಮದಾಸ್ ತಮ್ಮ ಶ್ರೀಕಾಂತ್ ಮೈಸೂರು ಸುತ್ತಮುತ್ತ ಖರೀದಿಸಿದ ಭೂಮಿ, ಮಾಡಿದ ಲೇಔಟುಗಳು, ಸೈಟು ದಂಧೆಯಿಂದಾಗಿ ಖಾಸಗಿ ಹೆಲಿಕಾಪ್ಟರ್‌ನಲ್ಲಿ ಓಡಾಡುವಷ್ಟು ಶ್ರೀಮಂತನಾಗಿದ್ದೇ ಬಿಜೆಪಿ ಕಾಲದಲ್ಲಿ.

ಈ ಹಂತದಲ್ಲೇ ರಾಮದಾಸ್ ವಿರುದ್ಧ ಭೂಕಬಳಿಕೆಯ ಆರೋಪ ತಲೆ ಎತ್ತಿದ್ದು, ಬಿಜೆಪಿ ಅಧಿಕಾರಕ್ಕೆ ಬರುವ ಮುನ್ನವೇ ಶಾಸಕನಾಗಿ ರಾಮದಾಸ್ ನಡೆಸಿದ ಭೂವ್ಯವಹಾರಗಳನ್ನೆಲ್ಲ ಒಂದೊಂದಾಗಿ ಕೆದಕಿ ತೆಗೆದು ಮಾಧ್ಯಮಗಳಿಗೆ ಒದಗಿಸಲಾಯ್ತು. ಮೊದಮೊದಲು ಇದೆಲ್ಲ ಯಾರೋ ಕಾಂಗ್ರೆಸ್ ಅಥವಾ ಜೆಡಿಎಸ್ ಶಕ್ತಿಗಳದ್ದೇ ಕೈವಾಡವೆಂದು ಲೆಕ್ಕ ಹಾಕಿದ ರಾಮದಾಸ್‌ಗೆ ಅಚ್ಚರಿ ಕಾದಿತ್ತು.

ರಾಮದಾಸ್ ಮತ್ತಾತನ ತಮ್ಮ ಶ್ರೀಕಾಂತ್ ಭೂಕಬಳಿಕೆ ವಿರುದ್ಧ ವ್ಯವಸ್ಥಿತವಾಗಿ ಕಾರ್ಯಾಚರಣೆಗಿಳಿದಿದ್ದು ಇದೇ ಬಿಜೆಪಿ ನಾಯಕ ಗೋ. ಮಧುಸೂದನ್. ಹಾಗಂತ ನೇರವಾಗಿ ಗೋ.ಮ. ಅಖಾಡಕ್ಕಿಳಿಯದೆ ತನ್ನ ಆಪ್ತ ಸಹಚರ ಮಂಜುನಾಥ್‌ನನ್ನು ಮುಂದೆ ಬಿಟ್ಟು ಮಾಡಿಸುತ್ತಿದ್ದನೆಂದು ಬಿಜೆಪಿ ವಲಯದಲ್ಲೇ ಜನಜನಿತವಾಗಿತ್ತು.

ರಾಮದಾಸ್ ಎಷ್ಟೆಂದರೂ ಮೂಲ ಆರೆಸ್ಸೆಸ್ಸಿಗನಲ್ಲ, ಬಿಜೆಪಿ ಲೆಕ್ಕಕ್ಕೆ ತನಗಿಂತ ಕಿರಿಯ. ಆ ಕಾಲದಿಂದಲೂ ಆರೆಸ್ಸೆಸ್ ಕಟ್ಟುತ್ತಲೇ ಮೈಸೂರು ಬ್ರಾಹ್ಮಣರ ಮಟ್ಟಿಗೆ ಅಧಿಪತಿಯಂತಿದ್ದ ತನ್ನನ್ನೇ ಮೀರಿಸಿ ರಾಮದಾಸ್ ಮಿಂಚಲಾರಂಭಿಸಿದ್ದು ಗೋ.ಮ. ಪಾಲಿಗೆ ನುಂಗಲಾರದ ಬಿಸಿ ತುಪ್ಪವಾಗಿತ್ತು. ಬಿಜೆಪಿ ವಿರುದ್ಧ ಸಿಡಿದೆದ್ದ ಯಡ್ಡಿ ಕೆಜೆಪಿ ಕಟ್ಟಿದ ಮೇಲಂತೂ ರಾಮದಾಸ್ ನೇರವಾಗಿ ಯಡ್ಡಿ ವಿರುದ್ಧವೇ ಕಿಡಿಕಾರಿಬಿಟ್ಟ. ಸಹಜವಾಗೇ ಕರಂದ್ಲಾಜೆ ನಿಷ್ಠರಾಗಿದ್ದ ಆರ್ಕೆಸ್ಟ್ರಾ ಮಂಜು, ಸಿದ್ದರಾಜು, ರಾಜೀವ್ ಇತ್ಯಾದಿಗಳೆಲ್ಲ ರಾಮದಾಸ್ ವಿರುದ್ಧ ತಿರುಗಿಬಿದ್ದರು.

ಯಾವತ್ತು ಮತ್ತೆ ಬಿಜೆಪಿಯಲ್ಲಿ ಕೆಜೆಪಿ ವಿಲೀನವಾಯಿತೋ ಸಹಜವಾಗೇ ಕೆಜೆಪಿಯಿಂದ ಬಂದಿದ್ದವರು ಮತ್ತು ಬಿಜೆಪಿಯಲ್ಲೇ ಇದ್ದ ರಾಮದಾಸ್ ವೈರಿಗಳ ಸಂಖ್ಯೆ ದೊಡ್ಡದಾಯಿತು. ಇನ್ನೂ ವಿಚಿತ್ರವೆಂದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ರಾಮದಾಸ್ ವಿರುದ್ಧ ಕೃಷ್ಣರಾಜ ಕ್ಷೇತ್ರಕ್ಕೆ ಕೆಜೆಪಿ ಅಭ್ಯರ್ಥಿಯಾಗಿದ್ದ ರಾಜೀವ್ ಜಾತಿಯಲ್ಲಿ ಬ್ರಾಹ್ಮಣನೆ. ಆಗಲೂ ಬಿಜೆಪಿಯಲ್ಲಿದ್ದ ಗೋ. ಮಧುಸೂದನ್‌ಗೆ ಪಕ್ಷನಿಷ್ಠೆ ತತ್ವನಿಷ್ಠೆಯನ್ನೂ ಮೀರಿದ ಹಗೆ ರಾಮದಾಸ್ ವಿರುದ್ಧ ಭುಗಿಲೆದ್ದಿತ್ತು. ಮೇಲ್ಮೇಲೆ ರಾಮದಾಸ್ ಪರ ಪ್ರಚಾರ ಮಾಡಿಕೊಂಡೇ ಒಳಗಿಂದೊಳಗೆ ಮೈಸೂರಿನ ಬ್ರಾಹ್ಮಣರ ವಲಯದಲ್ಲಿ ಗೋ. ಮಧುಸೂದನ್ ಕೆಜೆಪಿಯ ರಾಜೀವನನ್ನು ಗೆಲ್ಲಿಸುವಂತೆ ಕತ್ತಿ ಮಸೆದದ್ದೂ ಗುಟ್ಟಾಗುಳಿಯಲಿಲ್ಲ.

ಇದೆಲ್ಲದರ ಫಲವೆಂಬಂತೆ ಚುನಾವಣೆಯಲ್ಲಿ ರಾಮದಾಸ್‌ಗೆ ಸೋಲಾಯಿತು. ಕಾಂಗ್ರೆಸ್‌ನ ಸೋಮಶೇಖರ್ ಗೆಲ್ಲುವಂತಾಯ್ತು. ಬಹುಶಃ ಅಷ್ಟೇ ಆಗಿದ್ದರೆ ಬಿಜೆಪಿ ಒಳಕಚ್ಚಾಟ ಅದರ ದುರ್ಗತಿಯಲ್ಲೇ ಅಂತ್ಯ ಕಾಣುತ್ತಿತ್ತೇನೋ, ಯಾವತ್ತು ಕೆಜೆಪಿ, ಬಿಜೆಪಿ ಒಂದಾಗಿ ಮೋದಿಯ ಗಾಳಿ ಬೀಸಲಾರಂಭಿಸಿತೋ ಮತ್ತೆ ಅಧಿಕಾರದ ವಾಸನೆ ಹತ್ತಿದ ಮೈಸೂರು ಬಿಜೆಪಿ ಧಣಿಗಳಿಗೆ ಪ್ರತಿಷ್ಠೆ, ಹೊಟ್ಟೆಕಿಚ್ಚು ಒಟ್ಟೊಟ್ಟಿಗೆ ಭುಗಿಲೆದ್ದಿದೆ. ರಾಮದಾಸ್ ಮತ್ತೆ ಲೋಕಸಭಾ ಅಖಾಡದ ಹೊಣೆ ಹೊತ್ತಿದ್ದು, ವಿಜಯಶಂಕರ್ ಬದಲಿಗೆ ತಾನೇ ಲೋಕಸಭಾ ಅಭ್ಯರ್ಥಿಯಾಗ ಹೊರಟಿದ್ದು ಆತನ ವಿರೋಧಿಗಳ ನಿದ್ದೆಗೆಡಿಸಿದೆ.

ಇದೆಲ್ಲದರ ಪ್ರತಿಫಲವೇ ರಾಮದಾಸ್ ಬಲಿ. ಕುಲಕ್ಕೆ ಮೂಲ ಕೊಡಲಿ ಕಾವು ಎಂಬಂತೆ ಅವರವರ ಮನ ಹುಳುಕನ್ನು ಅವರವರೇ ಅಗೆದು ಬಗೆದು ಪಜೀತಿ ಮಾಡಿಕೊಂಡಿದ್ದಾರೆ. ಇಷ್ಟಾದ ಮೇಲೆ ರಾಮದಾಸ್ ಪ್ರತೀಕಾರ ಕೈಗೊಳ್ಳದೆ ಇರುವುದುಂಟಾ? ಕಾದು ನೋಡಬೇಕಷ್ಟೆ. ಯಾವ್ಯಾವ ಹುತ್ತದಲ್ಲಿ ಯಾವ ಹಾವಿದೆಯೊ?

● ರಾ.ಸೋ

ಆರ್ಕೆಸ್ಟ್ರಾ ಮಂಜನ ಮಸಲತ್ತು

[illegible]

ಮೂರು ಕಥೆಗಳು

ಶಾಂತಿ ಮತ್ತು ಯುದ್ಧ

ಮೂರು ನಾಯಿಗಳು ಬಿಸಿಲು ಕಾಯಿಸುತ್ತ ಮಾತನಾಡುತ್ತಿದ್ದವು.

ಮೊದಲನೆ ನಾಯಿ ಕನಸಿನಲ್ಲೆಂಬಂತೆ ಹೇಳಿತು: 'ನಾಯಿ ಸಾಮ್ರಾಜ್ಯದ ಈ ದಿನಗಳಲ್ಲಿ ನಾವು ಬದುಕುತ್ತಿರುವುದು ಅದ್ಭುತ. ನೋಡು ನಾವೀಗ ಸುಲಭವಾಗಿ ನೀರ ಕೆಳಗೂ ಓಡಾಡಬಲ್ಲೆವು, ನೆಲ ಆಕಾಶಗಳಲ್ಲೂ ಅಷ್ಟೇ ಸುಲಭವಾಗಿ ಸಂಚರಿಸಬಲ್ಲೆವು. ನಾಯಿಗಳ ಸುಖಕ್ಕಾಗಿಯೇ, ನಮ್ಮ ಕಣ್ಣು, ಕಿವಿ, ಮೂಗುಗಳಿಗಾಗೆಂದೇ, ಬಂದಿರುವ ಸಾಧನಗಳ ಮೇಲೆ ಕೆಲಕಾಲ ಕಣ್ಮುಚ್ಚಿ ಧ್ಯಾನ ಮಾಡಬಲ್ಲೆವು.'

ಎರಡನೆಯ ನಾಯಿ ಮಾತನಾಡುತ್ತ ಹೇಳಿತು, 'ನಾವೀಗ ಕಲೆಯ ಬಗ್ಗೆಯೂ ಸೂಕ್ಷ್ಮವಾಗಿದ್ದೇವೆ. ನಮ್ಮ ಪೂರ್ವಿಕರಿಗಿಂತ ಲಯಬದ್ಧವಾಗಿ ಚಂದ್ರನನ್ನು ನೋಡಿ ಬೊಗಳುತ್ತೇವೆ. ನೀರಿನಲ್ಲಿ ನಮ್ಮ ಬಿಂಬ ನೋಡಿಕೊಂಡಾಗ ನಮ್ಮ ಚಹರೆಗಳು ನಿನ್ನೆಯದಕ್ಕಿಂತ ಸ್ಪಷ್ಟವಾಗಿರುವುದು ಕಂಡುಬರುತ್ತದೆ.'

ಮೂರನೇ ನಾಯಿ ಹೇಳಿತು, 'ಆದರೆ ನನಗೆ ತುಂಬ ಆಸಕ್ತಿದಾಯಕವಾಗಿ ಕಾಣಿಸುವುದು ಹಾಗೂ ಮಂತ್ರಮುಗ್ಧನಾಗಿಸುವುದು ಏನೆಂದರೆ ನಾಯಿ ಸಾಮ್ರಾಜ್ಯಗಳ ನಡುವಿನ ಶಾಂತಿ ಒಪ್ಪಂದ ಮತ್ತು ತಿಳಿವಳಿಕೆ.'

ಅವು ಹೀಗೆ ಹೇಳಿಕೊಂಡು ನೋಡುತ್ತಿರುವಾಗಲೇ ತಗೋ, ನಾಯಿ ಹಿಡಿಯುವವ ಬಂದೇಬಿಟ್ಟ.

ಮೂರೂ ನಾಯಿಗಳು ಚಂಗನೆ ನೆಗೆದು ಬೀದಿ ಕಡೆ ಓಟಕಿತ್ತವು. ಅವು ಓಡುತ್ತಿರುವಾಗ ಮೂರನೇ ನಾಯಿ ಕೂಗಿತು, 'ದೇವರಾಣೆ, ಪ್ರಾಣ ಉಳಿಸಿಕೊಳ್ಳಲು ಓಡಿ. ನಾಗರಿಕತೆ ನಮ್ಮ ಹಿಂದೆ ಬಿದ್ದಿದೆ.'

ಋಷಿ ಮತ್ತು ಪ್ರಾಣಿಗಳು

ಹಚ್ಚಹಸಿರಿನ ಬೆಟ್ಟಗಳ ತಪ್ಪಲಲ್ಲಿ ಒಬ್ಬ ಋಷಿ ವಾಸಿಸುತ್ತಿದ್ದ. ಅವನ ಆತ್ಮ, ಹೃದಯ ಶುದ್ಧವಾಗಿದ್ದವು. ನೆಲದ ಮೇಲಿನ ಎಲ್ಲ ಪ್ರಾಣಿಗಳು, ಆಗಸದಲ್ಲಿ ಹಾರುವ ಹಕ್ಕಿಗಳೂ ಜೊತೆಜೊತೆಯಲ್ಲಿ ಬಂದು ಕುಳಿತು ಅವನು ಹೇಳುವುದನ್ನು ಕೇಳುತ್ತಿದ್ದವು. ಅವನ ಸುತ್ತ ಕುಳಿತು, ಸಂತಸದಿಂದ ಅವನನ್ನಾಲಿಸುತ್ತಾ, ರಾತ್ರಿ ಕಳೆದರೂ ಅವನ ಬಳಿಯಿಂದ ಎದ್ದುಹೋಗದೇ ಉಳಿಯುತ್ತಿದ್ದವು. ಅವನೇ ಅವರನ್ನು ಭೂಮಿಗೂ, ಆಗಸಕ್ಕೂ ಒಪ್ಪಿಸಿ ವಿದಾಯ ಹೇಳಿ ಕಳಿಸುತ್ತಿದ್ದನು.

ಒಂದು ಸಂಜೆ ಅವನು ಪ್ರೇಮದ ಕುರಿತು ಮಾತನಾಡುತ್ತಿದ್ದ. ಒಂದು ಚಿರತೆ ತನ್ನ ತಲೆಯೆತ್ತಿ ಅವನನ್ನು ಕೇಳಿತು, 'ಪ್ರೇಮಿಸುವ ಬಗ್ಗೆ ನೀನು ನಮಗೆ ಹೇಳುತ್ತಿದ್ದೀ, ಹೇಳು ಮುನಿಯೇ, ನಿನ್ನ ಸಂಗಾತಿ ಎಲ್ಲಿ?'

'ನನಗೆ ಸಂಗಾತಿಯಿಲ್ಲ', ಅವನೆಂದ.

ಅಚ್ಚರಿಯ ದೊಡ್ಡ ಉದ್ಗಾರ ಎಲ್ಲ ಪ್ರಾಣಿಗಳ ಬಾಯಿಯಿಂದಲೂ ಹೊರಟಿತು. ಅವು ತಂತಮ್ಮಲ್ಲೇ ಮಾತನಾಡಿಕೊಳ್ಳತೊಡಗಿದವು, 'ತಾನು ಮಾಡಿ ಗೊತ್ತಿಲ್ಲದೇ ಇರುವಾಗ ಅವನು ಪ್ರೇಮಿಸುವ ಮತ್ತು ಕಾಮಿಸುವ ಕುರಿತು ನಮಗೆ ಹೇಗೆ ತಾನೇ ಹೇಳಬಲ್ಲನು?' ನಿರಾಸೆಯಿಂದ, ಅಸಮಾಧಾನದಿಂದ ಗೊಣಗಿಕೊಳ್ಳುತ್ತ ಅವನನ್ನು ಒಬ್ಬಂಟಿ ಉಳಿಸಿಹೋದವು.

ಆ ರಾತ್ರಿ ಋಷಿಯು ತನ್ನ ಚಾಪೆಯ ಮೇಲೆ ಬೋರಲಾಗಿ ಮಲಗಿ ನೆಲಕ್ಕೆ ಮುಖ ಮಾಡಿ ಜೋರಾಗಿ ಅತ್ತ, ತನ್ನ ಕೈಗಳಿಂದಲೇ ತನ್ನೆದೆ ಬಡಿಬಡಿಸಿಕೊಂಡು ಅತ್ತ.

ಮುತ್ತು

ಒಂದು ಸಿಂಪಿ ಮತ್ತೊಂದಕ್ಕೆ ಹೇಳಿತು, 'ಒಳಗೆ ತಡೆಯಲಾರದಷ್ಟು ನೋವು ತುಂಬಿದೆ, ಅದು ಭಾರ. ದುಂಡಗೆ ಆವರಿಸಿ ಸೀಳಿಹಾಕುತ್ತಿದೆ, ನನಗೆ ಕಷ್ಟವಾಗುತ್ತಿದೆ.'


ಮತ್ತೊಂದು ಸಿಂಪಿ, ಜಂಬದಿಂದ, ಸಮಾಧಾನದಿಂದ ಹೇಳಿತು: 'ಸದ್ಯ ದೇವರೇ ಕಾಪಾಡಿದ, ಈ ಕಡಲ ಕರುಣೆ ಎನ್ನಬೇಕು, ನನ್ನ ಒಳಗೆ ಅಂಥ ಯಾವ ನೋವೂ ಇಲ್ಲ. ನಾನು ಸುಖವಾಗಿ, ಅಖಂಡವಾಗಿ ಇದ್ದೇನೆ. ಒಳಗೂ ಹೊರಗೂ..'

ಅದೇ ಹೊತ್ತಿಗೆ ಒಂದು ಏಡಿ ಆ ದಾರಿಯಲ್ಲಿ ಹಾದುಹೋಯಿತು. ಈ ಇಬ್ಬರ ಮಾತು ಕೇಳಿ ತಡೆದು ನಿಂತಿತು. ಒಳಗೆ ಹೊರಗೆ ಅಖಂಡವಾಗಿ, ಸುಖವಾಗಿ ಇರುವ ಸಿಂಪಿಗೆ ಹೇಳಿತು, 'ಹೌದು, ನೀನು ಸುಖಿ, ಹಗುರ ಮತ್ತು ಅಖಂಡ, ಆದರೆ ನಿನ್ನ ಪಕ್ಕದಲ್ಲಿರುವ ಅವರ ನೋವು ಏನೆಂದು ತಿಳಿಯದೆ? ಒಳಗಿರುವುದು ಅಪ್ರತಿಮ ಚೆಲುವಿನ ಅಮೂಲ್ಯ ಮುತ್ತು!'


(ದಿ ವಾಂಡರರ್)

ಖಲೀಲ್ ಗಿಬ್ರಾನ್





ಅನು:
ಡಾ.ಎಚ್.ಎಸ್.ಅನುಪಮಾ



ಮೋದಿಯ 'ಕ್ಲೀನ್‌ಚಿಟ್' ಹೂರಣವನ್ನು ಬಯಲು ಮಾಡಿರುವ ಮಿತ್ರ ಮನೋಜ್

ನಾನು ದೆಹಲಿಯಲ್ಲಿ ಟೈಮ್ಸ್ ಆಫ್ ಇಂಡಿಯಾ ...ಕೆಯಲ್ಲಿ ಕೆಲಸ ಮಾಡುತ್ತಿದ್ದಾಗ ಆಂಧ್ರದ ಒಬ್ಬ ಯುವಕ ...ನ್ನೊಂದಿಗೆ ಕೆಲಸ ಮಾಡುತ್ತಿದ್ದ. ಅವನ ಹೆಸರು ಮನೋಜ್ ...ತ್ತಾ. ನನಗೆ ಅವನ ತೆಲುಗು ಭಾಷೆ ಗೊತ್ತಿಲ್ಲ, ಅವನಿಗೆ ... ಕನ್ನಡ ಗೊತ್ತಿಲ್ಲ. ಆದರೆ ಇಬ್ಬರೂ ದಕ್ಷಿಣ ...ಭಾರತದವರಾದ್ದರಿಂದ, ಮತ್ತು ಆತ ತುಂಬಾ ಸೌಮ್ಯ ...ಸ್ವಭಾವದವನೂ, ಸಜ್ಜನನೂ ಆಗಿದ್ದರಿಂದ ಅವನ ಮೇಲೆ ...ಗೆ ಅಕ್ಕರೆ. ಒಮ್ಮೆ ಅವನು ಬಾಡಿಗೆಗೆ ರೂಮ್ ...ಹುಡುಕುತ್ತಿದ್ದಾಗ ನಾನು ವಾಸವಿದ್ದ ಮನೆ ಮಾಲೀಕರಿಗೆ ...ಮನೋಜ್ ಪರ ಶಿಫಾರಸ್ಸು ಮಾಡಿ ಅದೇ ಬಿಲ್ಡಿಂಗ್‌ನಲ್ಲಿ ...ನಿಗೆ 'ಬರ್ಸಾತಿ' ರೂಮ್ ಸಿಗುವಂತೆ ನೋಡಿಕೊಂಡಿದ್ದೆ. ...ಮನೋಜ್ ಹೈದರಾಬಾದಿನ ಒಸ್ಮಾನಿಯಾ ...ವಿಶ್ವವಿದ್ಯಾಲಯದಲ್ಲಿ ಲಾ ಓದಿದ್ದರೂ ಪತ್ರಿಕೋದ್ಯಮದಲ್ಲಿ ... ಇದ್ದಿದ್ದರಿಂದ ಟೈಮ್ಸ್ ಸೇರಿದ್ದ. ಆಗ ಆತ ಹೆಚ್ಚಾಗಿ ...ದೆಹಲಿ ಹೈಕೋರ್ಟ್‌ನಲ್ಲಿ ಜರುಗುತ್ತಿದ್ದ ವಿಷಯಗಳ ಬಗ್ಗೆ ...ವರದಿ ಮಾಡುತ್ತಿದ್ದ. ಆ ಕಾರಣಕ್ಕೆ ಮನೋಜ್‌ಗೆ 1984ರ ...ಸಿಖ್ ವಿರೋಧಿ ದಂಗೆಯಲ್ಲಿ ದಮನಕ್ಕೊಳಗಾದವರ ಸಂಪರ್ಕ ಸಿಕ್ಕಿತು. ...ದ ಬಗ್ಗೆ ಮತ್ತು 1984ರಲ್ಲಿ ಆದ ಗಲಭೆ ಬಗ್ಗೆ ...ಗೆ ಆಸಕ್ತಿ ಬೆಳೆದು ಸಮಯ ಸಿಕ್ಕಾಗಲೆಲ್ಲ ಅದರ ... ಮಾಹಿತಿ ಸಂಗ್ರಹಿಸಲಾರಂಭಿಸಿದ. ಪರಿಣಾಮವಾಗಿ ... ಎಚ್.ಎಸ್.ಫೂಲ್ಕಾ ಎಂಬ ಹಿರಿಯ ವಕೀಲರ ...ಜೊತೆಗೂಡಿ 2007ರಲ್ಲಿ 'ವೆನ್ ಅ ಟ್ರೀ ಶುಕ್ ಡೆಲ್ಲಿ' ಎಂಬ ಪುಸ್ತಕವನ್ನು ಬರೆದ. ಆ ಪುಸ್ತಕಕ್ಕೆ ಉತ್ತಮ ವಿಮರ್ಶೆಗಳು ಬಂದಿದ್ದವು.

ಈಗ ಮನೋಜ್ 'ದಿ ಫಿಕ್ಷನ್ ಆಫ್ ಫ್ಯಾಕ್ಟ್ ಫೈಂಡಿಗ್ - ಮೋದಿ ಅಂಡ್ ಗೋಧ್ರಾ' ಎಂಬ ಪುಸ್ತಕವನ್ನು ಸ್ವತಂತ್ರವಾಗಿ ಬರೆದಿದ್ದಾನೆ. ಈ ಪುಸ್ತಕ ಕುರಿತೂ ಈಗಾಗಲೇ ಉತ್ತಮ ವಿಮರ್ಶೆಗಳು ಬರುತ್ತಿವೆ. 'ಸತ್ಯಶೋಧನೆ ಎಂಬ ಕಲ್ಪನೆ' ಎಂಬ ಅರ್ಥದ ಈ ಪುಸ್ತಕದ ಹೆಸರೇ ಗಮನ ಸೆಳೆಯುವಂತಿದೆ.

ನರಹಂತಕ ನರೇಂದ್ರ ಮೋದಿ ಮತ್ತಾತನ ಬೆಂಬಲಿಗರು 2002ರ ನರಮೇಧ ಕುರಿತಂತೆ ಸುಪ್ರೀಂಕೋರ್ಟ್ ನೇಮಿಸಿದ್ದ ಎಸ್‌ಐಟಿಯಿಂದ 'ಕ್ಲೀನ್‌ಚಿಟ್' ಸಿಕ್ಕಿದೆ ಎಂದೇ ಬೊಗಳುತ್ತಿದ್ದಾರಲ್ಲವೇ? ಆದರೆ ಆ 'ಕ್ಲೀನ್‌ಚಿಟ್' ಯಾವ ರೀತಿಯಲ್ಲೂ 'ಕ್ಲೀನ್' ಆಗಿಲ್ಲವೆಂದೂ, ಆ ಎಸ್‌ಐಟಿ ತಂಡದ ಮುಖ್ಯಸ್ಥನಾಗಿದ್ದ ಪೊಲೀಸ್ ಅಧಿಕಾರಿ ಆರ್.ಕೆ.ರಾಘವನ್ ಹೇಗೆ ಸೂಕ್ತವಾದ ವಿಚಾರಣೆ ಇಲ್ಲದೆ ಮೋದಿಯನ್ನು ಬಿಟ್ಟುಬಿಟ್ಟನೆಂದು ಸವಿಸ್ತಾರವಾಗಿ ಮನೋಜ್ ಬರೆದಿದ್ದಾನೆ.

ಸಂಸತ್ ಚುನಾವಣೆಗೆ ಇನ್ನು ಕೆಲವೇ ತಿಂಗಳು ಉಳಿದಿರುವುದರಿಂದ ಈ ಹೊತ್ತಿನಲ್ಲಿ ಮೋದಿಯ ಅಸಲಿ ಮುಖವನ್ನು, ಎಸ್‌ಐಟಿಯ ಪಾಖಂಡಿತನವನ್ನೂ ಮನೋಜ್ ಬಯಲಿಗೆಳೆದಿರುವುದು ಸಹಜವಾಗಿಯೇ ಚೆಡ್ಡಿಗಳ ನಿದ್ದೆ ಕೆಡಿಸಿದೆ. ಅವರೀಗ ಮನೋಜ್ ವಿರುದ್ಧ ಕೆಂಡಕಾರುತ್ತಿದ್ದಾರೆ.


ಈ ಪುಸ್ತಕದ ಬಗ್ಗೆ 'ಔಟ್‌ಲುಕ್' ಪತ್ರಿಕೆ ಇತ್ತೀಚೆಗೆ ಮುಖಪುಟ ವರದಿಯನ್ನು ಪ್ರಕಟಿಸಿದೆಯಲ್ಲದೆ ಹಿರಿಯ ಪತ್ರಕರ್ತ ಸಿದ್ಧಾರ್ಥ್ ವರದರಾಜನ್ ಅವರು ಒಂದು ವಿಮರ್ಶೆಯಲ್ಲಿ ಇದನ್ನು ಕೊಂಡಾಡಿದ್ದಾರೆ.

ನನ್ನ ತೆಲಂಗಾಣ ಸಹೋದರನಂತಿರುವ ಮನೋಜ್‌ಗೆ ಇತ್ತೀಚೆಗೆ ಶುಭಾಶಯವನ್ನು ಹೇಳಿದೆ. ಜೊತೆಗೆ ಆ ಪುಸ್ತಕವನ್ನು ಕನ್ನಡದಲ್ಲಿ ಪ್ರಕಟಿಸುವ ಬಗ್ಗೆ ಆಸಕ್ತಿಯನ್ನೂ ವ್ಯಕ್ತಪಡಿಸಿದೆ. ಆದರೆ ಇಬ್ಬರೂ ಕೆಲಸದಲ್ಲಿ ಮುಳುಗಿದ್ದರಿಂದ ಮುಂದಿನ ವಾರ ಚರ್ಚಿಸೋಣ ಎಂದು ಮಾತಾಡಿಕೊಂಡಿದ್ದೇವೆ.

ಅಂದಹಾಗೆ ಮನೋಜ್ ಈ ಪುಸ್ತಕವನ್ನು ತನ್ನ ಅಮ್ಮನಿಗೆ ಮತ್ತು ಶೊಯಿಬುಲ್ಲಾ ಖಾನ್ ಎಂಬುವವರಿಗೆ ಅರ್ಪಿಸಿದ್ದಾನೆ. ಯಾರು ಈ ಶೊಯಿಬುಲ್ಲ ಖಾನ್ ಎಂದು ನನಗೆ ಕುತೂಹಲವಾಗಿ ಗೂಗಲ್‌ನಲ್ಲಿ ಹುಡುಕಾಡಿದೆ. ಆಗ ಗೊತ್ತಾಗಿದ್ದೇನೆಂದರೆ:

1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದಿದ್ದರೂ ಹೈದರಾಬಾದಿನ ನಿಜಾಮ ತಾನು ಸ್ವತಂತ್ರವಾಗಿರಬೇಕು ಅಥವಾ ಪಾಕಿಸ್ತಾನಕ್ಕೆ ಸೇರಬೇಕು ಎಂದು ಲೆಕ್ಕಹಾಕುತ್ತಿದ್ದ. ಆದರೆ ಹೈದರಾಬಾದಿನಲ್ಲಿ 'ಇಮ್ರೋಜ್' ಎಂಬ ಉರ್ದು ಪತ್ರಿಕೆಯನ್ನು ಪ್ರಕಟಿಸುತ್ತಿದ್ದ ಗಾಂಧಿ-ನೆಹರು-ಪಟೇಲರನ್ನು ಆರಾಧಿಸುತ್ತಿದ್ದ ಶೊಯಿಬುಲ್ಲಾ ಖಾನ್ ಹೈದರಾಬಾದ್ ಭಾರತದ ಭಾಗವಾಗಬೇಕೆಂಬ ನಿಲುವನ್ನು ಹೊಂದಿದ್ದ. ಇದರಿಂದ ಉಗ್ರಗೊಂಡ ನಿಜಾಮನ ರಜಾಕಾರರು 1948ರ ಆಗಸ್ಟ್ 21ರಂದು ಶೊಯಿಬುಲ್ಲಾ ಖಾನ್‌ನನ್ನು ಕೊಂದುಹಾಕಿದರು ಮಾತ್ರವಲ್ಲ ನಿಜಾಮ ಮತ್ತು ಮಜಲಿಸ್ ನಾಯಕ ಖಾಸಿಮ್ ರಿಜ್ವಿಯನ್ನು ವಿರೋಧಿಸಿದ್ದಕ್ಕೆ ಆತನ ಕೈಗಳನ್ನೂ ಭೀಕರವಾಗಿ ಕತ್ತರಿಸಿಹಾಕಿದ್ದರು.


ಶೊಯಿಬುಲ್ಲಾ ಖಾನ್ ಜಾತ್ಯತೀತ ಭಾರತಕ್ಕಾಗಿ ಆಶಿಸಿದ್ದಕ್ಕೆ ಹುತಾತ್ಮನಾದ...



ಮೋದಿಯ ಮುಖವಾಡವನ್ನು ತೆರೆದಿಡುವ ಪುಸ್ತಕವನ್ನು ಶೊಯಿಬುಲ್ಲಾ ಖಾನ್‌ಗೆ ಮಿತ್ರ ಮನೋಜ್ ಅರ್ಪಿಸಿರುವುದು ನಿಜಕ್ಕೂ ಅರ್ಥಪೂರ್ಣವಾಗಿದೆ...

● ಗೌರಿ

ಈ ಕವನ



...ಡಿ ಡೋನಿಗರ್ ಅವರ 'ದಿ ಹಿಂದೂಸ್- ಆನ್ ಆಲ್ಟರ್ನೇಟಿವ್ ಹಿಸ್ಟರಿ' ಪುಸ್ತಕವನ್ನು ಪೆಂಗ್ವಿನ್ ಸಂಸ್ಥೆ ಹಿಂದೆ ಪಡೆದ ಹಿನ್ನೆಲೆಯಲ್ಲಿ ಸಾಹಿತ್ಯ ವಲಯದಲ್ಲಿ ಈಗ ತಲ್ಲಣ ಮೂಡಿಸುತ್ತಿರುವ ...ಿತ ಕವಿಯತ್ರಿ ಮೀನಾ ಕಂದಸಾಮಿ ಬರೆದಿರುವ ಕವನದ ಅನುವಾದ ಇಲ್ಲಿದೆ.

...ಕವನ ಹಿಂದೂ ಕವನವಲ್ಲ,
...ಕವನ ಹಿಂಸಿಸಲು ಉತ್ಸುಕವಾಗಿರುವ ಕವನ.
...ಕವನಕ್ಕೆ ಆಳವಿಲ್ಲ ರೂಪವಿಲ್ಲ,
...ಕವನದಲ್ಲಿ ಹಿಂದೂ ಧರ್ಮ ಘನಗಂಭೀರವೆಂಬ ಚಿತ್ರಣವಿಲ್ಲ,
...ಕವನ ಒಗಟು ಒರಟಾಗಿದೆ.
...ಕವನ ಧರ್ಮವನ್ನು ಒಪ್ಪದ ಚಾರ್ವಾಕ.
...ಕವನದಲ್ಲಿ ಸಾಸಿವೆಯಷ್ಟೂ "ಸತ್ಯನಿಷ್ಠೆ"ಯಿಲ್ಲ,
...ಕವನವು ...ಕಾರಕನಷ್ಟೇ ಉಗ್ರತ್ವವಾಗಿದೆ.
ಈ ಕವನಕ್ಕೊಂದು ಹಿಡನ್ ಅಜೆಂಡಾ ಇದೆ.
ಈ ಕವನವು ಹಿಂದೂಗಳನ್ನು ಅವಹೇಳನ ಮಾಡುತ್ತದೆ,
ಅವರನ್ನು ಲಘುವಾಗಿ ಚಿತ್ರಿಸುತ್ತದೆ.
ಈ ಕವನವು ಹಿಂದೂ ಧರ್ಮದ ಅಸಂಗತಗಳನ್ನಷ್ಟೇ ಹೇಳುತ್ತದೆ.
ಈ ಕವನವು ಹಿಂದೂ ಧರ್ಮದ ಕೆಡುಕುಗಳನ್ನು ಮಾತ್ರ ಎತ್ತಿ ತೋರಿಸುತ್ತದೆ.
ಈ ಕವನವು ದೇವರನ್ನು ಬಯ್ಯುವ ನೈತಿಕ ಹಕ್ಕನ್ನು ಎತ್ತಿ ಹಿಡಿಯುತ್ತದೆ.
ಈ ಕವನವು ಬೆತ್ತಲೆ ಮಹಿಳೆಯರನ್ನು ಕದ್ದು ಕಾಡುವ ಕಳ್ಳಕೃಷ್ಣನನ್ನು ಕೊಂಡಾಡುತ್ತದೆ.
ಈ ಕವನವು ಹೆಂಗಸೊಬ್ಬಳ ಕಾಮತೃಷೆಯಿಂದ ಜ್ವಲಿಸುತ್ತಿದೆ.
ಈ ಕವನವು ಕಾಮದ ವ್ಯಾಕರಣವನ್ನು ಕಲಿಸಿಕೊಡುತ್ತದೆ.
ಈ ಕವನವು ಮತ್ತೆ ಶಿಶ್ನವನ್ನು ಕಾವ್ಯಲೋಕಕ್ಕೆ ತರುತ್ತದೆ.
ಈ ಕವನವು ಶಿವಲಿಂಗವನ್ನು ಶಿವನ ಶಿಶ್ನವೆಂದೇ ಬಣ್ಣಿಸುತ್ತದೆ.
ಈ ಕವನವು ಮೇಲೆ ಹೇಳಲಾದ ಅಂಗವನ್ನು ನಿಗುರಿಸಿ ನಿಲ್ಲಿಸುವುದಿಲ್ಲ.
ಈ ಕವನಕ್ಕೆ ತನ್ನ ವಿಕೃತ ಚಿಂತನೆಯ ಬಗ್ಗೆ ಹೆಮ್ಮೆ ಇದೆ.
ಈ ಕವನವು ಅಸ್ಪೃಶ್ಯತೆ ಮತ್ತು ಮಹಿಳಾ ಪೀಡನೆಗಳು.
ಹಿಂದೂ ಧರ್ಮದ ಕಳಂಕಗಳೆಂದು ಘೋಷಿಸುತ್ತದೆ.
ಈ ಕವನವು ಹಿಂದೂ ಎಂಬ ಧರ್ಮಶಾಸ್ತ್ರವಿಲ್ಲವೆನ್ನುತ್ತದೆ.
ಈ ಕವನವು ತಾನೇ ಧರ್ಮಶಾಸ್ತ್ರವೆಂದು ಘೋಷಿಸುತ್ತದೆ.
ಈ ಕವನವು ಕೋತಿಗಳನ್ನು ಹಿಂಬಾಲಿಸುತ್ತದೆ.
ಈ ಕವನವು ಕುದುರೆಯನ್ನು ಆರಾಧಿಸುತ್ತದೆ.
ಈ ಕವನವು ವೇದಶಾಸ್ತ್ರಗಳು ತನಗೆ ಅಧೀನವೆನ್ನುತ್ತದೆ.
ಈ ಕವನವು ಕಾಡನ್ನು ಸಂಸ್ಕೃತಿಯ ಚೌಕಟ್ಟಿನಲ್ಲಿ ಕೂಡಿಡುವುದಿಲ್ಲ.
ಈ ಕವನವು ಸಂಸ್ಕೃತಿಗೆ ಕಾಡಿನ ಹಾಡು ಕಲಿಸುತ್ತದೆ.
ಈ ಕವನವು ದೇವಸ್ಥಾನಗಳ ಮೇಲೆ ಟ್ಯಾಂಕರುಗಳಿಂದ ದಾಳಿ ಮಾಡುತ್ತದೆ.
ಈ ಕವನವು ತಿದ್ದುಪಡಿ ಮಾಡಿಕೊಂಡು ಆರೆಸ್ಸೆಸ್ಸೇ ಬಿಜೆಪಿಯ ತಾಯಿ ಎಂದು ಒಪ್ಪಿಕೊಳ್ಳುತ್ತದೆ.
ಈ ಕವನವು ದಾಳಿಗೆ ಹಣ್ಣಾಗುವಷ್ಟು ದುರ್ಬಲವಲ್ಲ.
ಈ ಕವನ ಸೆಕ್ಷನ್ 153-ಎ ಇಂದ ಮಣಿಸಲಾಗದ ಕವನ.
ಈ ಕವನ ಒರೆಕೋರೆಗಳಿಲ್ಲದ ಕವನ.
ಈ ಕವನವು ಡಾ. ಅಂಬೇಡ್ಕರ್ ಅವರನ್ನು ಉಲ್ಲೇಖಿಸುತ್ತದೆ.
ಈ ಕವನವು ರಾಮಾಯಣವನ್ನು ವಿಭಿನ್ನ ಕಥನಗಳುಳ್ಳ ಕಾದಂಬರಿಯೆನ್ನುತ್ತದೆ.
ಈ ಕವನ ಐಪಿಸಿ ಸೆಕ್ಷನ್ 295 ಎ ಅನ್ನು ಉಲ್ಲಂಘಿಸುತ್ತದೆ.
ಈ ಕವನ ಪರಿಪೂರ್ಣ ಧರ್ಮನಿಂದನೆ.
ಈ ಕವನ ಸಂಭೋಗವನ್ನು ಕಂಡು ಸಂತೋಷ ಪಡುವ ಕವನ.
ಈ ಕವನ ಸೀತಾ ಲಕ್ಷ್ಮಣರ ಹಾದರದ ಬಗ್ಗೆ ಪಿಸುಗುಟ್ಟುವ ಕವನ.
ಈ ಕವನವು ಶೂರ್ಪನಖಿ ಅತ್ಯಾಚಾರಕ್ಕೆ ಪ್ರತ್ಯಕ್ಷದರ್ಶಿ.
ಈ ಕವನವು ರಾಮನ ಸಂಶಯಾತ್ಮವನ್ನು ನಿಂದಿಸುತ್ತದೆ.
ಈ ಕವನವನ್ನು ಹಿಂದೊಮ್ಮೆ ಪತಿಚಿತೆಗೆ ದೂಡಿ 'ಸತಿ' ಮಾಡಲಾಗಿತ್ತು.
ಈ ಕವನವು ಈಗ ಅದಕ್ಕೆ ಪ್ರತೀಕಾರವನ್ನು ತೀರಿಸಿಕೊಳ್ಳುತ್ತದೆ.
ಈ ಕವನಕ್ಕೆ ಸದಾ ಗೋಮಾಂಸದ ಗೀಳು.
ಈ ಕವನ ಮೂರೂವರೆ ಕೋಟಿ ದೇವಾನುದೇವತೆಗಳ ಜಾತಿಯೇನೆಂದು ಪತ್ತೆ ಹಚ್ಚಿದೆ.
ಈ ಕವನಕ್ಕೆ ದೇವತೆಗಳ ಜಾತಿಯನ್ನು ಬದಲಿಸಿದ್ದಕ್ಕೆ ನ್ಯಾಯಾಲಯದಿಂದ ನೋಟಿಸ್ ಜಾರಿ ಆಗಿದೆ.
ಈ ಕವನವು ಹಿಂದೊಮ್ಮೆ ತಾನು ಟೆಸ್ಟ್ ಟ್ಯೂಬ್ ಶಿಶುವಲ್ಲ ಎಂದಿದ್ದ ಕರ್ಣನನ್ನು ಇಷ್ಟಪಟ್ಟಿತ್ತು.
ಈ ಕವನಕ್ಕೆ ಕರ್ಣನ ತಂದೆ ಯಾರು ಎಂಬುದರ ಬಗ್ಗೆ ಕಿಂಚಿತ್ತೂ ಕುತೂಹಲವಿಲ್ಲ.
ಈ ಕವನವು ಬೇರೊಂದು ಕಡೆಯಿಂದ ಆಯ್ದು ಆಯ್ದು ಕದ್ದದ್ದು.
ಈ ಕವನವು ಹಿಂದೂತ್ವದ ಪಿತೃತ್ವವನ್ನು ಪರೀಕ್ಷಿಸುತ್ತದೆ.
ಈ ಕವನವು ಆರೆಸ್ಸೆಸ್ಸಿನ ಗೋಡ್ಸೆ ಗಾಂಧಿಯನ್ನು ಕೊಂದದ್ದಕ್ಕೆ ಪ್ರತ್ಯಕ್ಷ ಸಾಕ್ಷಿ.
ಈ ಕವನಕ್ಕೆ ಬಂಧನದ ಭಯವಿಲ್ಲ.
ಈ ಕವನ ಗ್ರಾಹಕರ ಆಗ್ರಹಕ್ಕೆ ಬಗ್ಗುವುದಿಲ್ಲ.
ಈ ಕವನ ಮೇಲಿನಿಂದ ಕೆಳಗಿನವರೆಗೆ ಪೋಲಿ ಕವನ.
ಈ ಕವನವು ಯಾರಲ್ಲೂ ಬೇಷರತ್ ಕ್ಷಮೆ ಯಾಚಿಸುವುದಿಲ್ಲ.
ಈ ಕವನವನ್ನು ಯಾರೂ 'ಪೆಂಗ್ವಿನ್' ಮಾಡಲಾಗುವುದಿಲ್ಲ.
ಈ ಕವನವು ಎಂದೂ ಮುದಿಯಾಗುವುದಿಲ್ಲ



● ಮೀನಾ ಕಂದಸಾಮಿ

ಕಕ್ಷೆ

ಕತೆ

ಹಗಲು

ಅರಮನೆಯಂಥ ಮನೆ. ಮುಂದೆ ದೊಡ್ಡ ಪೆಂಡಾಲ್. ಪೆಂಡಾಲ್‌ಗೆ ಸ್ವಲ್ಪ ದೂರದಲ್ಲಿ ಸೌದೆ ತುಂಡು ಉರಿದು ಕೆಂಡ ನಿಗಿನಿಗಿ. ಆಕಾಶದಲ್ಲಿ ಸೂರ್ಯ ಕೂಡ ರವರವ. ಆಕಾಶಕ್ಕೆ ಮೊದಲೂ ಇಲ್ಲ, ಕೊನೆಯೂ ಇಲ್ಲ.

Infinite!

ಸೃಷ್ಟಿಸಿದವನಿಗಾಗಿ ಕೋಟ್ಯಾಂತರ ವರ್ಷಗಳಿಂದ ಕಾಯುತ್ತಿದ್ದರೂ ಪ್ರತ್ಯಕ್ಷವಾಗಿಲ್ಲ. ಹಿತ್ತಾಳೆಯ ಹಂಡೆಯಲ್ಲಿ ನೀರು ಕುದಿಯುತ್ತಿದೆ ಕೊತ ಕೊತ.

ಪೆಂಡಾಲ್ ಕೆಳಗೆ ಮಂಚದ ಮೇಲೆ ಹೆಣ.

ಉಸಿರು ಕಳಚಿಕೊಳ್ಳುತ್ತಿದ್ದಂತೆ ಹೆಸರೂ ಕಳಚಿಕೊಳ್ಳುತ್ತದೆ.

ಖಾಲಿ ಡೆಡ್ ಬಾಡಿ ಅಷ್ಟೆ!

ಹೆಣದ ಮುಖ ಬಿಟ್ಟು ಬೇರೆಲ್ಲ ಭಾಗ ಹೂವಿನಿಂದ ಮುಚ್ಚಿಹೋಗಿದೆ. ಶವಕ್ಕೆ ಶೃಂಗಾರ ಕಡ್ಡಾಯ.

ಸತ್ತ ನಂತರ ಸತ್ತವನೂ ಒಂದೆ, ದೇವರೂ ಒಂದೆ.

"ಮಹಾಬಲ ಯಾರಿಗೂ ಕೆಡುಕು ಬಯಸುತ್ತಿದ್ದವನಲ್ಲ..."

"ಸಾಯುವಂಥ ವಯಸ್ಸಲ್ಲ...."

"ನಾನು ಮದುವೆಯಾದ ಐದಾರು ವರ್ಷಗಳಿಗೆ ಇವ ಹುಟ್ಟಿದ್ದು...."

"ಮುಂದಿನ ಸಂಕ್ರಾಂತಿಗೆ ನನಗೆ ಮೂವತ್ತೆರಡು. ಪ್ರೈಮರಿ ಸ್ಕೂಲಿನಲ್ಲಿ ನಾನು ಎರಡನೆಯ ಇಯತ್ತೆನಲ್ಲಿದ್ದಾಗ ಇವ ನಾಲ್ಕನೆಯ ಇಯತ್ತೆನಲ್ಲಿದ್ದ. ಐದನೇ ಇಯತ್ತೆಗೆ ಇವ ಸೇರಿಕೊಳ್ಳಲೇ ಇಲ್ಲ...."

"ಓದಿದ್ದು ಪ್ರೈಮರಿ ಆದರೂ ಡಿಗ್ರಿ ಓದಿದವರಿಗಿಂತಲೂ ಹೆಚ್ಚು ಜ್ಞಾನವಿತ್ತು...."

"ಸಾವಿಗೆ ವಯಸ್ಸು, ಧರ್ಮ, ಜಾತಿ, ಲಿಂಗ ಯಾವುದೂ ಅಡ್ಡಿಯಲ್ಲ...."

"ಸಾವಿನ ನಂತರ ಏನೋ, ಆ ಸೃಷ್ಟಿಕರ್ತನಿಗೆ ಮಾತ್ರ ಗೊತ್ತು...."

"ಸಾವು ವಿಜ್ಞಾನಕ್ಕೊಂದು ಸವಾಲು...."

"ಅಡಿಕೆ ತೋಟ ಅಂದ್ರೆ ಪಂಚಪ್ರಾಣ. ನಲವತ್ತು ಎಕರೆ ತೋಟಾನ ಇನ್ನು ನೋಡಿಕೊಳ್ಳೋರು ಯಾರೋ...?"

"ತಾಯಿ ರುಕ್ಮಿಣಿಯಮ್ಮ ತೀರಿಕೊಂಡ ನಂತರ ಯಾಕೋ ತುಂಬಾ ಎದೆಗುಂದಿಬಿಟ್ಟ...."

"ಸಿರಿತನ ಇದ್ರೂ ಅಹಂ ಇರ್ಲಿಲ್ಲ, ಆದ್ರೆ ಒರಟ...."

ಪೆಂಡಾಲ್ ಕೆಳಗೆ ಕುಳಿತವರು, ಮನೆಯ ಒಳಗೆ-ಹೊರಗೆ ಓಡಾಡುತ್ತಿದ್ದವರು ಮಾತನಾಡಿಕೊಳ್ಳುತ್ತಿದ್ದರು.

ಹೆಣಕ್ಕೆ ಯಾರ ಮಾತೂ ಕೇಳುವುದಿಲ್ಲ.

"ನಮ್ಮ ಒಡೇರು ಹಲಸಿನಹಣ್ಣಿನಂಥವರು...." ಕೆಲಸದ ಆಳು ದ್ಯಾಮ ಬಿಕ್ಕಳಿಸುತ್ತಿದ್ದ. ಒಡೆಯನಿಗಿಂತಲೂ ಹತ್ತು ವರ್ಷ ದೊಡ್ಡವ. ಹಲಸಿನ ಹಣ್ಣು ಮೇಲೆ ಒರಟು ಒಳಗೆ ಅದೆಂಥ ಘಮಲು, ರುಚಿ. ಅವನಿಗೆ ಹಲಸಿನ ಹಣ್ಣೆಂದರೆ ಬಲು ಪ್ರೀತಿ. ಆದರೆ ತಿನ್ನುತ್ತಿದ್ದದ್ದು ಮಾತ್ರ ಒಂದೇ ಒಂದು ತೊಳೆ.

ತೋಟದ ಸುತ್ತಾ ನೂರಾರು ಕೆಂಡಸಂಪಿಗೆ ಗಿಡಗಳನ್ನು ತಾನೇ ನೆಟ್ಟು ಬೆಳೆಸಿದ್ದ.

"ಮಹಾಬಲ ಸಂಪಿಗೆ ಮರಗಳನ್ನು ಜಾಸ್ತಿ ಬೆಳೆಸಬೇಡ..." ತಾಯಿ ರುಕ್ಮಿಣಿಯಮ್ಮ ತೋಟದಲ್ಲಿ ಸುತ್ತಾಡುವಾಗಲೆಲ್ಲ ಹೇಳುತ್ತಿದ್ದರು. ಅದಕ್ಕೆ ಆಳು ದ್ಯಾಮನೂ ಧ್ವನಿ ಸೇರಿಸುತ್ತಿದ್ದ.

ಮಹಾಬಲ ಸಂಪಿಗೆ ಹೂವನ್ನು ಮೈಕೈಗೆಲ್ಲ ತಿಕ್ಕಿಕೊಳ್ಳುತ್ತಿದ್ದ.

ಸಂಪಿಗೆ ಹೂವಿನ ಘಾಟು ವಾಸನೆಯೆಂದರೆ ಅವನಿಗೆ ಪಂಚಪ್ರಾಣ.

ಅವನಿಗೆ ಸರ್ಪದೋಷವಿದೆಯೆಂದು ವೆಂಕಟರಮಣ ಭಟ್ಟರು ಹೇಳಿದ್ದರು. ಸರ್ಪಸಂಸ್ಕಾರ ಕೂಡ ಮಾಡಿಸಲಾಗಿತ್ತು. ಹದ್ದುಗಳು ತೋಟದಲ್ಲಿನ ಹಾವು ತಿಂದರೆ ಯಜಮಾನ ಏನು ಮಾಡಿಯಾನು? ಹೆಣ ಹಳದಿ ಬಣ್ಣಕ್ಕೆ ತಿರುಗಿದೆ, ದೊಡ್ಡ ನಾಗರವೇ ಮುಟ್ಟಿಕೊಂಡಿರಬೇಕು. ಹೆಣದ ತಲೆ ಭಾಗದಲ್ಲಿ ದೊಡ್ಡ ಕನ್ನಡಿ.

ಕನ್ನಡಿಯ ಮುಂದೆ ಅವಳು, ಅವನ ಹೆಂಡತಿ ಚಾರುಲತಾ. ಮಾತನಾಡಿಕೊಳ್ಳುವ ಸರದಿ ಈಗ ಹೆಂಗಸರದು.

"ಗಂಡನ ಹೆಣದ ಮುಂದೆ ಕುಳಿತಿದ್ದರೂ ಕಣ್ಣಲ್ಲಿ ಒಂದು ಹನಿ ನೀರಿಲ್ಲ."

"ನಿನ್ನೆಯಿಂದ ಅತ್ತೂ ಅತ್ತೂ ಕಣ್ಣೀರು ಖಾಲಿಯಾಗಿರಬೇಕು...."

"ಕೆಲವರು ಹೃದಯದಲ್ಲೆ ಅಳುತ್ತಾರೆ..."

"ಅವಳಿಗೆ ಈ ಸಂಬಂಧ ಇಷ್ಟವೇ ಇರಲಿಲ್ಲ..."

"ಮದುವೆಯಾಗಿ ಆರು ವರ್ಷಗಳಾಯ್ತು, ಗಂಡಹೆಂಡತಿ ಒಟ್ಟಿಗೆ ಓಡಾಡಿದ್ದನ್ನು ನಾನೆಂದೂ ಕಂಡಿಲ್ಲ..."

"ಅವರು ಮನೆಯಲ್ಲಿ, ಅವನು ಅಡಿಕೆ ತೋಟದಲ್ಲಿ, ಪಾಪ, ರುಕ್ಮಿಣಿಯಮ್ಮನಿಗೆ ಅದೊಂದು ಕೊರಗಾಗಿತ್ತು...."

"ಅವಳ ಮಡಿಲಿಗೊಂದು ಕುಡಿಯನ್ನಾದರೂ ಕೊಟ್ಟು ಹೋಗಲಿಲ್ಲ, ದೇವರು ನಿಜವಾಗಿಯೂ ನಿರ್ದಯಿ...."

"ಅತ್ತರೆ ಸತ್ತವರು ಬದುಕಿಬರುವುದಿಲ್ಲ, ಮುಂದೆ ಹೇಗೆಂಬುದನ್ನು ಯೋಚಿಸಬೇಕು...."

"ಅವಳಿಗೇನು ಬಿಎಸ್ಸಿ ಫಸ್ಟ್ ಕ್ಲಾಸ್‌ನಲ್ಲಿ ಪಾಸಾಗಿದ್ದಾಳೆ...."

ಮಾತನಾಡುತ್ತಿದ್ದವರ ಮನಸ್ಸುಗಳು ಕನ್ನಡಿಯಲ್ಲಿ ಬೆತ್ತಲಾಗಿದ್ದವು. ಎಲ್ಲರೂ ಕಣ್ಣೀರನ್ನು ಒರೆಸಿಕೊಳ್ಳುತ್ತಿದ್ದರು.

ಏನೋ ಗದ್ದಲ.

ವಾದ್ಯದವರು ಬಂದಿದ್ದರು.

ಶೇಂದಿ ಕುಡಿದು ವಾಲಾಡುತ್ತಿದ್ದರು.

"ಯಾರಿಗೆ ಯಾರುಂಟು ಎರವಿನ ಸಂಸಾರ ನೀರ ಮೇಲಣ ಗುಳ್ಳೆ ನಿಜವಲ್ಲ ಹರಿಯೇ...."

"ಈ ದೇಹದಿಂದ ದೂರವಾದೆ ಏಕೆ ಆತ್ಮವೇ.... ಈ



ಸಾವು ನ್ಯಾಯವೆ....?" ಜೀಪಿನಲ್ಲಿ ಹೋಗಿ ಅವರನ್ನು ಶಿರಸಿಯಿಂದ ಕರೆದುಕೊಂಡು ಬಂದಿದ್ದರು. ಆರು ವರ್ಷಗಳ ಹಿಂದೆ ಮದುವೆಯ ಮೆರವಣಿಗೆಗೆ ಬಂದಿದ್ದವರು ಇದೇ ವಾದ್ಯದವರು.

"ಮದುವೆಯ ಈ ಬಂಧ, ಅನುರಾಗದ ಅನುಬಂಧ, ಏಳೇಳು ಜನುಮದಲೂ ತೀರದ ಸಂಬಂಧ...."

"ಆಕಾಶವೆ ಬೀಳಲಿ ಮೇಲೆ ನಾನೆಂದು ನಿನ್ನವನು, ಭೂಮಿಯೆ ಬಾಯ್ಬಿಡಲಿ ಇಲ್ಲೆ ನಾ ನಿನ್ನ ಕೈಬಿಡೆನು..."

ಗೆಳತಿಯರ ಕುಲುಕುಲು ನಗು.

ಗಂಡನ ಮನೆಗೆ ಮರವಳಿಗೆಗೆ ತೌರಿನಿಂದ ಬಂದಿದ್ದ ಗೆಳತಿಯರ ಮೆರವಣಿಗೆ ಅರಮನೆಯಂಥ ಮನೆಗೆ ಮೆರುಗು, ಸಂಭ್ರಮ ತಂದಿದ್ದವು.

"ಓಹ್ ವ್ಹಾ ವಾಟ್ ಎ ಬ್ಯೂಟಿಫುಲ್ ಹೌಸ್, ಚಾರು ನಿನ್ನ ಜೊತೆ ನಾನೂ ಇಲ್ಲೆ ಇದ್ದು ಬಿಡ್ತೀನಿ ಕಣೆ...."

"ಚಾರು ನೀನೆ ಭಾಗ್ಯವಂತೆ ಕಣೆ. ನಾದಿನಿಯರಿಲ್ಲ, ಮೈದುನರಿಲ್ಲ, ರಾಣಿ, ರಾಣಿಥರ ಇರ್ಬೋದು. ಯೂ ಲಕ್ಕಿ ಗರ್ಲ್..."

"ನಲವತ್ತು ಎಕರೆ ಅಡಿಕೆ ತೋಟದ ಒಡತಿ ಅಂದ್ರೆ ಸುಮ್ನೇನೆ...? ಇಂಥ ಸ್ವರ್ಗ ಬಿಟ್ಟು ಸಾಫ್ಟ್‌ವೇರ್ ಗಂಡುಗಳನ್ನು ಹುಡುಕಿಕೊಂಡು ಲಂಡನ್, ನ್ಯೂಯಾರ್ಕ್ ಅಂತ ಅಲೆಯೋದು ಏಕೆ? ಒಳ್ಳೆ ಅನ್ನ ಇಲ್ಲ, ಸಾರು ಇಲ್ಲ...."

"ನಿನಗೆ ಇಷ್ಟ ಇಲ್ಲ ಅಂದ್ರೆ ಹೇಳ್ಬಿಡೆ, ಫಸ್ಟ್ ನೈಟ್‌ಗೆ ನಾನೇ ರೆಡಿಯಾಗಿ ಬಿಡ್ತೀನಿ. ಬೇಕಾದ್ರೆ ನೀನು ಆ ಭಾಸ್ಕರನ್ನ ಕರೆದುಕೊಂಡು ಎಲ್ಲಿಗಾದ್ರೂ ಓಡಿ ಹೋಗು...."

ಆದರೆ ಭಾಸ್ಕರ ಮದುವೆಗೆ ಬರಲಿಲ್ಲ, ಪಾಪ, ತ್ಯಾಗಮಯಿ. ಗೆಳತಿಯರ ನಗು, ಕೇಕೆ.

ನೆನಪಾಗಿ ನಗು ಬರುತ್ತದೆ ಅವಳಿಗೆ.

ಹೆಣದ ಮುಂದೆ ನಗಬಾರದೆಂಬ ಕಾನೂನೇನೂ ಇಲ್ಲ. ಆದರೆ ಅವಳ ನಗುವಿನಲ್ಲಿ ಕಣ್ಣೀರು ಕಾಣಿಸಿಕೊಂಡಿತ್ತು. ನಗು ಮತ್ತು ಅಳು ಸದಾ ಒಂದರ ಬೆನ್ನಿಗೊಂದಿರುತ್ತವೆ.

ಗೆಳತಿಯರು ಒಬ್ಬರೂ ಕಾಣಿಸುತ್ತಿಲ್ಲ, ಯಾರು ಯಾರು ಎಲ್ಲೆಲ್ಲೊ... **Escape velocity.**

"ಹೆಣದ ಸ್ನಾನಕ್ಕೆ ರೆಡಿ ಮಾಡಿ ಟೈಂ ಆಯ್ತು, ಬರುವವರೆಲ್ಲ ಬಂದು ಆಗಿದೆ...." ಹಿರಿಯರೊಬ್ಬರು ಜೋರಾಗಿ ಕೂಗಿದ್ದರು.

ಹೆಂಡತಿಯೇ ಹೆಣದ ಸ್ನಾನ ಮಾಡಿಸಬೇಕು.

ಜಳಕವೆಂದರೆ ಅವನಿಗೆ ತುಂಬಾ ಇಷ್ಟ.

ಬಚ್ಚಲುಮನೆಯ ಹಂಡೆಯಲ್ಲಿ ಸದಾ ಬಿಸಿ ನೀರು ಸಿದ್ಧ.

ತೋಟಕ್ಕೆ ಹೋಗಿ ಬಂದಾಗಲೆಲ್ಲ ಬಿಸಿ ನೀರು ಇಳಿಬಿಟ್ಟುಕೊಳ್ಳುತ್ತಿದ್ದ. ಒಂದು ದಿನವೂ ತನ್ನಿಂದ ಬೆನ್ನು ಉಜ್ಜಿಸಿಕೊಂಡವನಲ್ಲ.

"ಅಮ್ಮ ಬೆನ್ನು ಉಜ್ಜು ಬಾ...." ಎಳೆಯ ಮಗುವಿನಂತೆ ಕರೆಯುತ್ತಿದ್ದ. ಅತ್ತೆ ತುಂಬಾ ಒಳ್ಳೆಯವರು. ಸಂಜೆಯ ಹೊತ್ತು ಪುರಾಣಗಳನ್ನು ಪಠಿಸುತ್ತಿದ್ದರು.

"ಚಾರು, ಮಹಾಬಲ ಹಸುಗೂಸಿನಂಥವನು...."

"ಹೆಣ್ಣು ಭೂಮಿ ಇದ್ದಂತೆ... ಎಲ್ಲವನ್ನೂ ಸಾವಧಾನವಾಗಿ ಭರಿಸಬೇಕು...."

"ಎಂಥ ಮನೆತನದ ಮಾನಮರ್ಯಾದೆಯಾಗಲೀ ಹೆಂಗಸರ ಕೈಲಿ ಇರುತ್ತದೆ...."

"ಮಹಾಬಲ ಹುಟ್ಟಿದಾಗ ನನ್ನ ಮೊಲೆಯಲ್ಲಿ ಒಂದು ತೊಟ್ಟು ಹಾಲು ಇರಲಿಲ್ಲ, ಹೋಗಲಿ ಅಂತ ಬೇರೆ ಹೆಂಗಸರ ಮೊಲೆ ಉಣಿಸಲು ಹೋದರೆ ಅದನ್ನೂ ಕುಡಿಯುತ್ತಿರಲಿಲ್ಲ. ಮೊಲೆ ಹಾಲು ಕುಡಿಯದ ಮಕ್ಕಳು ಸ್ವಲ್ಪ ಹಾಗೇನೇ...." ಅತ್ತೆಗೆ ಸದಾ ಆತಂಕ.

"ನನ್ನ ಉಸಿರು ಹೋದನಂತರ ಅವನಿಗೆಲ್ಲ ನೀನೇನೆ...."

"ನೀವೇನೂ ಚಿಂತೆ ಮಾಡ್ಬೇಡಿ ಅತ್ತೆ ಅವರು ನನ್ನ ಗಂಡ ಅಲ್ವಾ...." ಅವಳು ಸದಾ ನಗುತ್ತಲೇ ಸಮಾಧಾನಪಡಿಸುತ್ತಿದ್ದಳು.

ಹೆಣದ ಶೃಂಗಾರ ಮುಗಿದಿತ್ತು, ಹೊರುವವರು ನಾಲ್ಕು ಜನ.

ಹೆಣ ಮುಂದೆ, ಜನ ಅದರ ಹಿಂದೆ ಹಿಂದೆ.

ಹೆಣ ಸುಟ್ಟರೆ ಒಳ್ಳೆಯದು. ಸತ್ತವರನ್ನು ಆದಷ್ಟು ಬೇಗ ಮರೆಯಬೇಕು.

ಕಾಲಾಯ ತಸ್ಮೈ ನಮಃ

ಆದದ್ದು ಆಗಿ ಹೋಯ್ತು.

ಒಂದು ದೇಹದಿಂದ ಇನ್ನೊಂದು ದೇಹಕ್ಕೆ ಉಸಿರು ತುಂಬಲು ಸಾಧ್ಯವಾಗಿದ್ದಿದ್ದರೆ, ಊಟ ಕಳುಹಿಸಲು ಸಾಧ್ಯವಾಗಿದ್ದಿದ್ದರೆ....

ಅಸಾಧ್ಯದ ಕಡೆಗೆ ಮನುಷ್ಯ ಸದಾ ತುಡಿಯುತ್ತಿರುತ್ತಾನೆ.

ಒಬ್ಬೊಬ್ಬ ವ್ಯಕ್ತಿಯೂ ಒಂದೊಂದು **entity.**

ನಡುಮನೆಯಲ್ಲಿ ಹಚ್ಚಿಟ್ಟಿದ್ದ ದೀಪವನ್ನು ಹೆಣ ಸಂಸ್ಕಾರಕ್ಕೆ ಬಂದವರೆಲ್ಲ ನೋಡಿ, ಕೈ ಮುಗಿಯುತ್ತಿದ್ದಾರೆ.

ಪಕ್ಕದ ತೋಟದ ಆನಂದ ಹೆಗಡೆಯವರ ಮನೆಯಿಂದ ಎಲ್ಲರಿಗೂ ಅನ್ನ ತಿಳಿಸಾರು ಬಂದಿದೆ.

ಅವಳು ಕೂಡ ಊಟ ಮಾಡಿದ್ದಳು.

ಹಸಿವಿಗೆ ಯಾವ ಮುಲಾಜೂ ಇಲ್ಲ.

ಅನ್ನದಾತೋ ಸುಖೀ ಭವ.

ಹಸಿವು ಮತ್ತು ಕಾಮ ಎರಡೂ ಕೂಡ ಪರಿಮಿತಿಗಳಾಚೆಗಿನ ಸತ್ಯಗಳು. ವಾಲಗದವರು ಊಟ ಮಾಡಿ ಮತ್ತೆ ಹಾಜರಾಗಿದ್ದಾರೆ.

ಹಾಲು ತುಪ್ಪ ಎರೆಯುವ ಕಾರ್ಯಕ್ರಮವನ್ನೂ ಇವತ್ತೆ ಮುಗಿಸಿಬಿಡಬೇಕೆಂದು ಹಿರಿಯರೆಲ್ಲ ತೀರ್ಮಾನಿಸಿದ್ದ

ಹೆಣ ಸಂಸ್ಕಾರದ ದಿವಾದರೂ ಹಾಲು-ತು ಎರೆಯಬಹುದು....

ಮೂರು ದಿನಕ್ಕಾದರೂ ಎರೆಯಬಹುದು.

ವಾಲಗದವರು ಮತ್ತೆ ಶೋಕಗೀತೆಯ ಭಾರಿಸುತ್ತಿದ್ದಾರೆ.

My heart is broken....

ಮನೆಯಲ್ಲಿ ಮೂರು ಹಸುಗಳು

ಗಂಗೆ, ಭದ್ರೆ, ಯಮುನೆ. ಅವನೇ ಹೆಸರಿಟ್ಟಿದ್ದ

ಹಸುಗಳ ಮೈ ತೊಳೆಯುವುದು,

ಅವುಗಳಿಗೆ ಮೇವು ಹಾಕುವುದು,

ಹಾಲು ಕರೆಯುವುದು....

ಅವನಿಗೆ ಇನ್ನಿಲ್ಲದ ಸಂಭ್ರಮದ ಕೆಲಸಗಳು.

ಹಸುಗಳು 'ಅಂಬಾ' 'ಅಂಬಾ' ಎಂದು ಅರಚು

ಮೂಕಪ್ರಾಣಿಗಳು ಮನುಷ್ಯರಿಗಿಂತಲೂ ಚೆ ಅರ್ಥಮಾಡಿಕೊಳ್ಳುತ್ತವೆ. ಹಾಲು, ತುಪ್ಪವನ್ನು ಅ ಯಾವೊತ್ತೂ ಬಾಯಿಗಿಟ್ಟವನಲ್ಲ.

ಮದುವೆಯಾದ ಹೊಸತರಲ್ಲಿ ರುಕ್ಮಿಣಿಯ ಹೇಳುತ್ತಿದ್ದರು: "ಈಗ್ಲಾದ್ರೂ ಹಾಲು-ತುಪ್ಪ ಬಳಸೋ ಕಲಿ ಮಹಾಬಲ, ಮೈ ಚನ್ನಾಗಿ ಕಟ್ಟುತ್ತೆ...."

"ಇದೆಂಥ ವಿಚಿತ್ರ ಕಣೆ, ಹಾಲು-ತುಪ್ಪ ತಿ ಮನುಷ್ಯರನ್ನ ಇದೇ ಮೊದ್ಲು ನಾನು ನೋಡ್ತಿರೋದು

ಅವಳೂ ತಮಾಷೆ ಮಾಡಿದ್ದಳು.

ಹಾಲನ್ನು ಕಲಿಯುಗದ ಅಮೃತ ಅಂತ ಕರಿತಾ

ಕರೆಯುವುದೇನು ಹಾಲು ಅಮೃತವೇ.

ಅದರಲ್ಲಿ ಪ್ರೋಟೀನ್ಸ್, ಫ್ಯಾಟ್, ವಿಟವಿ ದಂಡಿಯಾಗಿವೆ.

ಮೊಲೆಯ ಹಾಲನ್ನೆ ಧಿಕ್ಕರಿಸಿದವನವನು.

"ಹಾಲು ಕುಡಿಯದಿರು ಕಂದಾ...."

ವಾಲಗದವರ ವಾದ್ಯಗಳಿಂದ ಶೋಕಗೀತೆಗಳ ಸಾ

"ಎಂಥ ಬಿಸಿಲು ಮಾರಾಯ, ಮುಂಗಾರು ಶುರು ಹದಿನೈದು ದಿನಗಳಾಯ್ತು ನೋಡು. ಆಕಾಶದಲ್ಲಿ ಇವ್ಶ ಮೇಘಗಳು ಕಾಣಿಸಿಕೊಂಡಿವೆ...."

"ಸತ್ತ ದಿನ ಮಳೆ ಬಂದರೆ, ಸತ್ತವರು ಸೀದಾ ಸ್ವ ಹೋಗ್ತಾರಂತೆ...."

"ಅಡಿಕೆತೋಟಗಳಿಗೆ ಈಗ ಮಳೆ ಜರೂರು ಬೇಕ

ಹೆಣ ಸಂಸ್ಕಾರದಲ್ಲಿ ಪಾಲ್ಗೊಂಡಿದ್ದವರೆಲ್ಲ ಮತ್ತೆ ಬ ನೆರೆದಿದ್ದರು. ಹೆಣ ಸುಟ್ಟ ಜಾಗದಲ್ಲೆ ಎಡೆ ಇಟ್ಟಿದ್ದಾ

ಹಾಲು, ಮೊಸರು, ಪುರಿ, ಬತ್ತಾಸು, ಮಿಠಾ ಅಡಿಕೆ....

ಅವನಿಗೆ ಇಷ್ಟವಿದ್ದದ್ದು ಅಡಿಕೆ ಮಾತ್ರ.

ದಿನದ ಇಪ್ಪತ್ನಾಲ್ಕು ಗಂಟೆ ಕಾಲ ಅಡಿಕೆ ಅಗಿಯು

ಎಡೆಯಲ್ಲಿನ ತಿಂಡಿಗಾಗಿ ಕಾಗೆಗಳು ಕಾಯುತ್ತಿ

ಕಾಂವ್, ಕಾಂವ್, ಕಾಂವ್, ಕಾಂವ್......

ಅವನಿದ್ದ ಕಡೆ ಕಾಗೆಗಳು ಸದಾ ಮುತ್ತಿಕೊಳ್ಳುತ್ತಿ

ದಿನಕ್ಕೆ ಮೂರ್ನಾಲ್ಕು ಬಾರಿಯಾದರೂ ಮನೆಯ ಮ ಕಾಗೆಗಳಿಗಾಗಿ ಅನ್ನದ ಅಗಳನ್ನು ಚೆಲ್ಲುತ್ತಿದ್ದ.

ಕಾಗೆಗಳಿಗೆ ಕಣ್ಣುಗಳು ಎರಡಿದ್ದರೂ ದೃಷ್ಟಿಯ ಒಂದೇ ಅಂತೆ.

ಆ ಗುಡ್ಡೆ ಎರಡು ಕಣ್ಣುಗಳಲ್ಲೂ ಅಗತ್ಯಕ್ಕೆ ತ ಹೊರಳಾಡುತ್ತಿರುತ್ತದಂತೆ.

ಜನರು ಅಲ್ಲಿಂದ ಕದಲುತ್ತಿದ್ದಂತೆ ಕಾಗೆಗಳು ಸೈನ್ಯ ಎಡೆಯನ್ನು ಮುತ್ತಿದ್ದವು.

ಪಾಪ ಮಾಡಿದವರ ಎಡೆಯನ್ನು ಕಾಗೆ ಮುಟ್ಟುವುದಿಲ್ಲವಂತೆ. ಕೆಲವೊಮ್ಮೆ ಕಾಗೆಗಳು ಮು ಅಂತ ದಿನಪೂರ್ತಿ ಕಾಯಬೇಕಂತೆ. ಆ ಪರಿ ಕಾಗೆಗ ನೋಡಿದ ಎಲ್ಲರ ಬಾಯಲ್ಲೂ ಒಂದೇ ಮಾತು:

"ಮಹಾಬಲ ಪುಣ್ಯವಂತ...."

"ಮಹಾಬಲ ಸ್ವರ್ಗ ತಲುಪುವುದು ಗ್ಯಾರಂಟಿ.

ಮತ್ತೆ ನಡುಮನೆಯಲ್ಲಿ ಒಂಟಿ ದೀಪ.

ಎಲ್ಲರೂ ದೀಪವನ್ನು ಕಣ್ತುಂಬಿಸಿಕೊಂಡು ಮುಗಿದಿದ್ದರು. ಸಾವಿಗೆ ಬಂದವರು,

ಹಾಲು ತಪ್ಪಕ್ಕೆ ಬಂದವರು,

ಸಾವಿನ ಮನೆಯವರಿಗೆ ಹೇಳಿಹೋಗಬಾರದಂ

ಬಂದವರು ಸುತ್ತಮುತ್ತಲಿನವರು. ಬಂದ ನೆಂಟರಿಷ್ಟರು. ಬಂದವರು ಸ್ನೇಹಿತರು.

ಹೋಗುವಾಗ ಅವಳಿಗೆ ಯಾರೂ ಒಂದು ಮ ಹೇಳಲಿಲ್ಲ.

"ಚಾರು, ತಿಥಿಯನ್ನು ಹನ್ನೊಂದು ದಿನಕ್ಕೆ ಇಟ್ಟುಕೊ ಎಲ್ಲರೂ ತೀರ್ಮಾನಿಸಿದ್ದಾರೆ. ನಾಲ್ಕು ದಿನ ಬಿಟ್ಟುಕೊ ಬರುತ್ತೇನೆ. ಮತ್ತೆಲ್ಲವನ್ನು ನೋಡೋಣ. ಮುಖ ನೀನು ಧೈರ್ಯವಿಂದಿರಬೇಕು...."

ಕತೆ

ಅಣ್ಣ ತಲೆ ನೇವರಿಸಿ ಜೀಪು ಹತ್ತಿದ್ದ.
ಜಗತ್ತಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಹುಟ್ಟಿದಾಗಲೂ ...ಮೇ ಸಾಯುವಾಗಲೂ ಒಂಟಿಯೇ.
...ಸುಗಳು 'ಅಂಬಾ' 'ಅಂಬಾ' ಎಂದು ಕೂಗುತ್ತಿವೆ.
...ಧ್ಯೂಮ ಹಾಲು ಕರೆಯಲು ಹೋಗಿ ಒದೆಸಿಕೊಂಡಿದ್ದ
...ಆರೆ, ಗಂಗೆ, ಭದ್ರೆ, ಯಮುನೆಯರೂ ಒದೆಯುತ್ತಾರಲ್ಲ!
"ಮಹಾಬಲಪ್ಪನೋರು ನೆನಪಾಗಿರಬೇಕು. ನಿತ್ಯವೂ ತಾನೆ ಹಾಲು ಕರೆದುಕೊಳ್ಳುತ್ತಿದ್ದದ್ದು. ಕೆಚ್ಚಲು ...ಮುಕೊಂಡ್ರೆ ಬೆಳಿಗ್ಗೆ ಅವೇ ಸುಮ್ನೆ ಕರೆಸಿಕೊಳ್ತಾವೆ...."
...ಮ ಕೊಟ್ಟಿಗೆಗೆ ಕಟ್ಟಿ ಮೇವು ಹಾಕಿ ಬಂದಿದ್ದ ಆಗಸದಲ್ಲಿ ಮೋಡಗಳು ಮೇಳೈಸಿದ್ದವು.
"ಇವೊತ್ತು ಮುಂಗಾರು ಪೌರುಷ ತೋರಿಸಬಹುದು. ...ಕ ಮೋಡಗಳು ಆಕಾಶದಲ್ಲಿ ಗರ್ಭ ಕಟ್ಟಿವೆ. ಹೋಗ್ಲೇಳಿ, ... ದಣೀರು ಸ್ವರ್ಗಕ್ಕೆ ಹೋಗ್ತಾರೆ. ಯಾರು ತಾನೆ ಶಾಶ್ವತ ತಾಯಿ ನೆಮ್ಮದಿಯಾಗಿರಿ....."
...ಧ್ಯೂಮ ಪಕ್ಕದಲ್ಲಿಯೇ ಇದ್ದ ತನ್ನ ಮನೆಗೆ ಹೋಗಿದ್ದ.
...ಸೂರ್ಯ ಪಶ್ಚಿಮದಲ್ಲಿ ಮುಳುಗಿದ್ದ.
...ಕೋಟಿ ಕುದುರೆಗಳನ್ನು ಕಟ್ಟಿ ಎಳೆಸಿದರೂ ಅವನು ...ರ್ವಕ್ಕೋ, ಉತ್ತರಕ್ಕೋ, ದಕ್ಷಿಣಕ್ಕೋ ಬಂದು ...ಗಲಾರ.
...ಅಡಿಕೆ ತೋಟದ್ದು ಸಮಸ್ಯೆಯಿಲ್ಲ.
...ವರ್ಷಕ್ಕೆರಡು ಬಾರಿ ಶಿವಮೊಗ್ಗದ ಕಡೆಯವರು ಚೇಣಿಗೆ ...ಮ್ಮುಕೊಂಡು ಹೋಗುತ್ತಿದ್ದರು.
...ಮೊದಲು ದುಡ್ಡು ಎಣಿಸಿ ಆಮೇಲೆ ಲಾರಿಗೆ ...ಫಸನ್ನು ತುಂಬುತ್ತಿದ್ದರು.
...ಆ ಸುತ್ತಮುತ್ತಲಿನ ತೋಟಗಳವರ ಫಸಲು ಒಂದು ...ನಾದರೆ, ಮಹಾಬಲ ಹೆಗಡೆಯವರ ತೋಟದ ಫಸಲು ...ಎರಡು ಭಾಗ. ಭೂಮಿ ಒಲಿಯಬೇಕಾದರೆ ಪುಣ್ಯ ...ಇರಬೇಕು.
...ಕತ್ತಲು ಆವರಿಸಿಕೊಳ್ಳತೊಡಗಿತ್ತು.
...ಅವಳಿಗೇನೂ ಭಯವಿಲ್ಲ, ಆರು ವರ್ಷಗಳಿಂದಲೂ ...ಯಾಗಿ ಹೋಗಿದೆ.
...ಅವಳಿಗೆ ರಾತ್ರಿಗಿಂತ ಹಗಲೇ ಬೇಗ ...ಹೋಗುತ್ತಿತ್ತು.

***

ರಾತ್ರಿ

...ಜೀಪು ನಿಂತ ಸದ್ದು ಕೇಳಿ ಅವಳು ಬಾಗಿಲಿಗೆ ...ದ್ದಳು. ಬಂದವರನ್ನು ಇಳಿಸಿ ಜೀಪು ...ಹೊರಟುಹೋಗಿತ್ತು.
...ಅರೆ! ಭಾಸ್ಕರ!!
...ಒಳಗೆ ಬರಬಹುದೆ....?" ಕೇಳಿದ ನಗುತ್ತಾ.
...ಎಲ್ಲಾ ಮುಗಿದ ಮೇಲೆ ಬಂದ್ಯಲ್ಲೊ...."
...ಅವರಿಬ್ಬರೂ ಕ್ಲಾಸ್‌ಮೇಟ್‌ಗಳು. ಅವನು ಮುಂದೆ ...ಮಿಸ್ಟ್ರಿ ಬಯೋಕೆಮಿಸ್ಟ್ರಿ ಓದಿ ಮುಂಬಯಿಯ ದೊಡ್ಡ ...ಯೊಂದರಲ್ಲಿ ಉನ್ನತ ಹುದ್ದೆಯಲ್ಲಿದ್ದ.
...ಶಿರಸಿಯಿಂದ ಡಾಕ್ಟರ್ ಸುಧೀಂದ್ರ ನಿನ್ನೆ ಸಂಜೆ ಐದು ...ಗೆ ಫೋನು ಮಾಡ್ದ. ಫ್ಲೈಟ್ ಹಿಡಿದು ಮಂಗಳೂರಿಗೆ ..., ಅಲ್ಲಿಂದ ಜೀಪಿನಲ್ಲಿ ಬರೋದಕ್ಕೆ ಇಷ್ಟೊತ್ತಾಯ್ತು. ...ತಿಂಗಳಿಂದ ಮಹಾಬಲ ಕೂಡ ಆರೇಳು ಸಾರಿ ...ಸು ಮಾಡಿ ಊರಿಗೆ ಬರಲು ಹೇಳಿದ್ದ. ಯಾಕೋ ...ವಾಗಲಿಲ್ಲ. ಕೊನೆಯ ದರ್ಶನವನ್ನಾದರೂ ಮಾಡೋಣ ... ಬಂದೆ. ಎಲ್ಲಕ್ಕೂ ಬರೆದಿರಬೇಕು...."
...ಮದ್ವೇಲೇ ಬಂದು ಹಾರಿಸಿಕೊಂಡು ಹೋಗ್ತೀನಿ ... ಕೊಚ್ಚಿಕೊಳ್ಳುತ್ತಿದ್ದವನು ಕನಿಷ್ಠ ಮದುವೆಗಾದ್ರೂ ... ಹೋದೆಯಲ್ಲೋ ಪುಕ್ಕಲ...."
...ಕುಡಿಯಲು ನೀರು ಕೊಡುತ್ತಾ ಹೇಳಿದ್ದಳು.
...ಅವಳು ಆರು ವರ್ಷಗಳ ಹಿಂದೆ ಹೇಗಿದ್ದಳೋ ...ಊ ಹಾಗೆಯೇ ಇದ್ದಾಳೆ. ಅವನು ಮಾತ್ರ ಆಳು ...ತಗೆದಿದ್ದಾನೆ.
...ಕ್ಷಮಾಪೆ ಮಾಡ್ಬೇಡ್ವೆ.... ಎಲ್ಲಾ ಗೊತ್ತಿದ್ದು...."
...ಅವಳೆಂದೋ ಅವನನ್ನು ಮರೆತುಬಿಟ್ಟಿದ್ದಳು.
...ಭೂಮಿಗೆ ಗುರುತ್ವಾಕರ್ಷಣಾ ಶಕ್ತಿಯಿದೆ.
..."Law of gravitation never ...nges"
...ಗುರುತ್ವಾಕರ್ಷಣೆ ಕಳೆದುಕೊಂಡ ದಿನ ಭೂಮಿಯೇ ...ವಿಲ್ಲ, ಹೆಣ್ಣು ಭೂಮಿಯಂತೆ.
...ಭೂಮಿಯಂತೆ ಅನ್ನುವುದೇನು ಸಾಕ್ಷಾತ್ ಭೂಮಿಯೇ.
...ತುಂಬಾ ತ್ರಾಸದ ಪ್ರಯಾಣ, ಬಿಸಿ ನೀರಿದ್ರೆ ಸ್ನಾನ ...ಕು...."
... ನೀರು ದಂಡಿಯಾಗಿದೆ ಮಾಡ್ಕೊಂಡ್ ಬಾ. ...ನು ಮಾಡಿ ಹಪ್ಪಳ ಕರಿತೀನಿ...."
... ಅಡಿಗೆ ಮಾಡೋ ತ್ರಾಸ ತಗೋಬೇಡ. ...ಡ ಹೆಗಡೇರ ಮನೆಗೆ ಹೋಗ್ತೀನಿ. ಅಲ್ಲೆ ಮಲಗಿದ್ದು ಬೆಳಿಗ್ಗೆ ಶಿರಸಿಗೆ ಹೋಗ್ತೀನಿ...."

"ನನಗೆ ಊಟ ಬೇಡ್ವೇನೋ.... ಬೆಳಿಗ್ಗೆಯಿಂದ್ಲೂ ಬಂದವರಿಗೆಲ್ಲ ಅವರ ಮನೆಯದ್ದೆ ಉಪಚಾರ. ಶರಬತ್ತು, ಊಟ, ಕಾಫಿ ಎಲ್ಲಾ ಅಲ್ಲಿಂದಲೇ. ನಿಂಗೂ ಒಂದಿಷ್ಟು ಮಾಡ್ತೀನಿ. ಇಲ್ಲೆ ಊಟ ಮಾಡು. ಅವರ ಮನೆ ಇಲ್ಲಿಗೆ ಮೂರ್ನಾಲ್ಕು ಫರ್ಲಾಂಗ್ ದಾರಿ" ಸಹಜವಾಗಿಯೇ ಹೇಳಿದ್ದಳು.

ಉಸಿರಿರುವ ಯಾವ ಪ್ರಾಣಿಗಳಿಗಾದರೂ ಆಹಾರ ತುಂಬಾ ಮುಖ್ಯ. ಪ್ರಾಣಿಗಳು ಪ್ರಾಣಿಗಳನ್ನು ಕೊಲ್ಲುತ್ತವೆ ಹೊಟ್ಟೆ ತುಂಬಿಸಿಕೊಳ್ಳಲು. ಮನುಷ್ಯನೂ ಕೂಡ ಪ್ರಾಣಿಗಳನ್ನು ಕೊಲ್ಲುತ್ತಾನೆ.

ಆದರಲ್ಲೂ ಮನುಷ್ಯ ಇದ್ದಾನಲ್ಲಾ....

ಒಂದೊತ್ತು ಊಟವಿಲ್ಲದಿದ್ದರೂ ತತ್ತರಿಸಿ ಹೋಗಿಬಿಡುತ್ತಾನೆ.

ಹಸಿವು ಮತ್ತು ಕಾಮ ಅತಿ ದೊಡ್ಡ **Natural Instinct** ಗಳು.

ಕಾಮವನ್ನು ತೀರಿಸಿಕೊಳ್ಳದೆ ಬದುಕಬಹುದು, ಆದರೆ ಹಸಿವನ್ನಲ್ಲ. ಆದರೆ ಕಾಮ ಹಸಿವಿಗಿಂತಲೂ **dangerous instinct.**



ಹಸಿವು ಮತ್ತು ಕಾಮ....

ಎರಡೂ ಲಭ್ಯವಾದಾಗ.... ಲಭ್ಯವಾಗದಿದ್ದಾಗ.....

ಮೃಗಗಳಿಗಿಂತಲೂ ಕ್ರೂರನಾಗುವುದು ಮನುಷ್ಯನೇ.

ಮೃಗಗಳಿಗಿಂತಲೂ ಪ್ರೇಮ ತುಂಬಿರುವುದು ಮನುಷ್ಯನಲ್ಲೆ.

ಮನುಷ್ಯನನ್ನು ಮೃಗ ಎಂದು ಕರೆಯುವುದರಲ್ಲಿ ಅರ್ಥವಿಲ್ಲ.

ಅಪ್ಪ ಸಾಯಲಿ
ಅಮ್ಮ ಸಾಯಲಿ
ಗಂಡ ಸಾಯಲಿ
ಹೆಂಡತಿ ಸಾಯಲಿ
ಮಕ್ಕಳು ಸಾಯಲಿ

ಬದುಕಿದವರಂತೂ ಊಟ ಮಾಡಲೇಬೇಕು.

ದೊರೆ ನೆಪೋಲಿಯನ್ ಕೊನೆಗಾಲದಲ್ಲಿ ಹಸಿವು ತಣಿಸಿಕೊಳ್ಳಲು ಹೆಣವನ್ನೆ ಕಿತ್ತು ತಿಂದಿದ್ದನಂತೆ. ಯೂಟ್ಯೂಬ್‌ನಲ್ಲಿ ಹೆಣ ತಿನ್ನುವವರ ಎಷ್ಟೊಂದು ವಿವರಗಳು.

"ಚಾರು, ಬೆನ್ನು ಸ್ವಲ್ಪ ಉಜ್ತೀಯ....?"

ಬಚ್ಚಲುಮನೆಯಿಂದ ಕೂಗಿದ್ದ ಭಾಸ್ಕರ.

"ಆಯ್ತು, ಬರ್ತೀನಿರು...."

ಮನುಷ್ಯ ತನ್ನ ಬೆನ್ನನ್ನು ತಾನು ನೋಡಿಕೊಳ್ಳಲಾರ.

ಅದಕ್ಕೆ ಕನ್ನಡಿ ಬೇಕು.... ಒಂದಲ್ಲ ಎರಡು ಕನ್ನಡಿಗಳು.

"ಹಾಳಾದ ಮುಂಬಯಿಯಲ್ಲಿ ಪ್ರತಿಯೊಂದು ಆತುರ ಆತುರ. ಮುಂಬಯಿ ಜನಕ್ಕೆ ಸ್ನಾನ, ನಿದ್ದೆ, ಊಟ, ಮೈಥುನ, ಜರ್ನಿ ಯಾವುದರಲ್ಲೂ ನಿಧಾನವಿಲ್ಲ. ಒಂದು ತಿಂಗಳು ರಜ ಪಡೆದು ಬಂದಿದ್ದೀನಿ. ಆರು ವರ್ಷಗಳಲ್ಲಿ ಒಂದು ದಿನವೂ ರಜ ಪಡೆದುಕೊಂಡಿಲ್ಲ, ಮತ್ತೆ ಈ ಕಡೆ ಬರಬಾರ್ದು ಅಂತಾನೇ ಮಾಡಿದ್ದೆ, ಆದರೆ....."

ಅವಳು ಅವನ ಬೆನ್ನು ಉಜ್ಜಿದ್ದಳು.

"ದೇಹದಲ್ಲಿ toxins ಇರಬಾರದು...."

"toxins ತುಂಬಿಕೊಂಡ ಯಾವ ದೇಹವೂ ಪ್ರಶಾಂತವಾಗಿರಲಾರದು...."

"ಟನ್‌ಗಟ್ಟಲೇ toxins ತುಂಬಿಕೊಂಡು ಮನಸ್ಸು ಅತ್ಯಂತ ಪ್ರಶಾಂತವಾಗಿ ಇರಬಲ್ಲದು...."

ಮನುಷ್ಯನ ಮನಸ್ಸಿಗಿಂತ ದೇಹವೇ ಪರಿಶುದ್ಧ.

"ಕೊಳೆ ಹೋದನಂತರ ದೇಹ ಈಗ ಹಗುರವಾಯ್ತು ನೋಡು...."

ಅವನು ಹಗುರವಾಗಿದ್ದ.

ತೃಪ್ತಿಯಾಗುವವರೆಗೂ ಬಿಸಿ ನೀರು ಸುರುವಿಕೊಂಡಿದ್ದ. ಇನ್ನೂ ಬೇಕಾದಷ್ಟು ಬಿಸಿ ನೀರು ಇತ್ತು.

ಅವಳಿಗೂ ಸ್ನಾನ ಮಾಡಬೇಕೆನಿಸಿತ್ತು.

ಇಬ್ಬರೂ ಊಟ ಮಾಡಿದ್ದರು.

ಹೊರಗೆ ಮಳೆ ಶುರುವಾಗಿತ್ತು.

ದಪ್ಪನೆಯ ಹನಿಗಳು. ಮುಂಗಾರಿನ ಮೊದಲ ಹನಿಗಳು ತುಂಬ ಬಿರುಸು. ಮಿಂಚು, ಗುಡುಗು, ಗುಡುಗು, ಮಿಂಚು.

Light is faster than sound.

ಹತ್ತಿರದಲ್ಲೆಲ್ಲೊ ಸಿಡಿಲು ಹೊಡೆದಿತ್ತು.

ಸರ್ಪ ಇರುವ ಕಡೆ ಸಿಡಿಲು ಜಾಸ್ತಿಯಂತೆ.

ಸಿಡಿಲಿನ ... ಹೋಗಿತ್ತು.

ಮಲೆನಾಡಿನಲ್ಲಿ ಕರೆಂಟು ಹೋದರೆ ಮುಗೀತು.

ಅವಳು ದೀಪವನ್ನು ಹಚ್ಚಿದಳು.

"ಹೆಣ್ಣನ್ನು ದೀಪಕ್ಕೂ ಹೋಲಿಸುತ್ತಾರೆ...."

ಅತ್ತೆ ಕರೆಂಟು ಹೋದಾಗಲೆಲ್ಲ ಹೇಳುತ್ತಿದ್ದದ್ದು ನೆನಪಾಯಿತು.

ದೀಪ ಬೆಳಕಿನ ಸಂಕೇತ, ತ್ಯಾಗದ ಸಂಕೇತ, ಸಂಭ್ರಮದ ಸಂಕೇತ. ದೀಪದ ಕೆಳಗೆ ಸದಾ ಕತ್ತಲು.

ಅದು ದೀಪದ ಕರ್ಮ.

ಪಂಚಭೂತಗಳು ಮನುಷ್ಯನಿಗೆ ಆಧಾರ.

ಮನುಷ್ಯನಿಂದ ಪಂಚಭೂತಗಳು ಏನನ್ನೂ ಆಪೇಕ್ಷಿಸುವುದಿಲ್ಲ.

ಭೂಮಿ, ಆಕಾಶ, ನೀರು, ಗಾಳಿ, ಬೆಂಕಿ.

ಯಾರು ಮಾಡಿದರೋ ಇಂಥದ್ದೊಂದು ಅದ್ಭುತ ವ್ಯವಸ್ಥೆಯನ್ನು. ಮಳೆ, ಮಿಂಚು, ಗುಡುಗು ಮತ್ತಷ್ಟು ಬಿರುಸಾಗಿದ್ದವು.

ಅವಳಿಗೆ ಭಯವಾಗಲಿಲ್ಲ.

ಅವನಿದ್ದ: **"Escape into me...."**

ಅವನಿಗೂ ಭಯವಾಗಲಿಲ್ಲ, ಅವಳಿದ್ದಳು: **"Escape into me...."**

ಅವನು ಪುರುಷ, ಅವಳು ಪ್ರಕೃತಿ.

ಅವರು ಒಬ್ಬರಿಗೊಬ್ಬರು ಮಾತನಾಡಲಿಲ್ಲ.

ಅವಳು ಭೂಮಿ, ಅವನು ಮಳೆ.

ಅವಳು ಬೆಳಕು, ಅವನು ಶಬ್ಧ.

ದೇಹದ ಮೂಲಕವೇ ಸದಾ ಮನಸ್ಸು, ಆತ್ಮಗಳು ತೃಪ್ತಿಪಡುವುದು.

ಮನಸ್ಸು, ಆತ್ಮಗಳ ಮೂಲಕ ದೇಹಕ್ಕೆಂದೂ ತೃಪ್ತಿ ಸಿಗಲಾರದು.

ದೇಹ ಸ್ಥಾವರ: ಬೆಳಕು ಕತ್ತಲನ್ನು ಸೀಳುತ್ತದೆ.

ಮನಸ್ಸು ಜಂಗಮ: ಕತ್ತಲು ಬೆಳಕನ್ನು ಸೀಳಲು ಸಾಧ್ಯವಿಲ್ಲ.

ಸ್ಥಾವರಕ್ಕೆ ಅಳಿವುಂಟು, ಜಂಗಮಕ್ಕೆ ಅಳಿವಿಲ್ಲ.
ಸ್ಥಾವರಕ್ಕೆ ಸುಖವುಂಟು, ಜಂಗಮಕ್ಕೆ ಸುಖವಿಲ್ಲ.
ಆಸೆಯೇ ದುಃಖಕ್ಕೆ ಕಾರಣ!

ನಿರ್ವಾಣ ಪಡೆಯಲು ಆಸೆಗಳನ್ನು ಬಿಡಬೇಕು.

ನಿರ್ವಾಣ ಪಡೆಯುವುದು ಕೂಡ ದೊಡ್ಡ ಆಸೆಯೇ.

ಸತ್ಯ-ಮಿಥ್ಯ, ನೈತಿಕ-ಅನೈತಿಕತೆಗಳಿಗೆ ಹೊಸ ವ್ಯಾಖ್ಯೆ ಕಂಡುಹಿಡಿಯಬೇಕು.

ಅವಳು ಹಚ್ಚಿದ ದೀಪ ಆರಿಹೋಗಿತ್ತು.

ಮತ್ತೆ ಹಚ್ಚಲಿಲ್ಲ ಅವಳು. ಹಚ್ಚಲು ಮನಸ್ಸೂ ಇರಲಿಲ್ಲ.

ಕತ್ತಲೆಯಲ್ಲಿ ಏನೂ ಕಾಣುವುದಿಲ್ಲ, ಕಾಣುವುದು ಬೇಕಾಗಿರಲಿಲ್ಲ.

ಕತ್ತಲು ದೃಷ್ಟಿಗೊಂದು ದೊಡ್ಡ ಸವಾಲು. ದೃಷ್ಟಿ ಸುಖಕ್ಕಿಂತ ಸ್ಪರ್ಶ ಸುಖವೇ ದೊಡ್ಡದು.

ಕತ್ತಲು ದೇವರಿಗೂ ಹೆದರುವುದಿಲ್ಲ, ದೆವ್ವಗಳಿಗೂ ಹೆದರುವುದಿಲ್ಲ.

ಯಾವುದೋ ಹೊತ್ತಿನಲ್ಲಿ ಮಳೆ ನಿಂತಿತ್ತು. ಸುಖಕ್ಕೂ ಬಿಡುವು ಬೇಕು.

ಅವನು ಆರುಗಂಟೆಗೆ ಹೊರಟುನಿಂತ.

ಅವಳು ಅವನಿಗಾಗಿ ಕಾಫಿ ಕಾಯಿಸುತ್ತಿದ್ದಳು.

"ಶಿರಸಿಗೆ ಹೋಗಿ ಒಂದೆರಡು ದಿನ ಇದ್ದು, ನಿಮ್ಮ ಊರಿಗೂ ಹೋಗಿ ನಿಮ್ಮ ಅಣ್ಣನ್ನ ಮಾತನಾಡಿಸ್ಕೊಂಡು ಬರ್ತೀನಿ...."

ಮೆಲ್ಲಗೆ ಆಕಳಿಸುತ್ತಾ ಹೇಳಿದ.

"ಮೆನ್ಸಸ್ ಆಗೋದಕ್ಕೆ ಇನ್ನೂ ಐದಾರು ದಿನ ಟೈಮಿತ್ತು, ಜಸ್ಟ್ ಮೆನ್ಸಸ್ ಆದೆ. ನಿನ್ನೆ ಘಟನೆ, ರಾತ್ರಿ ಘಟನೆ ಕಾರಣವಿರಬಹುದು. ಮನುಷ್ಯ ಪ್ರಕೃತಿ ಎರಡೂ ಒರಟು ಅನ್ಸುತ್ತೆ ಕತ್ತಲಲ್ಲಿ...."

ಅವನು ಕಾಫಿ ಕುಡಿದಿದ್ದ, ದೂರದ ಮೇಲ್ಸೇತುವೆಯ ಮೇಲೆ ವಾಹನಗಳು ಓಡಾಡುವ ಸದ್ದು ಸಣ್ಣದಾಗಿ ಕೇಳಿಸುತ್ತಿತ್ತು.

ರಾತ್ರಿ ಗುಡುಗು, ಮಿಂಚು, ಸಿಡಿಲುಗಳಿಂದ ಆರ್ಭಟಿಸುತ್ತಿದ್ದ ಆಕಾಶ ಈಗ ಪ್ರಶಾಂತವಾಗಿತ್ತು, ನಿರ್ಮಲವಾಗಿತ್ತು.

ಅವನು ಹೊರಟ ಸ್ವಲ್ಪ ಹೊತ್ತಿಗೆ ಸೂರ್ಯ ಹುಟ್ಟಿದ್ದ. ಆಳು ಧ್ಯೂಮ ಬಂದಿದ್ದ.

ಹಸುಗಳು ಗಲಾಟೆ ಮಾಡದೆ ಹಾಲು ಕೊಟ್ಟಿದ್ದವು.

"ಭೂಮಿ ತುಂಬಾ ತಂಪಾಯ್ತು ಕಣವ್ವ. ಮಹಾಬಲಪ್ಪ ಇದ್ದಿದ್ರೆ ಎಷ್ಟು ಖುಷಿ ಪಟ್ಟಿರೋರೋ...."

ಕಾಫಿ ಕುಡಿಯುತ್ತಾ ಧ್ಯೂಮ ಒಡೆಯನನ್ನು ನೆನಪಿಸಿಕೊಂಡಿದ್ದ.

"ಇವೊತ್ತು ನಾಳೆ ಮಳೆ ಇಲ್ಲದಿದ್ರೆ ನಾಳಿದ್ದು ಒಂದಿಷ್ಟು ಜನ ಆಳು ಕರೆದುಕೊಂಡು ಬರೋಕೆ ಧರ್ಮಣ್ಣನಿಗೆ ಹೇಳ್ತೀನಿ...."

"ಆಯ್ತು. ನಾನೂ ತೋಟಕ್ಕೆ ಬರ್ತೀನಿ...."

"ತಿಥಿ ಆಗೋತನಕ ಸೂತಕ ಕನವ್ವ. ನೀವು ಹಾಯಾಗಿ ಮನೆಯಲ್ಲಿರಿ. ಸೂತಕ ಕಳೆದ ಮೇಲೆ ತಿರುಗಾಡಿವ್ರಂತೆ. ಅಂದಂಗೆ ನಮ್ಮ ಮಹಾಬಲಪ್ಪನ ಅಸ್ಥಿ ಮಳೆಯಿಂದಾಗಿ ತೋಟದಲ್ಲೆ ಬೆರೆತೋಯ್ತು...."

ಬಯಲುಸೀಮೆ ಕಡೆಯಿಂದ ಮೂವತ್ತು ವರ್ಷಗಳ ಹಿಂದೆ ಬಂದ ಧ್ಯೂಮ ನಂಬಿಕೆಯಿಂದ ದುಡಿಯುತ್ತಿದ್ದ.

ನಂಬಿಕೆಯೇ ದೇವರು.

ಶಿವಮೊಗ್ಗದ ಹತ್ತಿರ ಭದ್ರೆಗೆ ಬಿಡ್ತೀನಿ ಅಂತ ಅಣ್ಣ ಮೂರು ಹಿಡಿ ಅಸ್ಥಿಯನ್ನು ಹೊಯ್ದಿದ್ದ. ಬೆಂಕಿಗೆ ಬಿದ್ದರೆ ಎಲ್ಲವೂ ಬೂದಿ. ಬೆಂಕಿಗೆ ನೀರೆಂದರೆ ಭಯ.

ಅವಳು ಸ್ನಾನಕ್ಕೆ ಇಳಿದಿದ್ದಳು.

ತನ್ನ ದೇಹ ತನಗೆ ಆಪ್ಯಾಯಮಾನವಾಗತೊಡಗಿತ್ತು.

ತುಂಬಾ ಜೋಪಾನವಾಗಿ ದೇಹವನ್ನು ತೊಳೆದುಕೊಂಡಿದ್ದಳು, ಕಣ್ತುಂಬಿಸಿಕೊಂಡಿದ್ದಳು.

ಬಿಸಿ ನೀರಿನ ಹಬೆಯೊಂದಿಗೆ ಅವಳ ದೇಹದ ಪರಿಮಳ ಮಧುರವಾಗಿ ಹರಡಿಕೊಂಡಿತ್ತು. ಹೆಣ್ಣಿನ ಪರಿಮಳಕ್ಕೆ ಸೃಷ್ಟಿಕರ್ತನೂ ಸೋತಿದ್ದಾನೆ. ಇಡೀ ಸೃಷ್ಟಿ ಕ್ರಿಯೆಯನ್ನು ಕಟ್ಟಿಟ್ಟಿರೋದು ಹೆಣ್ಣಿನ ದೇಹದ ವಾಸನೆ.

ಒಂದು ದಿನ ಸಂಜೆ ಅತ್ತೆ ಹೇಳಿದ ಮಾತುಗಳು ನೆನಪಾಗಿ ಖುಷಿಗೊಂಡಳು ಈಗ.

"ಭೂಮಿ ಕೂಡ ಮನಸ್ಸು ಮಾಡಿದರೆ ತನ್ನ ಪಥವನ್ನು ಬದಲಿಸಿಕೊಳ್ಳಬಹುದು...." ಅತ್ತೆ ತನ್ನನ್ನು ಅರ್ಥಮಾಡಿಕೊಂಡಿದ್ದಳು... ಕರುಣೆಯಿತ್ತು.

"Earth also can change its axis..."

ಚಾರುಲತಾ ನಕ್ಕಳು. ನಗು ಮತ್ತು ಅಳು ವಿರುದ್ಧ ಧ್ರುವಗಳು.

ಆ ನಗು ಅವಳ ಇಡೀ ಶರೀರವನ್ನೆಲ್ಲ ಆವರಿಸಿಕೊಂಡಿತ್ತು.

ಅವಳು ಜಳಕ ಮಾಡುತ್ತಲೇ ಇದ್ದಳು.... ತನ್ನನ್ನೇ ತಾನು ಮರೆತು



● ಕೇಶವರೆಡ್ಡಿ ಹಂದ್ರಾಳ

'ಮನುಷ್ಯ ಜಾತಿ ತಾನೊಂದೇ ವಲಂ' ರಂಗ ಪ್ರಯೋಗ



ಕರ್ನಾಟಕದ ನಿಪುಣ ರಂಗಕರ್ಮಿಗಳಲ್ಲಿ ಒಬ್ಬರಾಗಿರುವ ಸಿ. ಬಸವಲಿಂಗಯ್ಯನವರ ನಿರ್ದೇಶನದಲ್ಲಿ ಇತ್ತೀಚೆಗೆ ಮೂಡಿಬಂದ ಪ್ರಯೋಗ-'ಮನುಷ್ಯ ಜಾತಿ ತಾನೊಂದೆ ವಲಂ'. ಇದು ಕುವೆಂಪು ಕಾದಂಬರಿ 'ಮಲೆಗಳಲ್ಲಿ ಮದುಮಗಳು' ಆಧರಿಸಿ ಅವರು ನಿರ್ದೇಶಿಸಿದ ಇನ್ನೊಂದು ಮೆಗಾ ರಂಗಪ್ರಯೋಗವನ್ನು ನೆನಪಿಸುತ್ತದೆ. ಆ ಪ್ರಯೋಗ ಅಹೋರಾತ್ರಿಯದ್ದಾದರೆ, 'ಮನುಷ್ಯ ಜಾತಿ ತಾನೊಂದೆ ವಲಂ' ಎರಡು ತಾಸುಗಳ ಪ್ರದರ್ಶನ. ಕಣ್ಣು ಹೊರಳಿಸಿಯೇ ಕಣ್ತುಂಬಿಕೊಳ್ಳಬೇಕಾದಷ್ಟು ವಿಶಾಲವಾದ ರಂಗ ಮಂಚದ ಮೇಲೆ ಸುಮಾರು 150 ಕಲಾವಿದರನ್ನೂ, ನೇಪಥ್ಯ ರಂಗಕರ್ಮಿಗಳನ್ನೂ ಬಳಸಿಕೊಳ್ಳುವ ಪ್ರಸ್ತುತ ಪ್ರಯೋಗ ಮನುಕುಲದ ಆದಿಯಿಂದ ತೊಡಗಿ ಇಂದಿನವರೆಗೆ ಜಾತಿ ವ್ಯವಸ್ಥೆಯ ವಿರುದ್ಧ ನಡೆದ ಹೋರಾಟವನ್ನು ಚಿತ್ರಿಸುತ್ತದೆ. ಬಸವಲಿಂಗಯ್ಯನವರ ಈ ಪ್ರಯೋಗಕ್ಕೆ ಕಣ್ಮನಗಳನ್ನು ಸೆಳೆಯುವ ದೃಶ್ಯಗುಣ ಮತ್ತು ರೂಪಕ ಶಕ್ತಿಗಳಿವೆ. ಜಾನಪದ ಕಲೆಗಳು, ಕಂಪೆನಿ ನಾಟಕದ ಶೈಲಿ, ಕ್ಯಾಲೆಂಡರ್ kitsch- ಹೀಗೆ ಜನಪ್ರಿಯ ಸಂಸ್ಕೃತಿಯ ಎಲ್ಲ ಪರಿಕರಗಳನ್ನೂ ಬಳಸಿಕೊಂಡು, ನಿರ್ದೇಶಕರು ಸಾಮಾನ್ಯ ಪ್ರೇಕ್ಷಕನ ನೋಟವನ್ನು ಹಿಡಿದಿಡುತ್ತಾರೆ. ಈ ಪ್ರಯೋಗದ ವಸ್ತುವಿನ ಗಾಂಭೀರ್ಯತೆಯನ್ನು ಗಣನೆಗೆ ತೆಗೆದುಕೊಂಡರೆ, ಇದು ದೊಡ್ಡ ಸಾಧನೆ.

'ಮನುಷ್ಯ ಜಾತಿ ತಾನೊಂದೆ ವಲಂ' – ರಾಜ್ಯ ಸರಕಾರದ ವಾರ್ತಾ ಇಲಾಖೆಯ ಪ್ರಾಯೋಜಕತ್ವದಲ್ಲಿ ಪ್ರದರ್ಶನಗೊಳ್ಳುತ್ತಿದೆ. ಆದಾಗ್ಯೂ ಇದು ಸದಭಿರುಚಿ ಮತ್ತು ಸದುದ್ದೇಶದ ಪ್ರಯೋಗ. ಬಹುಶಃ ಹಾಲಿ ಸರಕಾರದ ಏಳು ತಿಂಗಳ ಅಧಿಕಾರಾವಧಿಯಲ್ಲಿ ನಡೆದ ಒಂದೇ ಒಂದು ಒಳ್ಳೆಯ ಸರಕಾರೀ ಕಾರ್ಯಕ್ರಮ ಇದೇ ಇರಬೇಕು. ಸರಕಾರದ ಸೂಚನೆಯ ಮೇರೆಗೆ ಸಿದ್ಧವಾದ ಮೂಢನಂಬಿಕೆ ನಿಷೇಧ ಕಾಯ್ದೆಯ ಕರಡು ಕುರಿತು ಬಿ.ಜೆ.ಪಿ ಮತ್ತು ಕೆಲವು ಪತ್ರಿಕೆಗಳು ನಡೆಸಿದ ಅಪಪ್ರಚಾರದ ಎದುರು, ಸರಕಾರವೇ ಹೆಣದ ಹಾಗೆ ಮೌನವಾಗಿತ್ತು. ಈ ರಂಗ ಪ್ರಯೋಗದ ಮುಖಾಂತರ, ಸರಕಾರ ಆ ಪಾಪವನ್ನು ತೊಳೆದುಕೊಳ್ಳಲು ಯತ್ನಿಸುವಂತೆ ಕಾಣುತ್ತದೆ.

ಸ್ವಾತಂತ್ರ್ಯ ಮತ್ತು ಸಮಾನತೆಯ ಘನವಾದ ಆಶಯವನ್ನು ಹೊಂದಿದ್ದರೂ 'ಮನುಷ್ಯ ಜಾತಿ ತಾನೊಂದೆ ವಲಂ' ಒಂದು ಮನರಂಜಕ ಪ್ರದರ್ಶನವಾಗಿದೆ. ಇದು ಇಡಿಯಾಗಿ ಒಂದು ರಂಗಪ್ರಯೋಗವಲ್ಲ. ರಿಪಬ್ಲಿಕ್ ಡೇ ಪೆರೇಡ್‌ನ ಟ್ಯಾಬ್ಲೋಗಳನ್ನು ನೆನಪಿಸುವ ದೃಶ್ಯಗಳು, ಮುಖವಾಡ, ನೃತ್ಯ, ಸಮೂಹಗಾನ ಮತ್ತು ನಡುನಡುವೆ ಸಂಭಾಷಣೆಯನ್ನು ಒಳಗೊಂಡ ಕಿರುರೂಪಕಗಳು- ಹೀಗೆ ಬಸವಲಿಂಗಯ್ಯನವರ ಈ ಪ್ರಯೋಗ ಹಲವು ಪ್ರಕಾರಗಳ ಒಂದು ಮಿಸಳಬಾಜಿ. ಸಮಾನ ಹಂಚಿಕೆ ಮತ್ತು ಸಮಾನ ಉಪಭೋಗಗಳ ಆದಿಮ ಸಮಾಜದಲ್ಲಿ ಕೃಷಿ ಭೂಮಿ ಮತ್ತು ಹೆಣ್ಣಿನ ಒಡೆತನಕ್ಕಾಗಿ ಪ್ರಾರಂಭವಾದ ಕಲಹ ಕ್ರಮೇಣ ಅಸಮಾನತೆ ಆಧರಿಸಿದ ಜಾತಿವ್ಯವಸ್ಥೆಯಾಗಿ ಹರಳುಗಟ್ಟುವ ರೂಪಕದೊಡನೆ 'ಮನುಷ್ಯ ಜಾತಿ ತಾನೊಂದೆ ವಲಂ' ಪ್ರಾರಂಭವಾಗುತ್ತದೆ. ಈ ವ್ಯವಸ್ಥೆಯ ವಿರುದ್ಧ ವಿವಿಧ ಕಾಲಘಟ್ಟಗಳಲ್ಲಿ ಬಿಡಿಬಿಡಿ ವ್ಯಕ್ತಿಗಳು ಮತ್ತು ತಳ ಸಮುದಾಯಗಳು ನಡೆಸಿದ ಹೋರಾಟದ ಕಿರು ದೃಶ್ಯಗಳ ಮುಖಾಂತರ ಪ್ರಯೋಗ ಮುಂದೆ ಸಾಗುತ್ತದೆ.

ಇವುಗಳಲ್ಲಿ ಮೊದಲನೆಯದ್ದು ಸುಮಾರು ಎರಡು ಸಾವಿರ ವರ್ಷಗಳಷ್ಟು ಹಿಂದಿನವನಾದ ಕವಿ ಗುಣಾಢ್ಯನ ಪ್ರಸಂಗ. ಗುಣಾಢ್ಯ ಭಾರತದ ಪ್ರಾಚೀನ ಕವಿಗಳಲ್ಲಿ ಒಬ್ಬ; ಪ್ರತಿಭಾವಂತ; ಆದರೆ ಹೀನಕುಲದಲ್ಲಿ ಜನಿಸಿದವ. ಅದೂ ಸಾಲದೆಂಬಂತೆ ಈ ಕವಿ ಪ್ರತಿಷ್ಠಿತರ ಭಾಷೆಯಾಗಿದ್ದ ಸಂಸ್ಕೃತದ ಬದಲು ಕೆಳಜಾತಿಯವರ 'ಪೈಶಾಚೀ' ನುಡಿಯಲ್ಲಿ ತನ್ನ 'ಬೃಹತ್ಕಥಾ' ಅಥವಾ 'ಕಥಾಸರಿತ್ಸಾಗರ'ವನ್ನು ರಚಿಸಿದ. ಈ 'ಘೋರ ಅಪರಾಧ'ಕ್ಕಾಗಿ ಗುಣಾಢ್ಯನನ್ನು ಕಾಡಿಗೆ ಅಟ್ಟಲಾಗುತ್ತದೆ; ಆದರೆ ಅವನ ದನಿ ಅಡಗಿಸಲಾಗುವುದಿಲ್ಲ. ಗುಣಾಢ್ಯ ಕಾಡಿನ ಜನರಿಗೆ ತನ್ನ ಕತೆಗಳನ್ನು ಹೇಳುತ್ತಾನೆ. ಕತೆಗಾರರನ್ನು ಗಡಿಪಾರು ಮಾಡಬಹುದು; ಆದರೆ ಕತೆಗಳನ್ನಲ್ಲ. ಜಾತಿಯ ಕಟ್ಟುಪಾಡುಗಳನ್ನು ಉಲ್ಲಂಘಿಸಿ ತನ್ನ 'ಸ್ವ'ವನ್ನು ರೂಪಿಸಿಕೊಳ್ಳುವ ಗುಣಾಢ್ಯನ ಧೀರೋದಾತ್ತ ಪರಂಪರೆ ಇಂದಿನವರೆಗೆ ಮುಂದುವರಿದುಕೊಂಡು ಬಂದಿದೆ. ಆದರೆ ಎಲ್ಲರೂ ಈ ಹೋರಾಟದಲ್ಲಿ ಯಶಸ್ವಿಯಾಗುತ್ತಾರೆ ಎಂದೇನೂ ಇಲ್ಲ. ಹೊಲೆಯನಾಗಿ ಹುಟ್ಟಿಯೂ, ತಪಸ್ಸು ಮಾಡಿದ 'ಅಪರಾಧ'ಕ್ಕಾಗಿ ಶಂಭೂಕನನ್ನು 'ಮರ್ಯಾದಾ ಪುರುಷೋತ್ತಮ'ನಾದ ರಾಮನೇ ಕೈಯಾರೆ ಕೊಲ್ಲುತ್ತಾನೆ. ಬಿಲ್ಲ ಗುರು ಆಚಾರ್ಯ ದ್ರೋಣ, ಕ್ಷತ್ರಿಯರಿಗೆ ಮೀಸಲಾದ ಬಿಲ್ಲು ವಿದ್ಯೆಯನ್ನು ಕಲಿತ ತಪ್ಪಿಗೆ ಶೂದ್ರ ಏಕಲವ್ಯನ ಹೆಬ್ಬೆರಳನ್ನೇ ಗುರು ದಕ್ಷಿಣೆ ಎಂದು ಹಕ್ಕೊತ್ತಾಯದಲ್ಲಿ ಪಡೆಯುತ್ತಾರೆ. ಸೂತ ಪುತ್ರ ಕರ್ಣ, ತನ್ನ ಹುಟ್ಟಿನ ಕಾರಣಕ್ಕೆ ಕೌರವನ ಸಭೆಯಲ್ಲಿ ಅವಮಾನಿತನಾಗುತ್ತಾನೆ. ನೃತ್ಯದಿಂದ ತನ್ನ ಮನವೊಲಿಸಿಕೊಂಡ ತರುಣಿಯರು ಹೊಲತಿಯರು ಎಂದು ತಿಳಿದಾಗ 'ಸತ್ಯಹರಿಶ್ಚಂದ್ರ' ತಾನು ಕೊಟ್ಟ ಮಾತು ಮೀರಿ ಅವರನ್ನು ತಿರಸ್ಕರಿಸುತ್ತಾನೆ.

ಪುರಾಣದ ಈ ರೂಪಕಗಳ ನಂತರ ರಂಗಪ್ರಯೋಗದಲ್ಲಿ ನಮಗೆ ಎದುರಾಗುವುದು ಬಸವಾದಿ ಶರಣರ ಕಲ್ಯಾಣ ಕ್ರಾಂತಿ. ಬ್ರಾಹ್ಮಣ ಹೆಣ್ಣಿನೊಡನೆ ಕೆಳಜಾತಿಯ ತರುಣನ ವಿವಾಹವನ್ನು ಬಸವ ಮುಂದೆ ನಿಂತು ಮಾಡಿಸಿದ ತಪ್ಪಿಗೆ ಶರಣರು ಕಲ್ಯಾಣ ಬಿಟ್ಟು ನಡೆಯಬೇಕಾಗುತ್ತದೆ. ವಚನಕಾರರ ನಂತರ, ಕರ್ನಾಟಕದಲ್ಲಿ ಸಮಾನತೆಗಾಗಿ ದನಿ ಎತ್ತಿದವರು ದಾಸರು. ಉಡುಪಿಯಲ್ಲಿ ಮಡಿವಂತ ಬ್ರಾಹ್ಮಣರು ಎಬ್ಬಿಸಿದ ಗೋಡೆಗಳನ್ನು ಕೆಡವಿ ಕುರುಬ ಜಾತಿಯ ಕನಕನಿಗೆ ಕೃಷ್ಣ ಕಾಣಿಸಿಕೊಂಡ ಎಂಬುದು ಐತಿಹ್ಯ. ಇದನ್ನು ದಾಸ ಪರಂಪರೆಯ ವಿಮೋಚನಾವಾದಿ ಆಶಯಗಳಿಗೆ ಪ್ರತೀಕವಾಗಿ ಪ್ರಯೋಗ ನಿರೂಪಿಸುತ್ತದೆ. ತದನಂತರದಲ್ಲಿ ಶಿಶುನಾಳ ಶರೀಫ, ಕೈವಾರ ತಾತಯ್ಯ ಮತ್ತು ಕರ್ನಾಟಕದ ಸಂತ, ಅನುಭಾವೀ ಪರಂಪರೆಯ ಇನ್ನೂ ಹಲವು ಮಹಾನುಭಾವರು ಮನುಷ್ಯ ಮನುಷ್ಯರ ನಡುವೆ ಆಧ್ಯಾತ್ಮಿಕ ಸಮಾನತೆ ಸಾಧಿಸಲು ಯತ್ನಿಸಿದರು. ಆದರೆ 20ನೆಯ ಶತಮಾನದ ಇಬ್ಬರು, ಗಾಂಧೀಜಿ ಮತ್ತು ಅಂಬೇಡ್ಕರ್, ಆಧ್ಯಾತ್ಮಿಕ ಸಮಾನತೆಯ ಜೊತೆಗೆ, ಈ ಲೋಕದ ಈ ಕ್ಷಣದ ಬದುಕಿನಲ್ಲಿ ಸಮಾನತೆ ತರಲು ಹೋರಾಡಿದರು. ಅವರು ಹೋರಾಟಗಾರರಷ್ಟೇ ಅಲ್ಲ; ಅಪಾರ ಜನಪ್ರಿಯತೆ ಗಳಿಸಿದ್ದ ನೇತಾರರೂ, ದ್ರಷ್ಟಾರರೂ ಆಗಿದ್ದರು. ಗಾಂಧೀಜಿ ಮತ್ತು ಅಂಬೇಡ್ಕರ್ ರಾಜಕೀಯದಲ್ಲಿ ಎದುರಾಳಿಗಳಾಗಿದ್ದರೂ, ಅವರ ಹೋರಾಟಗಳ ಉದ್ದೇಶ ಒಂದೇ ಆಗಿತ್ತು. ಪ್ರಸ್ತುತರಂಗ ಪ್ರಯೋಗ ಈ ಇಬ್ಬರು ಮಹಾವ್ಯಕ್ತಿಗಳನ್ನು ಚಿತ್ರಿಸುವ ಬಗೆ, ಈಗ ಚಾಲ್ತಿಯಲ್ಲಿರುವ ವ್ಯಕ್ತಿ ಪೂಜೆ ಮತ್ತು ಹಠವಾದಗಳಿಂದ ಮುಕ್ತವಾಗಿದೆ. ಕೂದಲು ಸೀಳುವ ಒಣ ತರ್ಕಗಳನ್ನು ದೂರವಿಟ್ಟಿರುವ ಈ ಚಿತ್ರಣದ ಮುಗ್ಧತೆ, ಚರಿತ್ರೆಗೂ ನ್ಯಾಯ ಒದಗಿಸಿದೆ.

'ಮನುಷ್ಯ ಜಾತಿ ತಾನೊಂದೆ ವಲಂ'ರಂಗ ಪ್ರಯೋಗವನ್ನು ನೋಡಿದ ಮೇಲೆ, ಇದರ ವಸ್ತು ಮತ್ತು ಸಾಹಿತ್ಯವನ್ನು ಸಿದ್ಧಪಡಿಸಿದ ಕೋಟಗಾನಹಳ್ಳಿ ರಾಮಯ್ಯ ಹಾಗು ಸಿ.ಜಿ.ಲಕ್ಷ್ಮಿಪತಿ ಮತ್ತು ಮತ್ತು ನಿರ್ದೇಶಕ ಬಸವಲಿಂಗಯ್ಯ ನಮ್ಮ ಚರಿತ್ರೆ ಹಾಗೂ ಪರಂಪರೆಗಳಲ್ಲಿ ಎಷ್ಟನ್ನು ಕೈ ಬಿಟ್ಟಿದ್ದಾರೆ ಎಂದು ಪಟ್ಟಿ ಮಾಡುವ ಮನಸ್ಸಾಗುತ್ತದೆ. ಉದಾಹರಣೆಗೆ ಗುಣಾಢ್ಯನ ಪ್ರಸಂಗದ ಜೊತೆ ಮನುಸ್ಮೃತಿಯನ್ನು ಅಂಬೇಡ್ಕರ್ ಸಾರ್ವಜನಿಕವಾಗಿ ಸುಟ್ಟದ್ದನ್ನೂ ಕಾಣಿಸಬೇಕಿತ್ತು. ಉಡುಪಿಯಲ್ಲಿ 500 ವರ್ಷಗಳ ಹಿಂದೆ ದೇವಾಲಯದ ಗೋಡೆ ಕೆಡಪಿ ಕ… ಕನಕನಿಗೆ ಪ್ರತ್ಯಕ್ಷನಾದ. ಆದರೆ 1934 ರಲ್ಲಿ ಗಾಂಧಿ… ಉಡುಪಿಗೆ ಭೇಟಿ ಕೊಟ್ಟಾಗ ದೇವಾಲಯದ ಹೊ… ಬಾಗಿಲಿನವರೆಗೆ ಬಂದರು. ಆಗ ದೇವಾಲಯದೊ… ದಲಿತರಿಗೆ ಪ್ರವೇಶವಿರಲಿಲ್ಲ. ಇದು ತಿಳಿದಾಗ ಗಾಂಧಿ… 'ಹಾಗಾದರೆ ತನಗೆ ಅಲ್ಲೇನೂ ಕೆಲಸವಿಲ್ಲ' ಎಂದು ಅಲ್ಲಿ… ಮುಂದೆ ನಡೆದರು. ಕನಕನ ಪ್ರಸಂಗದ ಜೊತೆ, ದಲಿತ… ಪ್ರವೇಶ ನಿರಾಕರಿಸಿದ ಈ ಕ್ಷೇತ್ರದ ವಿರುದ್ಧ ಗಾಂಧೀಜಿಯ… 'ಸತ್ಯಾಗ್ರಹ'ವನ್ನೂ ಚಿತ್ರಿಸಿದ್ದರೆ ಪ್ರಯೋಗ ಇನ್ನ… ಅರ್ಥಪೂರ್ಣವಾಗಬಹುದಿತ್ತು. ಶಿಶುನಾಳ ಶರೀಫರು ಮ… ಕೈವಾರ ತಾತಯ್ಯನವರ ಕುರಿತು ಹೇಳುವ ಈ ಪ್ರಯೋ… ನಾರಾಯಣ ಗುರುಗಳನ್ನೂ ಪ್ರಸ್ತಾಪಿಸಬೇಕಿತ್ತು. ಕರ್ನಾಟಕದ… ದಲಿತರ ಶಿಕ್ಷಣಕ್ಕಾಗಿ ತನ್ನ ಜೀವನವನ್ನೇ ಮುಡುಪಾಗಿಟ್ಟ… ಕುದ್ಮಲ್ ರಂಗರಾಯರನ್ನು ನಾವು ರಂಗದ ಮೇ… ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಮಹಾರಾಷ್ಟ್ರದ 19 ನೆ… ಶತಮಾನದ ಮಹಾನ್ ಮಾನವತಾವಾ… ಹೋರಾಟಗಾರರಾಗಿದ್ದ ಜೋತಿಬಾ ಫುಲೆ ಮತ್ತು ಅ… ಪತ್ನಿ ಸಾವಿತ್ರಿ ಬಾಯಿ ಫುಲೆಯವರ ಗೈರುಹಾಜರಿ ಎ… ಕಾಣುತ್ತದೆ. ಈ ರಂಗ ಪ್ರಯೋಗದ ಒಂದು ಕಿರು ದೃಶ್ಯ… ದೇವನೂರ ಮಹದೇವರ 'ಕುಸುಮಬಾಲೆ' ಕಾದಂಬರಿಯ… ಕುಸುಮಾ ತನ್ನ ಸ್ವಾತಂತ್ರ್ಯವನ್ನು ಅವಳಿಗೆ ಏನೇನೂ ಗೊತ್ತಿಲ… ಇಂಗ್ಲಿಷ್‌ನಲ್ಲಿ ಮೈಮೇಲೆ ಗಣಬಂದವರ ಹಾಗೆ 'ನು… ಹೇಳುತ್ತಾಳೆ. ಇದಕ್ಕೆ ಸಂವಾದಿಯಾಗಿ, ಕಾರಂತರ 'ಚೋಮ… ದುಡಿ'ಯ ದಲಿತ ಚೋಮನ ಸ್ವಂತ-ಸಾಗುವಳಿಯ ಹಂಬ… ಮತ್ತು ಅದಕ್ಕೆ ಅಡ್ಡ ಬರುವ ಅವನ ಬ್ರಾಹ್ಮಣ ದನಿ… ವಿಧವೆ ತಾಯಿಯ ಚಿತ್ರಣವೂ ಬಂದಿದ್ದರೆ… ರಂಗಪ್ರಯೋಗ ಇನ್ನಷ್ಟು ಅರ್ಥಪೂರ್ಣವಾಗಿರುತ್ತಿ… ಸಮಾನತೆಗಾಗಿ ಕೆಳ ಜಾತಿ ವರ್ಗಗಳು, ಕಮ್ಯುನಿ… ನಾಯಕತ್ವದಲ್ಲಿ, ಸ್ವಾತಂತ್ರ್ಯಪೂರ್ವದಲ್ಲೇ ನಡೆಸಿದ ಯ… ಚಳವಳಿಯನ್ನೂ ಈ ರಂಗಪ್ರಯೋಗ ನೆನಪಿಸಿಕೊಳ್ಳುವುದಿ… ಎಂಬುದು ಸಹ ಒಂದು ಲೋಪವೇ. ಆದರೆ ಎರ… ಗಂಟೆಗಳ ಕಾಲಾವಧಿಯಲ್ಲಿ ಇಷ್ಟು ವಿಶಾಲ ಹರಹಿ… ವಸ್ತುವನ್ನು ನಿರೂಪಿಸಬೇಕಾದ ನಿರ್ದೇಶಕರ ಕಷ್ಟವನ… ನಾವು ಗಣನೆಗೆ ತೆಗೆದುಕೊಳ್ಳಬೇಕು. ಹಾಗೆ ನೋಡಿದ… ನಮ್ಮ ಚರಿತ್ರೆ ಮತ್ತು ಸಂಸ್ಕೃತಿಯಲ್ಲಿ ನಾವು ಮ… ಎಷ್ಟು ಜೀವಪರ ಸಂಗತಿಗಳತ್ತ ಈ ಪ್ರಯೋಗ ನ… ಗಮನ ಸೆಳೆಯುತ್ತದೆ ಎನ್ನುವುದೇ ಇದರ ಒಂದು ಪ… ಪಾಯಿಂಟ್.


ಮತೀಯದ್ವೇಷ, ಜನಾಂಗ ದ್ವೇಷಗಳ ವಿರುದ್ಧ ನಡೆಸ… ಹೋರಾಟ, ಮರೆವಿನ ವಿರುದ್ಧ ನಮ್ಮ ನೆನಪು ನಡೆಸು… ಹೋರಾಟವಾಗಿದೆ ಎಂದು ಖ್ಯಾತ ಲೇಖಕ ಮಿಲ… ಕುಂದೆರಾ ಹೇಳುತ್ತಾನೆ. ಜಾತಿ ಅಸಮಾನತೆ ವಿರು… ಹೋರಾಟವೂ ಅದೇ ಬಗೆಯದ್ದು. ಕಳೆದ ಕೆಲ… ವರ್ಷಗಳಿಂದ ಸಂಘ ಪರಿವಾರ ನಮ್ಮ ಸಂಸ್ಕೃತಿಯ ಜೀವ… ಜನಪರ ನೆನಪುಗಳೆಲ್ಲವನ್ನೂ ನಿರಾಕರಿಸುತ್ತಿದೆ. ಜ… ಮನಸ್ಸುಗಳಿಂದಲೂ ಅವನ್ನು ಉಜ್ಜಿ ಅಳಿಸಲು ಯತ್ನಿಸುತ್ತಿ… ಈ ಹಿನ್ನೆಲೆಯಲ್ಲಿ 'ಮನುಷ್ಯ ಜಾತಿ ತಾನೊಂದೆ ವ… ನಂತಹ ರಂಗಪ್ರಯೋಗಗಳು ಇನ್ನಷ್ಟು ಬರಬೇಕು.

ನರಕಸದೃಶ ಸರ್ಕಾರಿ ಶಾಲೆ

ಹಿಂದಿನ ಬಿಜೆಪಿ ಸರ್ಕಾರದ ಶೈಕ್ಷಣಿಕ ನೀತಿಯ ಭಾಗವಾಗಿ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಕಡಿಮೆ ಇದೆ ಎನ್ನುವ ನೆಪವೊಡ್ಡಿ ನೂರಾರು ಶಾಲೆಗಳನ್ನು ಮುಚ್ಚುವ ಪ್ರಕ್ರಿಯೆ ಆರಂಭವಾಯಿತು. ಹೀಗೆ ಆಗುವುದರ ಮೂಲ ಕಾರಣವನ್ನು ತಿಳಿಯಲು ಹೊರಡದೆ 'ವಿಲೀನ'ವೆಂಬ ಹೆಸರು ಕೊಟ್ಟು ಶಾಲೆಗಳನ್ನು ಮುಚ್ಚಲಾರಂಭಿಸಿದರು. ಪರಿಣಾಮವಾಗಿ ಬಡ ಕುಟುಂಬಗಳ ಮಕ್ಕಳ ಓದಿಗೇ ಸಂಚಕಾರ ಬಂದಿತು. ಅದೇ ಪ್ರಕ್ರಿಯೆ ಕಾಂಗ್ರೆಸ್ ಸರ್ಕಾರದಡಿಯಲ್ಲಿಯೂ ಮುಂದುವರೆದಿದ್ದು, ಅದಕ್ಕೆ ತಡೆಯೊಡ್ಡುವ ಭರವಸೆಯಂತೂ ಸಿಕ್ಕಿಲ್ಲ.

ಸರ್ಕಾರಿ ಶಾಲೆಗಳಿಗೆ ಮಕ್ಕಳ ದಾಖಲಾತಿ ಕಡಿಮೆಯಾಗುವುದಕ್ಕೆ ಕಾರಣಗಳು ಹಲವು. ಅವುಗಳಲ್ಲಿ ಅತ್ಯಂತ ಪ್ರಮುಖವಾದುದು ಆ ಶಾಲೆಗಳ ದಯನೀಯ ಸ್ಥಿತಿ. ಈ ವಿಷಯವನ್ನು ಹಲವು ಬಾರಿ ಸರ್ಕಾರಗಳ/ಅಧಿಕಾರಿಗಳ ಗಮನಕ್ಕೆ ತರಲಾದರೂ, ಆ ಸಮಸ್ಯೆಯ ಬಗ್ಗೆ ಆಸ್ಥೆಯನ್ನೇ ವಹಿಸದ ವ್ಯವಸ್ಥೆ, ಕಲಿಕಾ ಮಾಧ್ಯಮದ ಬಗ್ಗೆ ನೀತಿ ನಿರೂಪಕರು ಹಾಗೂ ಪೋಷಕರಲ್ಲಿ ಗೊಂದಲವಿದ್ದೇ ಇದೆ. ಇಂಗ್ಲಿಷ್ ಮಾಧ್ಯಮದಲ್ಲಿ ಓದಿದರೆ ಮಾತ್ರ ಉತ್ತಮ ಭವಿಷ್ಯ ಸಾಧ್ಯವೆನ್ನುವ ಪರಿಸ್ಥಿತಿ ಸೃಷ್ಟಿಯಾಗಿದೆ. ಇದಕ್ಕೆ ಕಾರಣ ಕೇಂದ್ರ, ರಾಜ್ಯ ಸರ್ಕಾರಗಳ ಆರ್ಥಿಕ ನೀತಿ. ಹಾಗಾಗಿ ಇಂಗ್ಲಿಷ್ ಮಾಧ್ಯಮದಲ್ಲಿಯೇ, ಅದೆಷ್ಟೇ ಕೆಟ್ಟದಾಗಿಯೇ ಆಗಲಿ, ತಮ್ಮ ಮಕ್ಕಳು ಓದಬೇಕೆನ್ನುವ ಇರಾದೆ ಪೋಷಕರದು. ಅದು ಸಾಧ್ಯವಾಗುವುದು ಖಾಸಗಿ ಶಾಲೆಗಳಲ್ಲಿ. ಇದರ ಜತೆಗೆ ಸೌಲಭ್ಯಗಳ ದೃಷ್ಟಿಯಿಂದ ನೋಡಿದರೆ ಸರ್ಕಾರಿ ಶಾಲೆಗಳಿಂದ ದೂರವಿರಬೇಕೆನ್ನುವ ಸ್ಥಿತಿಯಿದ್ದ ಸನ್ನಿವೇಶದಲ್ಲಿ, ಮಕ್ಕಳ ಶಿಕ್ಷಣದ ಮೇಲೆ ಖರ್ಚು ಮಾಡಲು ಸಾಧ್ಯವೇ ಇಲ್ಲವೆನ್ನುವವರು ಮಾತ್ರ ತಮ್ಮ ಮಕ್ಕಳನ್ನು ಈ ಶಾಲೆಗಳಿಗೆ ಕಳಿಸುವಂತಾಗಿದೆ.

ಅಂಥ ಒಂದು ಶಾಲೆಯ ಕಥೆ ಇದು. ಬೆಂಗಳೂರಿನ ದಕ್ಷಿಣ ಭಾಗದಲ್ಲಿ ಪ್ರತಿಷ್ಠಿತ ಬಡಾವಣೆಯೆಂದು ಹೆಸರು ಪಡೆಯುತ್ತಿರುವ ಪದ್ಮನಾಭನಗರದಿಂದ ಕೇವಲ 1.5-2 ಕಿಲೋಮೀಟರ್ ದೂರದಲ್ಲಿ ಉತ್ತರಹಳ್ಳಿಗೆ ಹೋಗುವ ದಾರಿಯಲ್ಲಿನ ಗೌಡನಪಾಳ್ಯದಲ್ಲಿನ ಶಾಲೆ.



ಈ ಶಾಲೆ ಆರಂಭವಾಗಿದ್ದು 2002ರಲ್ಲಿ. ಊರಿನ ಬೇರೆ ಎಲ್ಲೂ ಜಾಗ ಸಿಗಲಿಲ್ಲವೇನೋ! ಅಲ್ಲಿನ ದುರ್ಗಮ್ಮನ ಗುಡಿಯ ಒಂದು ಭಾಗದಲ್ಲಿ ಮೂರು ಕೋಣೆಗಳಲ್ಲಿ ನಡೆಯುತ್ತಿರುವ ಶಾಲೆ ಇದೆ. ಕಳೆದ 12 ವರ್ಷಗಳಿಂದ ಈ ಮೂರು ಕೋಣೆಗಳಲ್ಲಿಯೇ ಮಕ್ಕಳ ವಿದ್ಯಾಭ್ಯಾಸ ನಡೆಯುತ್ತಿದೆ.

ಈ ಮೂರು ಕೋಣೆಗಳ ಮುಂಭಾಗದಲ್ಲಿಯೇ ದೇವಸ್ಥಾನ. ಅಲ್ಲಿ ಸಾಮಾನ್ಯವಾಗಿರುವ ಗೌಜು, ಗದ್ದಲ, ಘಂಟಾ-ನಿನಾದ, ಭಕ್ತರ ಓಡಾಟ. 1-5ರವರೆಗೂ ಐದು ತರಗತಿಗಳಿಗೆ ಇರುವುದು ಮೂರೇ ಕೋಣೆಗಳು. ಮುಖ್ಯೋಪಾಧ್ಯಾಯರೂ ಸೇರಿ ಮೂವರು ಅಧ್ಯಾಪಕರು ಇರುವ ಎರಡು ಶೌಚಾಲಯಗಳು ಬೀದಿಯ ಕಡೆಗೆ ಬಾಗಿಲುಗಳನ್ನು ಹೊಂದಿದ್ದು, ಅವುಗಳ ಉಪಯೋಗ ಸಾರ್ವಜನಿಕ ಶೌಚಾಲಯದಂತೆಯೇ ಇದೆ. ಮಳೆ ಬಂದರಂತೂ, ಶಾಲೆಯ ಕೋಣೆಗಳನ್ನು, ಮುಂದಿನ ಆವರಣವನ್ನು ಸ್ವಚ್ಛ ಮಾಡುವುದರಲ್ಲಿಯೇ ಮಕ್ಕಳ, ಅಧ್ಯಾಪಕರ ಸಮಯದ ಬಹುಪಾಲು ವಿನಿಯೋಗ.

ನಲಿ-ಕಲಿ ವ್ಯವಸ್ಥೆಯಿಂದಾಗಿ ಒಂದರಿಂದ ಮೂರನೆ ತರಗತಿಯವ… ಮಕ್ಕಳು ಒಂದೇ ಕೊಠಡಿಯಲ್ಲಿ, ಇನ್ನೆರಡು ಕೋಣೆಗಳಲ್ಲಿ ಉಳಿದ ಎರ… ತರಗತಿಗಳು ಮತ್ತು ಅಧ್ಯಾಪಕರ ಕೊಠಡಿ.

ಇಂಥ ಪರಿಸ್ಥಿತಿಯಲ್ಲಿ ನಡೆಯುತ್ತಿರುವ ಶಾಲೆಗೆ ಯಾವ ಪೋಷಕ… ತಮ್ಮ ಮಕ್ಕಳನ್ನು ಕಳಿಸಿಯಾರು? ಆದರೂ ಅಲ್ಲಿ ಒಟ್ಟು 80 ಜನ ಮಕ್ಕಳಿದ… 35 ಜನ ಗಂಡುಮಕ್ಕಳು, ಹೆಣ್ಣುಮಕ್ಕಳು 45. ಸುತ್ತಮುತ್ತಲಿನ ದಿನಗೂ… ಕೆಲಸದ, ಬಡಕುಟುಂಬದವರ ಮಕ್ಕಳು. ಎಲ್ಲರೂ ಸಾಮಾಜಿಕವಾಗಿಯ… ಸಹ ಕೆಳವರ್ಗದವರೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಇಲ್ಲಿನ ಕಾರ್ಪೊರೇಟರ್ ಆಗಲಿ, ಶಾಸಕರಾಗಲಿ (ಅವರು ಹಿಂ… ಸರ್ಕಾರದಲ್ಲಿ ಮಂತ್ರಿಯೂ ಆಗಿದ್ದರು) ಈ ಶಾಲೆಯ ಕಡೆ ಗಮನ ಹರಿ… ಹಳ್ಳಿಯ ಹತ್ತಿರವೇ, ಕೆರೆಯ ಬಳಿ ಸ್ವಲ್ಪ ಜಾಗವನ್ನು ಬಳಸಿ ಶಾಲೆಗೆ ಸ್ವ… ಕಟ್ಟಡವನ್ನು ನಿರ್ಮಿಸಬಹುದು. ಆದರೆ, ಜನಪ್ರತಿನಿಧಿಗಳು/ಅಧಿಕಾರಿಗ… ಇದರ ಬಗ್ಗೆ ಅನುಕೂಲ ಪ್ರತಿಕ್ರಿಯೆಯನ್ನೇ ತೋರಿಸುತ್ತಿಲ್ಲ. ಮೇಲಾಗಿ… ಜಾಗದ ಮೇಲೆ ಕೆಲವರು ರಾಜಕೀಯ ಶಕ್ತಿಗಳ ಕಣ್ಣು ಬಿದ್ದಿದೆ ಎ… ಗುಮಾನಿಯೂ ಇದೆ.

ಸರ್ಕಾರಿ ಶಾಲೆಗಳನ್ನು ಉತ್ತಮ ದರ್ಜೆಗೆ ಏರಿಸುತ್ತೇವೆ ಎಂದು ಇಂ… ಸರ್ಕಾರದಲ್ಲಿನ ಪ್ರಾಥಮಿಕ ಶಿಕ್ಷಣ ಸಚಿವರು ಹೇಳಿಕೆಗಳನ್ನೇನೋ ನೀಡಿದ… ಅವರು ಒಂದು ಬಾರಿ ಗೌಡನಪಾಳ್ಯಕ್ಕೆ ಭೇಟಿ ಕೊಟ್ಟು ಒಂದು ಇಕ್ಕಟ… ಸಂದಿಯ ಮೂಲಕ ಈ ಶಾಲೆಯನ್ನು ತಲುಪಿದರೆ ಅದರ ಮತ್ತು ಅ… ಶಾಲೆಗಳ ದುಃಸ್ಥಿತಿ ಏನು ಎಂಬುದು ಸ್ವತಃ ನೋಡಿ ಅರ್ಥಮಾಡಿಕೊಳ್ಳಬಹು…

■ ನಗರಗೆರೆ ರಮೇ…

ಯೋಗೇಶ್ ಮಾಸ್ಟರ್
ಪುರಾಣದ ಹೂರಣ

ಪುರಾಣದ ರೂಪಕಗಳು

ಇತ್ತೀಚೆಗೆ ನಾನು ಪ್ರವಾಸ ಕೈಗೊಂಡಿದ್ದ ಸಂದರ್ಭದಲ್ಲಿ ಹಲವಾರು ನರು ನನ್ನನ್ನು ಭೇಟಿಯಾಗಿ ತಮ್ಮ ಶಂಕೆಗಳನ್ನು ಹಂಚಿಕೊಂಡರು. ಅವರು ಲವೊಮ್ಮೆ ಖಾರವಾಗಿಯೂ, ಸೌಜನ್ಯಪೂರಿತವಾಗಿಯೂ ಮತ್ತೂ ಕೆಲವೊಮ್ಮೆ ವಲ ನಿಷ್ಠುರವಾಗಿಯೂ ಪ್ರಶ್ನೆಗಳನ್ನು ನನ್ನ ಮುಂದೆ ಇಡುತ್ತಿದ್ದರು. ಅವುಗಳಲ್ಲಿ ಮುಖ್ಯವಾಗಿ ಕೇಳಲಾದವುಗಳೆಂದರೆ:

ನಮ್ಮ ಹಿಂದೂ ಧರ್ಮದ ಪುರಾಣಗಳನ್ನು ನೀವು ಸುಳ್ಳು ಅಂತೀರೇನು?


1. ರಾಮಾಯಣವನ್ನು ನೀವು ಏಕೆ ಧರ್ಮಗ್ರಂಥವೆಂದು ಅನ್ನುವುದಿಲ್ಲ?

2. ನೀವು ಹಿಂದೂ ಧರ್ಮವನ್ನೇ ಗುರಿಯಾಗಿಸಿಕೊಂಡಿರುವುದೇಕೆ?

3. ವಿಷ್ಣು, ಕೃಷ್ಣ, ಗಣೇಶ, ದೇವಿ; ಈ ದೇವರುಗಳನ್ನೆಲ್ಲಾ ನಾವು ಸಾವಿರಾರು ವರ್ಷಗಳಿಂದ ಪೂಜಿಸಿಕೊಂಡು, ಆರಾಧಿಸಿಕೊಂಡು ಬಂದಿದ್ದೇವೆ. ಅವುಗಳನ್ನು ರೆಯೇ ರೀತಿಯಲ್ಲಿ ಹೇಳುವ ಆಗತ್ಯವೇನಿದೆ? ಅವನ್ನು ಏಕೆ ಅವಮಾನಿಸುತ್ತೀರಿ? ಕೆ ಅನುಮಾನಿಸಿರುತ್ತೀರಿ?

4. ನಮ್ಮ ದೇವರುಗಳನ್ನು ವಿರೋಧಿಸುತ್ತೀರಿ, ಮುಸ್ಲಿಂ ಧರ್ಮದವರನ್ನು ಟೈಸುತ್ತೀರಿ.





5. ಹಿಂದೂ ಧರ್ಮದ ವಿರೋಧ ಮಾಡಿಕೊಂಡು ಕ್ರೈಸ್ತ ಮತ್ತು ಮುಸ್ಲಿಂ ಧರ್ಮದವರನ್ನು ಎತ್ತಿ ಕಟ್ಟುತ್ತೀರಿ. ಏಕೆ? ಇತ್ಯಾದಿ...

ಈ ಎಲ್ಲಾ ಪ್ರಶ್ನೆಗಳಿಗೆ ನಾನು ಉತ್ತರಿಸುತ್ತಾ ಬಂದೆ. ಅವರಲ್ಲಿ ಅನೇಕರು ಪೂರ್ವಾಗ್ರಹಪೀಡಿತರಾಗಿದ್ದವರು ನನ್ನ ಉತ್ತರಗಳನ್ನು ಒಮ್ಮಿಂದೊಮ್ಮೆಲೇ ತಿರಸ್ಕರಿಸಿ ಹೊರಟುಹೋದರು. ಮತ್ತೆ ಕೆಲವು ಮಂದಿ ಸಾವಕಾಶ ಕುಳಿತು ಮಾತುಗಳನ್ನು ಪೂರ್ಣ ಕೇಳಿ, 'ನಿಮ್ಮ ಮಾತು ಚಲೋ ಅನ್ನಿಸ್ತದ್ರೀ... ತ್ರ ಒಪ್ಪಿಕೊಳ್ಳೋಕೇ ಬರಾಂಗಿಲ್ರೀ' ಎಂದು ಹೇಳಿ ಕೈಕುಲುಕಿ ಹೋದರು. ಮತ್ತೆ ಕೆಲವರು 'ಇಷ್ಟೂ ದಿನ ಒಟ್ಟಾ ಈ ನಮೂನೆಯಲ್ಲೂ ದೇವರನ್ನು ನೋಡಬಹುದು ಅಂತ ಅನ್ನಿಸಿಯೇ ಇರಲಿಲ್ರೀ...' ಎಂದು ಇನ್ನು ಮುಂದೆ ಬಗೆಯ ಚಿಂತನೆಗಳನ್ನೂ ಒಳಗೊಂಡಿರುವ ಪುಸ್ತಕಗಳನ್ನು ನೋಡುವ ಬಯಕೆ ವ್ಯಕ್ತಪಡಿಸಿದರು.

ಪುರಾಣಗಳು ಸುಳ್ಳೇ?

ಪುರಾಣಗಳು ಸುಳ್ಳಲ್ಲ, ಅಂತೆಯೇ ಅವು ಕಾಣುವ ಹಾಗೆಯೇ ಇರುವಂತಹ ಸತ್ಯವೂ ಅಲ್ಲ. ಈ ಉತ್ತರ ಬಹಳಷ್ಟು ಜನರಿಗೆ ಅರ್ಥವೇ ಆಗಲಿಲ್ಲ. 'ಹನುಮಂತನು ಸಂಜೀವಿನಿ ಪರ್ವತವನ್ನು ತಂದನೆಂದರೆ ಅವನು ತಂದಿರಲೇ ಬೇಕಲ್ರೀ?' ಎಂಬುದು ಅವರ ಪ್ರಶ್ನೆ. ಇಡೀ ಬೆಟ್ಟವನ್ನು ಹೊತ್ತು ತರುವಷ್ಟು ಮಹಾಶಕ್ತಿ ಮತ್ತು ಮಹಾ ಬಲಾಢ್ಯನಾಗಿರಲೇ ಬೇಕಲ್ರೀ. ಈಗ ನಮ್ಮಂತ ಸಾಮಾನ್ಯ ಮನುಷ್ಯರಿಗೆ ಹಾಗೆ ಬೆಟ್ಟವನ್ನು ಎತ್ತಲು ಸಾಧ್ಯವಾಗತ್ತೇನ್ರೀ? ಎಂದೆಲ್ಲಾ ತಮ್ಮ ಪ್ರಶ್ನೆಗಳನ್ನು ತೋಡಿಕೊಂಡರು.

ಮಾರ್ಕೆಟ್ಟನ್ನೇ ಹೊತ್ತು ತರುವ ಅಮ್ಮ

ಅಪ್ಪನಿಂದ ರೊಕ್ಕ ಒಯ್ದು ಮನೆಯಿಂದ ತರಕಾರಿ ತರಲೆಂದು ಹೊರಟ ಸ್ತ್ರೀ ಕೆಲವು ಕಾಲಾನಂತರ ಮನೆಗೆ ವಾಪಸ್ ಬರ್ತಾಳೆ. ಏನೋ ಒಂದೆರಡು ಕಾಯಿ-ಪಲ್ಲೆ ಕೈಯಲ್ಲಿ ಹಿಡಿದು ಬರುತ್ತಾಳೆ ಎಂದು ನಿರೀಕ್ಷಿಸಿದ್ದ ಅಪ್ಪನಿಗೆ ಅವಳನ್ನು ನೋಡಿ ಗಾಬರಿಯಾಗುತ್ತದೆ. ಕಾಯಿ-ಪಲ್ಲೆಗಳ ಒಂದಷ್ಟು ಬ್ಯಾಗುಗಳು, ಬುಟ್ಟಿಗಳ, ಹೂಗಳ ಕವರುಗಳು ಇತ್ಯಾದಿಗಳನ್ನು ನೋಡಿ, 'ಅರೆ, ಮಾರ್ಕೆಟ್ಟಿಗೆ ಹೋಗಿ ಏನೋ ಒಂದಿಷ್ಟು ಕಾಯಿ-ಪಲ್ಲೆ ತರ್‍ತೀಯಂತ ನೆನೆಸಿದರೆ, ಇಡೀ ಮಾರ್ಕೆಟ್ಟನ್ನೇ ಹೊತ್ಕೊಂಡು ಬಂದೀಯಲ್ಲೇ?' ಎಂದು ತನ್ನ ನಿರೀಕ್ಷೆಯನ್ನು ಮೀರಿ ತಂದಿರುವ ವಸ್ತುಗಳ ಮೌಲ್ಯಕ್ಕೆ ತನ್ನ ಅಚ್ಚರಿಯನ್ನು ವ್ಯಕ್ತಪಡಿಸುತ್ತಾನೆ. ಅವನ ಮಾತಲ್ಲಿ ಉತ್ಪ್ರೇಕ್ಷೆ ಇರುತ್ತದೆ. ಅವನು ಹೇಳಿರುವ ಮಾತು ಸುಳ್ಳೂ ಅಲ್ಲ, ಅಂತೆಯೇ ಅವನು ಹೇಳುವ ರೀತಿಯಂತೆಯೇ ಇರುವ ನಿಜವೂ ಅಲ್ಲ.

ಸಂಜೀವಿನಿ ಪರ್ವತವನ್ನು ಹೊತ್ತು ತಂದ ಹನುಮಂತ

ರಾಮ-ಲಕ್ಷ್ಮಣರಿಗೆ ಯುದ್ಧದಲ್ಲಿ ಘಾತವಾಗಿ ಅವರು ಮೂರ್ಛಿತರಾಗಿದ್ದಾರೆ. ಅವರ ವೈದ್ಯ ಪಂಡಿತನಾದ ಜಾಂಬುವಂತನು ಈ ಮೂರ್ಛಿತರನ್ನು ಎಚ್ಚರಿಸಲು ತಿಳಿದಿರುವ ಗಿಡಮೂಲಿಕೆಗಳನ್ನು ತರಲು ಹನುಮಂತನಿಗೆ ಹೇಳುತ್ತಾನೆ. ಹನುಮಂತನೋ ಈ ಗಿಡಮೂಲಿಕೆಯ ಲಕ್ಷಣಗಳನ್ನು ತಿಳಿಯದವನು. ಹಾಗಾಗಿ ಹಿಮಾಲಯದ ಸಂಜೀವಿನಿ ಪರ್ವತದಲ್ಲಿ ಬೆಳೆಯುವ, ತನ್ನ ವೈದ್ಯಕ್ಕೆ ಅವಶ್ಯಕತೆಯಿರುವಂತಹ ಗಿಡಮೂಲಿಕೆಗಳ ಲಕ್ಷಣಗಳನ್ನು ಅವನಿಗೆ ತಿಳಿಹೇಳಿ ಅವುಗಳನ್ನು ತರಲು ಕಳುಹಿಸುತ್ತಾನೆ.

ಹನುಮಂತನು ಆ ಮೂಲಿಕೆಗಳ ಲಕ್ಷಣಗಳನ್ನು ಮನನ ಮಾಡಿಕೊಂಡು ಅತ್ತ ಹೋಗುತ್ತಾನೆ. ಆದರೆ, ಆ ಸಂಜೀವಿನಿ ಪರ್ವತದಲ್ಲಿ ಜಾಂಬುವಂತನು ಹೇಳಿರುವಂತಹ ಲಕ್ಷಣಗಳುಳ್ಳ ಅನೇಕ ಗಿಡಗಳನ್ನು, ಮೂಲಿಕೆಗಳನ್ನು ಕಾಣುತ್ತಾನೆ. ಅವನಲ್ಲಿ ಯಾವುದನ್ನು ಒಯ್ಯುವುದು, ಯಾವುದನ್ನು ಬಿಡುವುದು ಎಂದು ಗೊಂದಲಗಳು ಉಂಟಾಗುತ್ತದೆ. ಅದಕ್ಕೆ ರಗಳೆಯೇ ಬೇಡವೆಂದು ಆತ ತಿಳಿಸಿದಂತಹ ಲಕ್ಷಣಗಳುಳ್ಳ ಮೂಲಿಕೆಗಳೆಲ್ಲವನ್ನೂ ಒಟ್ಟಾಗಿಸಿ ಒಯ್ಯುತ್ತಾನೆ. ಅಲ್ಲಿ ವೈದ್ಯಕ್ಕೆ ಬೇಕಾಗಿರುವಂತಹ ಅಗತ್ಯಕ್ಕಿಂತ ಹೆಚ್ಚು ಮೂಲಿಕೆಗಳನ್ನು ತಂದ ಹನುಮಂತನ ಕಂಡು ಈ ಜಾಂಬುವಂತನು 'ಏ ತಮ್ಮಾ, ಇದೇನೋ, ನಾ ಒಂದೆರಡು ಸಂಜೀವಿನಿ ಮೂಲಿಕೆಗಳನ್ನು ತಾರೋ ಎಂದರೆ, ಇಡೀ ಸಂಜೀವಿನಿ ಪರ್ವತವನ್ನೇ ಹೊತ್ತು ತಂದೀಯಲ್ಲೋ?' ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಾನೆ. ಅವನ ಮಾತಲ್ಲಿ ಅಲಂಕಾರವಿದೆ. ರೂಪಕವಿದೆ.

ಅಪ್ಪನು ಅವ್ವನಿಗೆ ಇಡೀ ಮಾರ್ಕೆಟ್ಟನ್ನೇ ತಂದಳು ಎಂದಹಾಗೆ. ಮುಂದೆ ಈ ಮಾತು ಕೇಳಿದ ಮುಗ್ಧ ಮಗನು ಅವ್ವನ ಚಿತ್ರವನ್ನು ಬಿಡಿಸಿ ಅವಳು ಎರಡೂ ಕೈಗಳಲ್ಲಿ ಮಕ್ಕರಿಯನ್ನು ಹೊತ್ತು ತರುತ್ತಿರುವ ಹಾಗೆ ಇಡೀ ಮಾರ್ಕೆಟ್ಟನ್ನು ಹೊರಿಸುತ್ತಾನೆ.

ಕಲಾವಿದನೂ, ಕವಿಯೂ ಹಂಗೆಯೇ ಯಾವುದೋ ಒಂದು ನಡೆದ ಘಟನಾವಳಿಯನ್ನು ತನ್ನ ಕಲ್ಪನೆಯ ಮತ್ತು ಪ್ರತಿಭೆಯ ಅನುಗುಣವಾಗಿ ರೂಪಕಗಳನ್ನು ಕಟ್ಟಿಕೊಡುತ್ತಾನೆ. ಕಾವ್ಯವು ರೂಪಕಗಳಲ್ಲಿ ಹೇಗೆ ವಿಸ್ತೃತವಾಗುತ್ತಾ ಹೋಗುವವೋ ಅಂತೆಯೇ ಯಾವುದೋ ಘಟನೆಯ ಬೀಜವು ಪುರಾಣಗಳ ರೂಪಕಗಳಲ್ಲಿ ವಿಸ್ತೃತವಾಗುತ್ತಾ ಹೋಗುವವು.

ಗೋವರ್ಧನ ಗಿರಿಧಾರಿ

ಪುರಾಣದ ಒಗಟುಗಳನ್ನು ಹಲವು ರೀತಿಗಳಲ್ಲಿ ಒಡೆಯಲು ಮತ್ತು ವಿಶ್ಲೇಷಿಸಲು ಸಾಧ್ಯ. ಮಾನವಶಾಸ್ತ್ರ ಸಮಾಜಶಾಸ್ತ್ರ ಸಂಸ್ಕೃತಿ ವಿಕಾಸ, ಇತಿಹಾಸದ ಬೆಳವಣಿಗೆ, ಆಧ್ಯಾತ್ಮಿಕ, ಸೈದ್ಧಾಂತಿಕ ಬೆಳವಣಿಗೆ ಇತ್ಯಾದಿಗಳ ನೆಲೆಯಿಂದಲೂ ಅಧ್ಯಯನ ಮಾಡಲು ಸಾಧ್ಯವಾಗುತ್ತದೆ. ನನ್ನ ಹಲವು ಹೊಸ ಗೆಳೆಯರು ಪ್ರಸ್ತಾಪಿಸಿದ ವಿಷಯಗಳಲ್ಲಿ ಕೃಷ್ಣನ ಗೋವರ್ಧನಗಿರಿಯ ಪ್ರಶ್ನೆಯೂ ಎದ್ದಿತ್ತು.

ಅವರಿಗೆ ಮತ್ತೊಂದು ರೀತಿಯ ವಾಸ್ತವಿಕ ನೆಲೆಗಟ್ಟಿನಿಂದ ಅರ್ಥೈಸಿಕೊಳ್ಳಲು ಸಹಕರಿಸಲು ಯತ್ನಿಸಿದೆ.

ಕೃಷ್ಣನ ಹೆಸರಿನ ವ್ಯುತ್ಪತ್ತಿಯ ಬಗ್ಗೆ ಎರಡು ಬಗೆಯ ಪ್ರಶ್ನೆಗಳನ್ನು ಎತ್ತಿ ಜಿಜ್ಞಾಸೆಗೆ ಒಳಮಾಡಿದೆ. ಒಂದು, ಕೃಷ್ಣನೆಂದರೆ ಕರಿಯ ಅಥವಾ ಕಪ್ಪು ಎಂಬ ದೇಹ ಅಥವಾ ಜನಾಂಗ ಸೂಚಕ ಬಣ್ಣವಾಗಿದ್ದಿರಬಹುದು. ಕಪ್ಪು ಜನರ ಜನಾಂಗದವನು ಅವನಾಗಿದ್ದು, ಅವನನ್ನು ತಮ್ಮವನನ್ನಾಗಿಸಿಕೊಂಡ ವೈದಿಕ ಸಂಪ್ರದಾಯಸ್ಥರು ಕಪ್ಪಿನ ಬಗೆಗಿನ ಮಡಿವಂತಿಕೆಯನ್ನು ತೀರಾ ಒಗೆಯಲಾರದವರಾಗಿ ಕಪ್ಪನ್ನು ಕಪ್ಪನ್ನದೇ ಮೇಘಶಾಮನೆಂದೂ, ನೀಲಮೇಘಶ್ಯಾಮನೆಂದೂ, ನಂತರ ನೀಲಮಾಧವನೆಂದೂ ಅವನನ್ನು ತಂದಿರಿಸಿದರು. ಅನಂತವಾಗಿರುವ ಆಗಸವು ನೀಲಿ, ಅನಂತವಾಗಿರುವಂತೆ ಕಾಣುವ ಸಾಗರವೂ ನೀಲಿಯಾಗಿರುವ ಕಾರಣದಿಂದ ಅನಂತ, ಅಖಂಡ ಮತ್ತು ಅಪರಿಮಿತ ಶಕ್ತಿಶಾಲಿಯಾದ ಆ ಭಗವಂತನನ್ನು ನೀಲಬಣ್ಣದಿಂದ ತೋರಿಸುವುದೆಂದು ವ್ಯಾಖ್ಯಾನಿಸಿದ್ದು ಅವರ ಜ್ಞಾನಮಟ್ಟ. ಆಕಾಶವಾಗಲಿ ಅಥವಾ ಸಾಗರವಾಗಲಿ ನಮ್ಮ ಬರಿಗಣ್ಣಿಗೆ ಕಾಣುವಂತೆ ನೀಲಿಯಲ್ಲ ಎಂದು ಈಗ ಎಲ್ಲರಿಗೂ ಗೊತ್ತಿರುವ ಸತ್ಯ.

ಇರಲಿ, ಇದೇ ಕೃಷ್ಣ ಎಂಬ ಹೆಸರನ್ನು ಉತ್ತರ ಭಾರತದ ರೀತಿಯಲ್ಲಿ ಬೆಂಬತ್ತಿದರೆ, ಕಿಶನ್, ಕಿಸನ್; ರೈತ ಎಂಬ ಕಿಸಾನ್ ಮೂಲದಿಂದ ದೊರಕುವ ಸಂಭವವಿದ್ದು, ಅವನು ಕೃಷಿಕನೂ, ವ್ಯಾಪಕವಾಗಿ ತಿಳಿದಿರುವಂತೆ ಗೌಳಿಗನೂ ಆಗಿರುತ್ತಾನೆ. ಅವನೂ ಇಲ್ಲಿನ ಮೂಲ ನಿವಾಸಿಗಳ ಗುಂಪಿಗೇ ಸೇರಿದವನಾಗಿದ್ದು ಪರಕೀಯರಾಗಿ ಅಥವಾ ಆಕ್ರಮಣಕಾರಿ ಅಧಿಕಾರಶಾಹಿಯ ಆರ್ಯರನ್ನು ವಿರೋಧಿಸುವ ಬಂಡಾಯದವನಾಗಿಯೇ ಕಾಣುತ್ತಾನೆ.

ಕೃಷ್ಣನ ಸಾಕು ತಂದೆ ನಂದಗೋಪನು ಇಂದ್ರನು ಒಡ್ಡುವ ನಿಬಂಧನೆಗಳಿಗೆ ಒಪ್ಪಿ ಅವನಿಗೆ ಯಜ್ಞವನ್ನು ಸಮರ್ಪಿಸುವ ಸಹಮತಿಯನ್ನು ವ್ಯಕ್ತಪಡಿಸಿರುತ್ತಾನೆ. ಆದರೆ, ಯುವಕನೂ, ಶಕ್ತಿಶಾಲಿ ಬಂಡಾಯ ಮನೋಪ್ರವೃತ್ತಿಯುಳ್ಳವನಾದ ಕೃಷ್ಣ ತನ್ನ ವಿರೋಧವನ್ನು ವ್ಯಕ್ತಪಡಿಸುತ್ತಾನೆ. ತಮ್ಮ ಪ್ರಧಾನ ಕಸುಬಾಗಿರುವ ಹೈನುಗಾರಿಕೆಗೆ ಸಹಕರಿಸುವ ಬೆಟ್ಟವು ಅವರ ಪಶುಗಳನ್ನು ಸಾಕುತ್ತಲಿದ್ದು, ಎಂದಿನಂತೆ ತಾವು ಅದಕ್ಕೇ ಪೂಜೆ ಸಲ್ಲಿಸುವುದೇ ಹೊರತು, ಇದ್ಯಾವುದೋ ಹೊಸ ಆರ್ಯರ ವೈದಿಕ ಸಂಸ್ಕೃತಿಯ ಯಜ್ಞವನ್ನು ಮಾಡಲಾಗದು ಎಂದು ತನ್ನ ನಿಲುವನ್ನು ಸ್ಪಷ್ಟಪಡಿಸುತ್ತಾನೆ. ಈ ಸಂದರ್ಭದಲ್ಲಿ ಇಂದ್ರನು ತನ್ನ ಆಜ್ಞೆಗೆ ವಿರೋಧ ವ್ಯಕ್ತಪಡಿಸಿದ ನಂದಗೋಕುಲವನ್ನು ಧೂಳೀಪಟ ಮಾಡಲು ತನ್ನ ಸೈನ್ಯದೊಡನೆ ಬರುತ್ತಾನೆ. ಆಗ ಕೃಷ್ಣನು ತನ್ನ ನಂದಗೋಕುಲದ ಹೆಂಗಸರನ್ನು, ಮಕ್ಕಳನ್ನು ಮತ್ತು ಹೋರಾಡಲು ಸಾಧ್ಯವಾಗದ ಇತರರನ್ನು ಗೋವರ್ಧನಗಿರಿಯ ಗವಿಗಳಲ್ಲಿ ಅವಿಸಿಡುತ್ತಾನೆ. ಆ ಗೋವರ್ಧನಗಿರಿಯು ಅವರಿಗೆ ತೀರಾ ಪರಿಚಿತವೂ ಮತ್ತು ಆತ್ಮೀಯವಾಗಿಯೂ ಇರುವಂತಹ ಆಶ್ರಯತಾಣ. ಇದರಲ್ಲಿ ಆಶ್ರಯ ಪಡೆಯಲು ಕೃಷ್ಣನ ಜನರಿಗೆ ಯಾವ ಸಮಸ್ಯೆಯೂ ಇಲ್ಲ. ಆದರೆ, ಅವರ ಹೊರತಾದ ಜನರಿಗೆ ಈ ಸ್ಥಳಗಳನ್ನು ಕಾಣುವುದಾದಲಿ, ತಲುಪುವುದಾಗಲಿ ಅಷ್ಟೇನೂ ಸುಲಭವಲ್ಲ, ಸಾಧ್ಯವಿಲ್ಲ.

ನಂತರ ಮುಸಲಧಾರೆಯ ಮಳೆಯಂತೆ ಒಂದೇ ಸಮನೆ ಇಂದ್ರನು ಮಾಡಿದ ಆಕ್ರಮಣಕ್ಕೆ ತನ್ನ ಹತ್ತು ಸಾವಿರ ಪುರುಷರೊಡನೆ ಕೃಷ್ಣನು ಉತ್ತರ ಕೊಟ್ಟನು. ಸುಮಾರು ದಿನಗಳು ನಡೆದ ಆ ಹೋರಾಟದಲ್ಲಿ ಕೃಷ್ಣನು ಅಂಶುಮತಿ (ಯಮುನಾ ನದಿ) ದಡದಲ್ಲಿ ಎದುರಿಸಿ ಜಯಗಳಿಸಿದನು. ನಂತರ ಸೋಲೊಪ್ಪಿದ ಇಂದ್ರನು ಹಿಂದಿರುಗಿದ ಮೇಲೆ ಗೋವರ್ಧನಗಿರಿಯ (ಅವರ ಗೋವುಗಳನ್ನು ತನ್ನ ಸಸ್ಯ ಸಂಪನ್ಮೂಲಗಳಿಂದ ವರ್ಧಿಸುತ್ತಿದ್ದ ಬೆಟ್ಟ) ಅಡಗುತಾಣಗಳಿಂದ ಅವನ ಜನರೂ ಹೊರಗೆ ಬಂದರು.

ಒಂದು ವಾಸದ ನೆಲೆಯ ಮೇಲೆ ಯುದ್ಧಾಕ್ರಮಣಗಳಾದ ಅಮಾಯಕ ಜನರನ್ನು, ಹೆಂಗಸರನ್ನು, ಮಕ್ಕಳನ್ನು, ವೃದ್ಧರನ್ನು ರಕ್ಷಿಸುವುದು ಅಷ್ಟೇನೂ ಸುಲಭದ ಕೆಲಸವಲ್ಲ. ಅದಕ್ಕೆಲ್ಲ ಎಷ್ಟೊಂದು ಪೂರ್ವ ತಯಾರಿಬೇಕು. ಎಷ್ಟೆಲ್ಲಾ ಸಂಪನ್ಮೂಲಗಳ ಬಳಕೆಯಾಗಬೇಕು. ಎಷ್ಟೆಲ್ಲಾ ಖರ್ಚುವೆಚ್ಚಗಳ ಬಹುದೊಡ್ಡ ಬಾಬ್ತು. ಆದರೆ, ಈ ಕೃಷ್ಣನೆಂಬೋ ಕರಿಗೊಲ್ಲನು ಅದೆಷ್ಟು ಸುಲಭವಾಗಿ ನಿರ್ವಹಿಸಿಬಿಟ್ಟ. ಕಿರುಬೆರಳಿನಿಂದ ಸಂಭಾಳಿಸಿದಷ್ಟು ಸುಸೂತ್ರವಾಗಿ ಗೋವರ್ಧನಗಿರಿಯ ಆಶ್ರಯತಾಣದಲ್ಲಿ ತನ್ನ ಜನರನ್ನು ಶತ್ರುಗಳ ದಾಳಿಯಿಂದ ರಕ್ಷಿಸಿದ. ಕಿರುಬೆರಳಿಂದ ಗೋವರ್ಧನಗಿರಿಯ ಪರ್ವತವನ್ನು ಎತ್ತಿದ ಕಥೆಯಿದು.


ರಾಮಾಯಣ ಮತ್ತು ಮಹಾಭಾರತ ಗ್ರಂಥಗಳು ಏಕೆ ಧರ್ಮಗ್ರಂಥಗಳಲ್ಲ?

ರಾಮಾಯಣ ಮತ್ತು ಮಹಾಭಾರತ ಗ್ರಂಥಗಳು ಎಷ್ಟರಮಟ್ಟಿಗೆ ಧರ್ಮಗ್ರಂಥವಾಗಿರಲಿಕ್ಕೆ ಯೋಗ್ಯವಾಗಿದೆ ಅಥವಾ ಇಲ್ಲ ಎಂಬುದು ಇಲ್ಲಿನ ಪ್ರಶ್ನೆಯಲ್ಲ. ಆದರೆ ಅವುಗಳ ಸ್ವರೂಪವನ್ನು ಗಮನಿಸೋಣ. ಅವುಗಳ ಕಥೆಗಳು ಮತ್ತು ಪಾತ್ರಗಳು ಜನರ ನಾಗರಿಕತೆಯ ಜೊತೆಜೊತೆಗೆ ಬೆಳೆಯುತ್ತಾ ವಿಶ್ಲೇಷಣೆಗಳಿಗೆ ಒಳಗಾಗುತ್ತಾ ಮತ್ತು ಸಂಸ್ಕೃತಿಯಿಂದ ಸಂಸ್ಕೃತಿಗೆ ವಿವಿಧ ನಿರೂಪಣೆ ಮತ್ತು ವ್ಯಾಖ್ಯಾನಗಳಿಗೆ ಒಳಗಾಗುತ್ತಾ ಬಂದು ಇಂದಿಗೂ ನಮ್ಮಿಂದ ಓದಿಸಿಕೊಳ್ಳಲ್ಪಡುತ್ತಿವೆ. ಹಾಗೆ ಅವು ಜೀವಂತವಾಗಿ ಇಂದಿಗೂ ಇರುವುದರಿಂದಲೇ ಅವನ್ನು ಮಹಾಕಾವ್ಯಗಳು ಎಂದು ಕರೆಯಲು ಸಾಧ್ಯವಾಗುತ್ತಿರುವುದು. ಆದರೆ, ಧರ್ಮಗ್ರಂಥವಾಗಿದ್ದ ಪಕ್ಷದಲ್ಲಿ ಬೈಬಲ್ಲಿನಂತೆ, ಕುರಾನಿನಂತೆ ಇದ್ದು ಬದಲಾವಣೆಗೆ ಒಳಗಾಗುತ್ತಿರಲಿಲ್ಲ. ಅವು ನಿರ್ದಿಷ್ಟ ಚೌಕಟ್ಟಿನಲ್ಲಿ ನೆಲೆಗೊಂಡಿದ್ದು ಹಾಗೆಯೇ ಉಳಿದಿರುತ್ತಿದ್ದವು. ಅವು ತನ್ನ ಜನರಿಗೆ ವೈಯಕ್ತಿಕ, ಧಾರ್ಮಿಕ ಮತ್ತು ಒಂದು ಹಂತಕ್ಕೆ ಸಾಮಾಜಿಕ ನಡಾವಳಿಗಳನ್ನೂ ರೂಪಿಸಿರುತ್ತಿದ್ದವು. ಡೂ'ಸ್ ಮತ್ತು ಡೋಂಟ್ಸ್‌ಗಳನ್ನು ನಿರ್ದೇಶಿಸುತ್ತಿದ್ದವು. ಆದರೆ, ರಾಮಾಯಣ ಮತ್ತು ಮಹಾಭಾರತಗಳು ಹಾಗೆ ಮಾಡದೇ ಉಳಿದಿವೆ ಅಥವಾ ನಮ್ಮ ಸಂಸ್ಕೃತಿ ಅವುಗಳನ್ನು ಹಾಗೆ ಉಳಿಸಿಕೊಂಡಿವೆ. ಇರಲಿ, ಈ ವಿಷಯದಲ್ಲಿ ಬಹುದೊಡ್ಡ ವಿಚಾರ-ವಿಸ್ತಾರ ಸಾಧ್ಯವಿದೆ.

ಹಾಗೆಯೇ ಇನ್ನುಳಿದ ಪ್ರಶ್ನೆಗಳಿಗೆ ನಾನು ಕೊಟ್ಟ ಉತ್ತರಗಳನ್ನು ಮುಂದಿನ ಕಂತುಗಳಲ್ಲಿ ನೋಡೋಣ. ■

'ಪುಟ್ಟ'ನನ್ನು 'ಕರಿಯ'ನಾಗಿಸಿದ ಕವಿತಾ

ನಾನು ಈ ಹಿಂದೆ ಕವಿತಾ ಲಂಕೇಶರನ್ನು ಕುರಿತು ಕೇಳಿದ್ದೆ. ಕೆಲವು ವರ್ಷಗಳ ಹಿಂದೆ ಅವರು ನೀನಾಸಮ್ ಕುರಿತು ಸಣ್ಣದೊಂದು ಸಾಕ್ಷ್ಯಚಿತ್ರ ತಯಾರು ಮಾಡಿದ್ದರು. ಅರ್ಥಪೂರ್ಣವಾಗಿ, ಚುಟುಕಾಗಿ ನೀನಾಸಮ್ ಪರಿಚಯ ಆ ಚಿತ್ರದಲ್ಲಿ ಕಾಣಿಸಿದ್ದಾರೆ. ಹಾಗಾಗಿ ಅವರ ಕುರಿತು ನನಗೆ ಹೆಮ್ಮೆ. ನನ್ನ ಪ್ರಕಾರ ಕನ್ನಡದ ಚಿತ್ರರಂಗದಲ್ಲಿ ವಿಭಿನ್ನ ನೆಲೆಗಳಲ್ಲಿ ಕೆಲಸ ಮಾಡುವ ಏಕೈಕ ಮಹಿಳಾ ನಿರ್ದೇಶಕಿ ಕವಿತಾ, ಪ್ರಕಾರ ವಿಷಯಕ್ಕೆ ಬದ್ಧವಾಗಿ, ತನ್ನ ಸಿನಿಮಾ ಇದೇ ಕುರಿತಾಗಿರಬೇಕೆಂಬ ಛಲಗಾತಿ ಅವರು. ಈಗ ನನ್ನ ಮಗನನ್ನು ಇಟ್ಟುಕೊಂಡು 'ಕರಿಯ ಕಣ್ ಬಿಟ್ಟ' ಎಂಬ ಚಿತ್ರವನ್ನು ಸಿದ್ಧಗೊಳಿಸಿದ್ದಾರೆ.



ಬಹುಶಃ 2013ರ ಜುಲೈ ಕೊನೇ ವಾರದಲ್ಲಿ ಇರಬೇಕು... ಕವಿತಾ ಅವರು ತಮ್ಮ ಹೊಸ ಸಿನಿಮಾಕ್ಕಾಗಿ ಹತ್ತು ವರ್ಷದ ಹುಡುಗನಿಗಾಗಿ ತಡಕಾಟ ಮಾಡುತ್ತಿದ್ದರು. ನನ್ನ ವಿದ್ಯಾರ್ಥಿ ಸತ್ಯ (ಶಂಕರ್) ನನಗೆ ಕರೆಮಾಡಿದ. 'ನಿಮ್ಮ ಮಗ ಪುಟ್ಟ(ಪ್ರದ್ಯುಮ್ನ)ನ ಫೋಟೋ ಕಳುಹಿಸಿ. ಕವಿತಾ ಲಂಕೇಶ್ ಹೊಸ ಸಿನಿಮಾ ಮಾಡ್ತಿದ್ದಾರೆ' ಎಂದ. ಕೆಲವು ನಾಟಕಗಳಲ್ಲಿ ಪಾತ್ರ ಮಾಡಿರುವ ನನ್ನ ಮಗ ಸಿನಿಮಾದಲ್ಲಿ ಹೇಗೆ ಕೆಲಸ ಮಾಡಬಲ್ಲ ಎಂಬ ಅನುಮಾನ-ಅಳುಕು ಸಹಜವಾಗೇ ನನ್ನಲ್ಲಿ ಇತ್ತು.

ಕವಿತಾರ ಕಚೇರಿಯಲ್ಲಿ ಭೇಟಿ ಮಾಡುವುದೆಂದು ತೀರ್ಮಾನವಾಯ್ತು. ಭೇಟಿಯಾದ ಒಂದು ತಾಸಿನಲ್ಲಿ ಕವಿತಾ ನನ್ನ ಮಗ ಪ್ರದ್ಯುಮ್ನನನ್ನು ಕರಿಯನ ಪಾತ್ರಕ್ಕೆ ಆಯ್ಕೆ ಮಾಡಿಯೇ ಬಿಟ್ಟರು. ಮಗ ಆಯ್ಕೆಯಾಗಿದ್ದರೂ ನನ್ನ ಅಳುಕು ನನ್ನಲ್ಲೇ ಉಳಿಯಿತು. ಯಾಕೆಂದರೆ ನಾನು ಕೇಳಿ ಬಲ್ಲೆ: ಸಿನಿಮಾದಲ್ಲಿ ಕೆಲಸ ಮಾಡಲು - ಅದರಲ್ಲೂ ಕಲಾತ್ಮಕ ಚಿತ್ರದಲ್ಲಿ -ಸಿನಿಮಾ ಭಾಷೆಯನ್ನು ಕಲಿಯಬೇಕು, ಅದಕ್ಕೆ ಅತಿ ನಟನೆ ಅಥವಾ ಮೆಲೊಡ್ರಾಮದಂಥ ಅಭಿನಯ ಮಾದರಿ ಒಗ್ಗುವುದಿಲ್ಲ, ಕಡಿಮೆ ಹೇಳಿ ಹೆಚ್ಚು ಧ್ವನಿಸುವ ಅಭಿನಯ ಕ್ರಮ, ಮಾತುಗಾರಿಕೆ, ಭಾವಾಭಿನಯ ಬೇಕು. ಇಂಥಾ ವಿಚಾರದಲ್ಲಿ ಕವಿತಾ ಅನುಭವಿಗಳು. ಅವರಿಗೆ ಚೆನ್ನಾಗಿ ಗೊತ್ತು ಯಾವ ಪಾತ್ರ ಯಾವ ದೃಶ್ಯಕ್ಕೆ ಹೇಗೆ-ಹೇಗೆಲ್ಲಾ ಕೆಲಸ ಮಾಡಬೇಕೆಂದು. ಬಹುಶಃ ಏನೊಂದನ್ನು ಅರಿಯದ ನನ್ನ ಮಗ ಪ್ರದ್ಯುಮ್ನ ಕರಿಯನ ಪಾತ್ರಕ್ಕೆ ಸರಿಹೊಂದುತ್ತಾನೆಂದೇ ಅವನನ್ನು ಆರಿಸಿಕೊಂಡಿರಬೇಕು ಎಂದುಕೊಂಡೆ. ಚಿತ್ರೀಕರಣದ ಸಮಯದಲ್ಲಿ ಪ್ರತಿ ದೃಶ್ಯವೂ ಅವನಿಗೊಂದು ಪಾಠಶಾಲೆಯಂತಿತ್ತು ಅಂತ ನನ್ನ ಮಡದಿ ರಾಜೇಶ್ವರಿ ಹೇಳುತ್ತಿದ್ದಳು.

ಚಿತ್ರದಲ್ಲಿ ಒಂದು ಹಳೇ ಬನಿಯನ್ ಮತ್ತು ಒಂದು ಚಡ್ಡಿ ಬಿಟ್ಟರೆ ಪ್ರದ್ಯುಮ್ನ ಒಂದೆರಡು ದೃಶ್ಯಗಳಲ್ಲಿ ಮಾತ್ರ ಗೌಡನ ಮಗನ ಹಳೇ ಅಂಗಿ ಹಾಕಿಕೊಳ್ಳುತ್ತಾನೆ. ಚಿತ್ರೀಕರಣ ಮುಗಿಯುವ ಹೊತ್ತಿಗೆ ಆ ಬನಿಯನ್‌ನ ಮಾರ್ಕ್ ಪ್ರದ್ಯುಮ್ನನ ಹೆಗಲ ಮೇಲೆ ಹಾಗೇ ಮೂಡಿತ್ತು. ಈಗಲೂ ಕವಿತಾ ಅವರೊಡನೆ ಪ್ರದ್ಯುಮ್ನ ಮಾತನಾಡಲು ಹೆದರುತ್ತಾನೆ. ಒಬ್ಬ ಗುರುವಿಗೆ ಆತನ ವಿದ್ಯಾರ್ಥಿ ಹೆದರುವಂತೆ. ನನಗೆ ಚೆನ್ನಾಗಿ ಗೊತ್ತು - ಆತನ ಹೆದರಿಕೆ ವಿನಯಪೂರಿತ ಹಿಂಜರಿಕೆ ಅಂತ. ಅವನ ಭಾವದಲ್ಲೇ ಗೊತ್ತಾಗುತ್ತದೆ ಅದು ಆತ ಅವರಿಗೆ ಕೊಡುವ ಮರ್ಯಾದೆ ಅಂತ.

ಕವಿತಾ ಅವರೊಡನೆ ನನ್ನ ಮಗ ಕೆಲಸ ಮಾಡಿರುವ ಬಗ್ಗೆ ನನಗೆ ಅಚಲವಾದ ಹೆಮ್ಮೆ. ಅದಕ್ಕೆ ಕಾರಣ ಕವಿತಾ ಅವರಿಗೆ ಕೆಲಸದ ಬಗ್ಗೆ ಇರುವ ಬದ್ಧತೆ. ಸಿನಿಮಾ ಚಿತ್ರೀಕರಣ ವೇಳೆ ಅವರಿಗೆ ತಿಳಿದೋ ತಿಳಿಯದೆಯೋ ಅನೇಕ ಏರುಪೇರಾದರೂ ನನ್ನ ಮಗನ ಭವಿಷ್ಯದ ದೃಷ್ಟಿಯಿಂದ ಅವೆಲ್ಲಾ ಗೌಣವಾದವು. ಪ್ರದ್ಯುಮ್ನನಿಂದ ಅಸಾಧ್ಯವಾದ ಕೆಲಸ ಮಾಡಿಸಿ 'ಕರಿಯ ಕಣ್ ಬಿಟ್ಟ' ಸಿನಿಮಾದ ಮೂಲಕ ಅಸಾಧಾರಣ ಕೃತಿಯೊಂದನ್ನು ಸಿನಿಮಾ ಜಗತ್ತಿಗೆ ಕವಿತಾ ನೀಡಿದ್ದಾರೆ.

ಬೆಂಗಳೂರಿನ ಸಿನಿಮಾ ರಾಜಕೀಯದ ಬಗ್ಗೆ - ಅದರಲ್ಲೂ ಮಹಿಳೆಯೊಬ್ಬರು ನಿರ್ದೇಶಕಿ ಮತ್ತು ನಿರ್ಮಾಪಕಿಯಾಗಿ ತನ್ನ ಜವಾಬ್ದಾರಿಯನ್ನು ನಿಭಾಯಿಸುವುದಕ್ಕೆ ಛಾತಿ ಬೇಕು. ಕವಿತಾ ಲಂಕೇಶರಿಗೆ ಅಂಥಾ ಎದೆಗಾರಿಕೆ ಅಪ್ಪನಿಂದಲೇ ಬಂದಿದೆ. ಕನ್ನಡ ಚಿತ್ರರಸಿಕರಿಗೆ ಅಷ್ಟೇ ಅಲ್ಲ; ಪ್ರಪಂಚದ ಚಿತ್ರವೀಕ್ಷಕರಿಗೆ ದೊಡ್ಡ ಕೃತಿಯೊಂದನ್ನು ಬಳುವಳಿಯಾಗಿ ನೀಡಿದ್ದಾರೆ.

ಮೊನ್ನೆ ಫೆಬ್ರವರಿ 14ರಂದು ಬೆಂಗಳೂರಿನ ರೇಣುಕಾಂಬ ಸ್ಟುಡಿಯೋದಲ್ಲಿ 'ಕರಿಯ ಕಣ್ ಬಿಟ್ಟ' ಚಿತ್ರದ ಪ್ರೀಮಿಯರ್ ಶೋ ಇತ್ತು, ಸಹಜವಾಗೇ ನಾನು, ರಾಜೇಶ್ವರಿ, ಮಗ ಪ್ರದ್ಯುಮ್ನ ಅದಮ್ಯ ಕುತೂಹಲದಿಂದ ನೋಡಲು ಹೋಗಿದ್ದೆವು. ನನ್ನ ಮಗ ದೊಡ್ಡ ಪಾತ್ರದಲ್ಲಿ ದೊಡ್ಡ ಪರದೆಯ ಮೇಲೆ ಬರುತ್ತಾನೆಂದರೆ ಯಾವ ಅಪ್ಪ-ಅಮ್ಮರಿಗೆ ಬೆರಗಾಗುವುದಿಲ್ಲ? ಚಿತ್ರದ ಒಂದೊಂದು ಕ್ಷಣವನ್ನೂ ಅನುಭವಿಸುತ್ತಾ ಚೇರ್‌ನ ತುದಿಯಲ್ಲಿ ಕುಳಿತು ನೋಡಿದೆ. ನಾನು ಸತ್ಯಜಿತ್ ರೇ, ಕುರೋಸಾವಾ, ನಮ್ಮ ಗಿರೀಶ್ ಕಾಸರವಳ್ಳಿಯವರು- ಹೀಗೆ ಪ್ರಪಂಚದ ಅನೇಕ ಶ್ರೇಷ್ಠ ಕಲಾತ್ಮಕ ಚಿತ್ರಗಳನ್ನು ನೋಡಿದ್ದೇನೆ. ಕವಿತಾ ಲಂಕೇಶ್ ಕೂಡಾ ಈ ಸಿನಿಮಾವನ್ನು ಶ್ರೇಷ್ಠ ಚಿತ್ರದ ಸಾಲಿಗೆ ತಂದು ನಿಲ್ಲಿಸಿದ್ದಾರೆ.

ಬಹುಶಃ ಕವಿತಾ ಲಂಕೇಶರಿಗೆ ಯಾರ ಅಂಕೆಯೂ ಇರಲಿಲ್ಲ, ತಾವೇ ನಿರ್ಮಾಪಕಿಯೂ, ನಿರ್ದೇಶಕಿಯೂ ಆದ ಕಾರಣವೇ ಅವರಿಗೆ ಕೆಲಸದ ಸ್ವತಂತ್ರವಿತ್ತು. ತಮ್ಮ ಸ್ವಂತಿಕೆಯ ಸೃಜನಶೀಲತೆಯನ್ನು ಕಾಣಿಸಲು ತಮಗೆ ತೋಚಿದ ಸತ್ಯವನ್ನು ಯಾವ ಎಗ್ಗಿಲ್ಲದೇ ಹೇಳಲು ಸಾಧ್ಯವಾಗಿತ್ತು. ಹಾಗಾಗಿಯೇ ಚಿತ್ರ ಅವರ ಹಿಂದಿನ ಸಿನಿಮಾಗಳಿಗಿಂತ ಅನುಭವದ ಪಕ್ವತೆಯಲ್ಲಿ ಅರಳಿದಂತಿದೆ.



ಪ್ರತಿ ದೃಶ್ಯದಲ್ಲೂ ಬೇಕೆಂದಲ್ಲಿ ಮಾತ್ರ ಸಂಗೀತ ಭಾವದ ಪ್ರತಿಫಲನವ ಕೇಳುತ್ತದೆ. ಎಷ್ಟೋ ದೃಶ್ಯ ಕ್ಷಣಗಳು ಮಾತಿಲ್ಲದೆ ಭಾವದ ಭಾಷೆಯಾ ದೃಶ್ಯಭಾಷೆಯಾಗಿ ಪ್ರೇಕ್ಷಕನನ್ನು ಮಾತನಾಡಿಸುತ್ತದೆ.

ಒಬ್ಬ ಹತ್ತು ವರ್ಷದ ಬಾಲಕನ ಜೀವನದಲ್ಲಿ 'ಜಾತಿ'ಯ ಪ್ರಶ್ನೆ ಹೇಗೆ ನುಸುಳುತ್ತದೆ? ತಾನು ಇತರರಂತೆ ಗುರುತಿಸಿಕೊಳ್ಳಲು ಈ ಜಾತಿ ಅನ್ ಮಾನದಂಡ-ಸಮಾಜದ ರೂಢಿಯಲ್ಲಿ ಹೇಗೆ ಒತ್ತಾಯವಾಗಿ ಬೆಸೆದುಕೊಳ್ಳುತ್ ಇಂಥಾ ಬೆಸುಗೆಯಿಂದ ತಾನು ಅಪರೋಕ್ಷವಾಗಿ ಬಂಧಿಸಲ್ಪಟ್ಟಿದ್ದೇನೆ ಎ ಗೊಂದಲ ಒಬ್ಬ ಮುಗ್ಧ ಬಾಲಕನಲ್ಲಿ (ಕರಿಯ) ಅರಳುತ್ತಾ ಹೋಗುತ್ 'ದಲಿತ' ಅಥವಾ 'ಬಡವ' ಅಂತ ಹೆಸರಿಟ್ಟ ಮನೆಯಲ್ಲಿ ಮಕ್ಕಳು ಹುಟ್ಟಿ ತಪ್ಪೋ, ಅಥವಾ ಸಮಾಜ ಅವರನ್ನು ನೋಡುವ ಬಗೆಯಲ್ಲಿ ತಪ್ಪಿದೆಯೋ ಬಡವ-ಶ್ರೀಮಂತ ಅಥವಾ ಕೆಳಜಾತಿ-ಮೇಲ್ಜಾತಿ ಅನ್ನೋ ವರ್ಗೀಕರ ಮಕ್ಕಳ ಭಾವನೆಯಲ್ಲಿ, ಅವರ ನಿತ್ಯದ ಕೆಲಸದಲ್ಲಿ, ಭಾಗ ವಹಿಸುವಿಕೆಯ ಸಮಾಜದ ಪಾಲುದಾರಿಕೆಯಲ್ಲಿ ಎಂಥಾ ಧರ್ಮಸಂಕಟವನ್ನು ನಿರ್ಮಾ ಮಾಡುತ್ತದೆ ಅನ್ನೋದನ್ನು ಸುಬ್ಬು ಹೊಲೆಯಾರ್ ಅವರ ಕಥೆಯಿಂದ ಸೂಕ್ಷ್ಮವ ಸೋಸಿ ತೆಗೆದ ಕವಿತಾ ಪ್ರತೀ ದೃಶ್ಯದಲ್ಲಿ ಮನ ಕಲಕುವಂತೆ, ನಾಗ ಪ್ರೇಕ್ಷಕ ಒಂದುಕ್ಷಣ ತನ್ನನ್ನೇ ಪ್ರಶ್ನಿಸಿಕೊಳ್ಳುವಂತೆ ನಿರೂಪಿಸುತ್ತಾ ಹೋಗಿದಾ

ಶಾಲೆಯ ಹಂತದಲ್ಲೇ ಇಂಥಾ ವರ್ಗೀಕರಣ ನಡೆಯುತ್ತ ಅದು ಬೇರನ್ನು ಸಮಾಜದ ಎಲ್ಲ ಕಡೆ ಹರಡುತ್ತದೆ. ತರಗತಿಯಲ್ಲೊ-ಶಾಲೆಯಲ ಶಿಕ್ಷಕರೂ ಒಂದರ್ಥದಲ್ಲಿ ಅಸಹಾಯಕರೇ. ಇದು ತಪ್ಪು ಎಂದು ಗೊತ್ತಿದ್ದ ಅನೇಕ ಸಂದರ್ಭದಲ್ಲಿ ವ್ಯವಸ್ಥೆಯ ಒತ್ತಡಕ್ಕೆ ತಲೆಬಾಗಿ ಶಿಕ್ಷಕರೂ ಕೂ 'ಜಾತಿ' ಅನ್ನೊ ವಿಷಯದ ಪ್ರಶ್ನೆ ಬಂದಾಗ ಜಾಣ್ಮೆಯಿಂದ ವರ್ತಿಸಿ ತಾ 'ರೂಢಿಗತ ಸಮಾಜದ' ಒಂದಂಶವಾಗಿ ತಲೆಮರೆಸಿಕೊಳ್ತಾರೆ. ಇಂ ಉದಾಹರಣೆಯನ್ನು ಸಿನಿಮಾದಲ್ಲಿ ಅರ್ಥಪೂರ್ಣವಾಗಿ ಬಂಧಿಸಲಾಗಿದೆ.

'ಕರಿಯ ಕಣ್ ಬಿಟ್ಟ' ಚಿತ್ರ ಇಂಡಿಯಾ ದೇಶದ ಒಂದು ಹಳ್ಳಿಯ ನಾಗರಿಕ ಸೂಕ್ಷ್ಮದರ್ಶಕದಲ್ಲಿ ನೋಡಿದಂತಿದೆ. ಹಾಗಾಗಿ ಈ ಕಾಲದ ಜಾಗ ಸಿನಿಮಾವಾಗಿ ನನಗೆ ಕಾಣುತ್ತಿದೆ. ಅಂಥಾ ಕೆಲಸವನ್ನು ಕವಿತಾ ಲಂಕೇ ಅವರು ಮಾತ್ರ ಮಾಡಲು ಸಾಧ್ಯ ಅಂದರೆ ಅದು ಉತ್ಪ್ರೇಕ್ಷೆಯಲ್ಲ.

ಯಾವ ಆಶೋತ್ತರವನ್ನಿಟ್ಟುಕೊಂಡು ನಾನು ರಂಗಭೂಮಿಯನ್ನು ನ ಕೆಲಸ ಮಾಡುತ್ತಿದ್ದೇನೋ ಅಂತಹುದೇ ಬದ್ಧತೆಯೊಡನೆ ಕೆಲಸ ಮಾಡುತ್ತಿರ ಕವಿತಾ ಇತ್ತೀಚೆಗೆ ನಾನು ಗಳಿಸಿದ ಉತ್ತಮ ಸ್ನೇಹಿತೆ-ಗೆಳತಿ.

- ಮಂಜು ಕೊಡಗು, ನೀನಾ

ಈ 'ರಾಮ' ಶತ ದಡ್ಡ ಕಣ್ರೀ?



ಚಿಕ್ಕಂದಿನಿಂದಲೇ ಚಡ್ಡಿ ತೊಟ್ಟು 'ನಮಸ್ತೇ ಸದಾ ವತ್ಸಲೇ' ಎನ್ನುತ್ತಲೇ ವತ್ಸಲಾ, ಸುಶೀಲಾ, ಊರ್ಮಿಳಾರ ಜಪ ಮಾಡುತ್ತಿದ್ದ 'ರಾಮ' ಇದೀಗ ಆತುರಗೆಟ್ಟ ಆಂಜನೇಯನಂತೆ ವರ್ತಿಸುತ್ತಿರುವುದು ತಮಾಷೆಯಾಗಿದೆ. ತನ್ನ ವಿರುದ್ಧ ಷಡ್ಯಂತ್ರ ನಡೆಸಲಾಗಿದೆ ಎಂದು ಈಗ ಒದರುತ್ತಿರುವ ಈ ಮಾಡರ್ನ್ ಬ್ರಹ್ಮಚಾರಿ ಪ್ರೇಯಸಿಯ ಧಮಕಿಗೆ ಹೆದರಿ ಆತ್ಮಹತ್ಯೆಯ ನಾಟಕವಾಡಿದ್ದು ಯಾಕೋ? ಹೇಳಿಕೇಳಿ ಈತ ಗೋಲ್ವಲ್ಕರ್ ಗುರೂಜಿಯ ಆರೆಸ್ಸೆಸ್ ಪ್ರಾಡಕ್ಟ್. ಹುಡುಗಿಯ ವಿಚಾರದಲ್ಲಿ ಪಳಗಿದ ಘಟಾನುಘಟಿಗಳೇ ತುಂಬಿರುವ ಪಕ್ಷದಲ್ಲಿದ್ದುಕೊಂಡೂ ಆಪತ್ಕಾಲದಲ್ಲಿ ಅವರ್‍ಯಾರದ್ದೂ ಸಲಹೆ ಕೇಳಲು ಹೋಗದೇ ಪಜೀತಿಗೆ ಸಿಕ್ಕಿಕೊಂಡು ಬಿಟ್ಟನಲ್ಲ, ಅದಕ್ಕೇ ಹೇಳೋದು ಗುರುಗಳ ಸಲಹೆ ಯಾವತ್ತಿಗೂ ಮುಖ್ಯ ಎಂದು. ಜಸ್ಟ್ ಒಂದು ಫೋನ್ ಕಾಲ್ ಸಾಕಿತ್ತು? ತನ್ನ ಮಗಳ ಪ್ರಾಯದ ಮಹಿಳೆಯನ್ನು ಮೈಂಟೇನ್ ಮಾಡುತ್ತಿರುವ ಯಡಿಯೂರಪ್ಪ ರಸಿಕ ರೇಣುಕಾಚಾರ್ಯ, ಉಡುಪಿಯ ಭಟ್ಟರು, ಹಾಲಪ್ಪ ಹಾಲೇಮಾರ್ ಕೊನೇ ಪಕ್ಷ ಪಕ್ಷದ ಪ್ರಖ್ಯಾತೀತ ನಾಯಕ ಮೋದಿಯನ್ನಾದರೂ ಕೇಳಿದ್ದಿದ್ದರೆ ಅನುಭವದ ಆಧಾರದಲ್ಲಿ ತಪ್ಪಿಸಿಕೊಳ್ಳಲು ಏನಾದರೂ ಒಳ್ಳೆ ಸಲಹೆಗಳನ್ನು ಕೊಡುತ್ತಿದ್ದರಪ್ಪ, ಅದೇನೇ ಇರಲಿ, ಇನ್ನು ಮುಂದಾದರೂ ಇಂತಹ ಅನಾಹುತ ನಡೆಯದಂತೆ ಮುಂಜಾಗ್ರತೆಗಾಗಿ ಬ್ರಹ್ಮಚಾರಿ 'ರಾಮ' ಸಹವರ್ತಿ ಮಹಿಳೆಯರಿಗೆಲ್ಲ ಬಿಜೆಪಿ ಪಕ್ಷ ಪುಕ್ಕಟೆಯಾಗಿ ಮೋದಿ ಬ್ರಾಂಡ್‌ನ ಪೆಪ್ಪರ್ ಸ್ಪ್ರೇ ಅನ್ನು ಹಂಚುವುದೊಳ್ಳೆಯದು.

-ಅವಿನಾಶ್ ಎಮ್.ಎಸ್. ನೆಲ್ಲಿಕಾರು



ಸುರೇಶ್ ಭಟ್ ಬಾಕ್ರಬೈಲ್ ಅವರು ಬರೆದಿರುವ, ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಪ್ರಕಟಿಸಿರುವ 'ಮಂಕು ಬೂ(ಮೋ)ದಿ' ಪುಸ್ತಕವನ್ನು ಇಂಗ್ಲಿಷ್, ಮರಾಠಿ, ಗುಜರಾತಿ, ಹಿಂದಿ ಮತ್ತು ಇತರೆ ಭಾಷೆಗಳಿಗೆ ಅನುವಾದಿಸಿ ಪ್ರಕಟಿಸಬೇಕಿದೆ. ಇದಕ್ಕಾಗಿ ನಾನು 25,000 ರೂಪಾಯಿಗಳನ್ನು ಕೊಡಲು ಸಿದ್ಧನಿದ್ದೇನೆ. ದೇವಾನು ದೇವನಿದ್ದರೆ ಆತ ಈ ದೇಶವನ್ನು ಈಗ ರಕ್ಷಿಸಬೇಕಿದೆ.

-ಜಾನ್, ಕಾರ್ಕಳ

ವೆಂಡಿ ಡೋನಿಗೆರ್ ಅವರ 'ದಿ ಹಿಂದೂಸ್ - ಆನ್ ಆಲ್ಟರ್ನೆಟಿವ್ ಹಿಸ್ಟರಿ' ಪುಸ್ತಕವು ಕನ್ನಡಕ್ಕೆ ಅನುವಾದಗೊಂಡು ಲಂಕೇಶ್ ಪ್ರಕಾಶನದ ಮೂಲಕ ಪ್ರಕಟಗೊಂಡರೆ ಚೆನ್ನಾಗಿರುತ್ತೆ. ಸಾಧ್ಯವಾ ನೋಡಿ.

-ರವಿಕುಮಾರ್, ಹಾಸನ

ಎಲ್ಲ ಸಾತ್ವಿಕ ಶಕ್ತಿಗಳು ಒಂದಾಗಿ ಭ್ರಷ್ಟ ವ್ಯವಸ್ಥೆಯ ವಿರುದ್ಧ ಚುನಾವಣಾ ಅಸ್ತ್ರವನ್ನು ಹಿಡಿದು ಹೋರಾಡಬೇಕಾದ ಕಾಲ ಕೂಡಿಬಂದಿದೆ. ಇಂದು ಮೇಧಾ ಪಾಟ್ಕರ್ ಅವರು ಚುನಾವಣೆಗೆ ನಿಲ್ಲಲು ಮುಂದೆ ಬಂದಿರುವಾಗ ಕರ್ನಾಟಕದಲ್ಲಿ ಸಜ್ಜನರೆನಿಸಿಕೊಂಡವರು, ಪ್ರಗತಿಪರರು, ಸಮಾಜದ ಪರವಾಗಿ ಹಲವಾರು ವರ್ಷಗಳಿಂದ ಹೋರಾಡುತ್ತಾ ಬಂದವರು, ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿದವರು ಇಂದು ಒಂದಾಗಬೇಕು. ದೇಶದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ವಿರುದ್ಧದ ರಾಜಕೀಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕಾಗಿ ಸವಿನಯ ಪ್ರಾರ್ಥನೆ.



ಯಾವುದೇ ರೀತಿಯ ತಾತ್ವಿಕ, ಸೈದ್ಧಾಂತಿಕ, ಮೌಲ್ಯಗಳಿಲ್ಲದ ಪಕ್ಷಗಳನ್ನು, ಭ್ರಷ್ಟಾಚಾರದ ವಿಷಯದಲ್ಲಿ ಪಕ್ಷ ಭೇದ ಮರೆತು ಒಂದಾದ ಭ್ರಷ್ಟ ಪಕ್ಷಗಳನ್ನು, ಭ್ರಷ್ಟ ನಾಯಕರನ್ನು ಸೋಲಿಸಲೇಬೇಕಾದ ಅವಶ್ಯಕತೆ ಎದುರಾಗಿದೆ. ನಮ್ಮ ಮುಂದಿನ ಪೀಳಿಗೆ ಭ್ರಷ್ಟರಹಿತ ಸಮಾಜದಲ್ಲಿ ಬದುಕುವಂತಾಗಬೇಕು, ನಮ್ಮ ದೇಶದ ಎಲ್ಲ ಮಕ್ಕಳಿಗೂ ಸಮಾನ ಅವಕಾಶಗಳು ಸಿಗುವಂತಾಗಬೇಕು, ಗಾಂಧೀಜಿಯವರ ಸ್ವರಾಜ್ಯದ ಕಲ್ಪನೆ ನನಸಾಗಬೇಕು.

ಈ ನಿಟ್ಟಿನಲ್ಲಿ ಈ ಬಹಿರಂಗ ಪತ್ರದ ಮೂಲಕ ನಾನು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಎಚ್. ಎಸ್. ದೊರೆಸ್ವಾಮಿ, ಅಕ್ರಮ ಗಣಿಗಾರಿಕೆ ವಿರುದ್ಧ ಹೋರಾಡುತ್ತಿರುವ ಎಸ್.ಆರ್. ಹಿರೇಮಠ, ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಕಡಿದಾಳು ಶಾಮಣ್ಣ, ದೇವನೂರು ಮಹಾದೇವ, ಮೈಸೂರಿನ ಡಾ.ಆರ್. ಬಾಲಸುಬ್ರಮಣಿಯನ್, ವಿಜ್ಞಾನಿ ಹಾಗೂ ನಗರ ತಜ್ಞ ಡಾ. ಅಶ್ವಿನ್ ಮಹೇಶ್, ಶ್ರೀಮತಿ ರುಥ್ ಮನೋರಮಾ, ಅರಕಲಗೂಡಿನ ಎ.ಟಿ.ರಾಮಸ್ವಾಮಿ, ಬೀದರಿನ ರಂಜಾನ್ ದರ್ಗಾ, ಮಾಜಿ ಸಚಿವರಾದ ಪಿಜಿಆಂತಯ್ಯ, ಎಸ್.ಕೆ.ಕಾಂತಾ ಇಂತಹ ಇನ್ನೂ ಹಲವಾರು ಮಹನೀಯರು ಪ್ಯಾಡ್ ಕಟ್ಟಿಕೊಂಡು ಮೈದಾನಕ್ಕಿಳಿಯಬೇಕಾದ ಅವಶ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಇವ ಚುನಾವಣಾ ಕಣಕ್ಕಿಳಿಯಬೇಕು ಎಂದು ನಾ ಕೇಳಿಕೊಳ್ಳುತ್ತೇನೆ. ಇಂದು ಸಾವಿರಾರು ಜನ ತಮ್ ವೈಯಕ್ತಿಕ ಕೆಲಸಗಳನ್ನು ಬದಿಗಿಟ್ಟು ರಾಷ್ಟ್ರ ಕಟ್ಟುವ ಕ ಒಗ್ಗೊಟ್ಟಿರುವ ಚಾರಿತ್ರಿಕ ಸಂದರ್ಭದಲ್ಲಿ ನಮಗೆಲ್ಲ ಯೋ ನಾಯಕತ್ವವನ್ನು ನೀಡಬೇಕಾಗಿ ಕೇಳಿಕೊಳ್ಳುತ್ತೇನೆ.

-ಆನಂದ ಯಾದವಾಡ, ಬೆಂಗಳೂ

ಸ್ಮಾರ್ಟ್ ಸಮರ್ಜಿತ್!

ಕಾವ್ಯ ಬರೆಯುವಷ್ಟು ದೊಡ್ಡವನಾಗಿಬಿಟ್ ಸಮರ್ಜಿತ್ ಲಂಕೇಶ್!

-ಗಿರೀಶ್ ನಿಕ್ಕಮ್, ದ

ಸಮರ್ಜಿತ್ ಬರೆದ ಕವನಗಳಲ್ಲಿ ತ ಇದೆ ಅನ್ನಿಸುತ್ತೆ, ಆತ ಮುಂದೆಯೂ ಚ ಬರೆಯಲಿ.

-ಅಭಿನಂದನ್ ಬ
ಬೆಂಗಳೂ

ಸಮರ್ಜಿತ್ ಕವನಗಳು ತುಂ ಚೆನ್ನಾಗಿವೆ. ಆತ ತನ್ನ ವಯಸ್ಸನ್ನೂ ಮೀ ಸೂಕ್ಷ್ಮತೆಯನ್ನು ತೋರಿಸಿದ್ದಾನೆ.

-ಅಲ್ಲಾದಿ ಜಯಶ್ರೀ, ಅವ

ಸಮರ್ಜಿತ್ ಕವನಗಳು ಲವ್ಲಿ ಆಗಿವೆ! ತು ಸ್ಮಾರ್ಟ್ ಮತ್ತು ದೊಡ್ಡ ಹುಡುಗ ಆಗಿಬಿಟ್ಟ ಸಮ


-ಗೌರಿ ಶಿವ್, ಬೆಂಗಳೂ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೆ ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹು

'ಗೊತ್ತಿಲ್ಲದಂತೆ ರಿದಂನ ಲಯ ಸಿಕ್ಕಿಬಿಡುತ್ತಿತ್ತು...'

ಸಂದರ್ಶನ

'ಓ ಗುಲಾಬಿಯೇ', 'ಓಂ ಗಣೇಶ್', 'ಜಾಕ್‌ಪಾಟ್', 'ತಿಪ್ಪಾರಳ್ಳಿ ತರ್ಲೆಗಳು', 'ಈಶ್ವರ್', 'ಮರ್ಯಾದೆ ರಾಮಣ್ಣ', 'ಸೆಕ್ಷನ್-300' ಸೇರಿದಂತೆ ಸುಮಾರು 40ಕ್ಕೂ ಹೆಚ್ಚು ಸಿನಿಮಾಗಳಿಗೆ ಸಂಗೀತ ನೀಡಿರುವ, ಈಗಷ್ಟೇ ವಿಶಿಷ್ಟ ಟೈಟಲ್ ಹೊಂದಿರುವ ಸಿನಿಮಾವೊಂದರಲ್ಲಿ ಹೀರೋ ಆಗಲು ಹೊರಟಿರುವ ಎಂ.ಎನ್.ಕೃಪಾಕರ್ ಇಲ್ಲಿ ಮಾತಾಡಿದ್ದಾರೆ.


ಎಂ.ಎನ್.ಕೃಪಾಕರ್

ನಿಮ್ಮ ಜನ್ಮಸ್ಥಳ, ಹೆತ್ತವರು, ಕುಟುಂಬದ ಹಿನ್ನೆಲೆ, ಬಾಲ್ಯದ ಬಗ್ಗೆ ಹೇಳ್ತೀರಾ?


ನಾನು ಹುಟ್ಟಿದ್ದು ತುಮಕೂರು. ತಂದೆ ನರಸಿಂಹರಾಜು ಬಿಜಿನೆಸ್ ಮ್ಯಾನ್ ಆಗಿದ್ರು. ತಾಯಿ ಇಂದಿರಮ್ಮ ಪ್ರಾಥಮಿಕ ಶಾಲಾ ಶಿಕ್ಷಕಿ. ಓದಿದ್ದು ಇಂಜಿನಿಯರಿಂಗ್, ದಾವಣಗೆರೆಯ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ. ನನಗೆ ಬಾಲ್ಯಕಾಲದಿಂದಲೂ ಸಂಗೀತದ ಕಡೆಗೆ ಆಸಕ್ತಿ ಇತ್ತು. ಅದರಲ್ಲೂ ರಿದಂ ಬಗ್ಗೆ ತೀವ್ರವಾದ ಆಸಕ್ತಿ. ಆ ವಯಸಿನಲ್ಲಿ ಕೈಗೆ ಏನು ಸಿಕ್ಕಿದರೂ ಅದರಿಂದ ಏನಾದರೊಂದು ಮ್ಯೂಸಿಕಲ್ ಸೌಂಡ್ ಹುಟ್ಟಿಸುವ ಕುತೂಹಲವಿತ್ತು. ಉದಾಹರಣೆಗೆ ಸ್ಪೂನ್‌ನಿಂದ ತಟ್ಟೆ ಸೇರಿದಂತೆ ಇತರ ಪಾತ್ರೆಗಳ ಮೇಲೆ ಬಡಿಯುತ್ತಾ ಏನಾದರೊಂದು ನಾದ ಹಡೆಯುತ್ತಿದ್ದೆ. ಹಾಗೇನೆ ಎಷ್ಟೋ ಸಲ ತಟ್ಟೆಗಳನ್ನು ಕಂಜಿರದ ಹಾಗೆ ಬಳಸಿಕೊಂಡು ಹಾಡ್ತಿದ್ದದ್ದೂ ಉಂಟು. ಹಾಗೇನೆ ನಾನು ಶಾಲೆಗೆ ಹೋಗುತ್ತಿದ್ದ ಕಾಲದಲ್ಲಿ ನಮ್ಮಪ್ಪ ಒಂದು ಅಲ್ಯೂಮಿನಿಯಂ ಬಾಕ್ಸ್ ತಂದು ಕೊಟ್ಟಿದ್ದರು. ಅದರಲ್ಲಿ ಬುಕ್ಸ್ ಇತ್ಯಾದಿಗಳನ್ನು ಜೋಡಿಸಿಕೊಂಡು ಆನಂತರ ಬ್ಯಾಗಿಗೆ ಇಟ್ಟುಕೊಂಡು ಶಾಲೆಗೇ ಹೋಗುತ್ತಿದ್ದೆ. ಆ ಅಲ್ಯೂಮಿನಿಯಂ ಬಾಕ್ಸ್ ಇತ್ತಲ್ಲಾ.. ಅದರ ಮೇಲೂ ಬೆರಳಿಂದ ನುಡಿಸುತ್ತ ಏನಾದರೊಂದು ನಾದ ಹುಟ್ಟಿಸುವ ಪ್ರಯತ್ನ ಮಾಡ್ತಿದ್ದೆ. ನಿಜ ಹೇಳಬೇಕೆಂದರೆ, ಇದೆಲ್ಲಾ ನನಗೆ ಗೊತ್ತಿಲ್ದೇ ಆದಂತಹ ಬೆಳವಣಿಗೆಗಳಷ್ಟೇ... ಇದೇ ಮುಂದಿನ ದಿನಗಳಲ್ಲಿ ನನಗೆ ಸಂಗೀತದ ಕಡೆ ಆಸಕ್ತಿ ಹೊರಳಲೂ ಕಾರಣವಾಗಿರಬಹುದೇನೋ ಗೊತ್ತಿಲ್ಲ.


ಶಾಲಾದಿನಗಳು ನಿಮ್ಮೊಳಗಿನ ಸಂಗೀತಗಾರನಿಗೆ ಏನಾದರೂ ವೇದಿಕೆ ಕಲ್ಪಿಸಿಕೊಟ್ಟ ಉದಾಹರಣೆಗಳು ಉಂಟಾ?

ವೇದಿಕೆ ಅನ್ನೋದಕಿಂತ ಮುಖ್ಯವಾಗಿ, ನಾನು ಶಾಲಾದಿನಗಳಲ್ಲಿ ಹಾಡ್ತಾ ಇದ್ದೆ. ಕನ್ನಡ, ಇಂಗ್ಲಿಷ್, ಹಿಂದಿ ಪಠ್ಯ ಪುಸ್ತಕಗಳಲ್ಲಿದ್ದ ಪದ್ಯಗಳಿಗೆ ನಾನೇ ಸ್ವರ ಸಂಯೋಜಿಸಿ ಹಾಡ್ತಾ ಇದ್ದೆ. ಆ ಮೂಲಕ ನನಗೆ ಗೊತ್ತಿಲ್ಲದಂತೆ ನನಗೆ ರಿದಂನ ಲಯ ಸಿಕ್ಕಿಬಿಡುತ್ತಿತ್ತು. ಅಲ್ಯೂಮಿನಿಯಂ ಬಾಕ್ಸ್ ಅಂತ ಹೇಳಿದ್ನಲ್ಲಾ... ಅದನ್ನ ಸಾಧ್ಯವಾದಷ್ಟು ಬಳಸಿಕೊಂಡು ಸ್ಕೂಲ್ ರೈಮ್ಸ್ ಹಾಡ್ತಾ ಇದ್ದೆ. ನಮ್ಮ ಶಾಲಾ ಗುರುಗಳು ಕೂಡ ನನಗೆ ಬೆನ್ನು ತಟ್ಟಿ ಪ್ರೋತ್ಸಾಹಿಸಿ ಧೈರ್ಯ ತುಂಬ್ತಾ ಇದ್ರು. ನನ್ನ ತಾಯಿಯಂತೂ ನನಗೆ ಬೆನ್ನೆಲುಬಾಗಿ ನಿಲ್ತಾ ಇದ್ರು. ನನ್ನ ತಾಯಿಯ ಪ್ರೋತ್ಸಾಹ ಇಲ್ದೇ ಹೋಗಿದ್ರೆ, ನಾನು ಏನು ಮಾಡಲೂ ಸಾಧ್ಯವಾಗ್ತಾ ಇರ್ಲಿಲ್ಲ. ಹಾಗೇನೆ ನನ್ನ ಭಾವ ನರಸಿಂಹಮೂರ್ತಿ ಅಂತ ಇದ್ರು. ಅವರೂ ಅಷ್ಟೇ. ನಾನು ಸಿನಿಮಾ ಫೀಲ್ಡ್ ನಲ್ಲಿ ಬೆಳೀಬೇಕು ಅಂತ ಆಸೆ ಪಡ್ತಿದ್ರು.

ನಿಮ್ಮ ಪ್ರಾಥಮಿಕ ಸಂಗೀತಾಭ್ಯಾಸ ಯಾವಾಗ ಶುರುವಾಯ್ತು? ಎಲ್ಲಿ ಶುರುವಾಯ್ತು?

ನಾನು ಮೊದಲಿಗೆ ಬೆಂಗಳೂರಿನ 'ವಿಜಯ ಫಿಲಂ ಇನ್‌ಸ್ಟಿಟ್ಯೂಟ್' ಸೇರಿಕೊಂಡೆ. ಅಲ್ಲಿ ಕುಮಾರ್ ಈಶ್ವರ್ ಎನ್ನುವವರ ಶಿಷ್ಯನಾಗಿ ಮೂರು ವರ್ಷ ಕರ್ನಾಟಕ ಶಾಸ್ತ್ರೀಯ ಸಂಗೀತ, ಪಾಶ್ಚಾತ್ಯ ಸಂಗೀತ, ಸುಗಮ ಸಂಗೀತ ಪ್ರಾಕ್ಟೀಸ್ ಮಾಡಿದೆ. ಆನಂತರ ಬೇರೆ ಬೇರೆ ತಹರದ ಸಂಗೀತವನ್ನು ಕೇಳ್ತಾ ಇದ್ದೆ. ನನ್ನಿಂದ ಎಷ್ಟು ಸಾಧ್ಯವೋ ಅಷ್ಟನ್ನು ಗ್ರಹಿಸ್ತಾ ಇದ್ದೆ. ಸಂಗೀತ ಲೋಕದ ಇತರ ಸ್ನೇಹಿತರೊಂದಿಗೆ ಆ ಕುರಿತು ಚರ್ಚಿಸ್ತಾ ಇದ್ದೆ. ಎಷ್ಟು ಸಾಧ್ಯವೋ ಅಷ್ಟು ಕಲಿಯಲು ಪ್ರಯತ್ನಿಸ್ತಾ ಇದ್ದೆ. ನನ್ನ ಕಲಿಕೆ ಶುರು ಆಗಿದ್ದು ಹಾಗೆ..





ನೀವು ಮೊದಲಿಗೆ ಆಲ್ಬಮ್ ಏನಾದ್ರೂ ಮಾಡಿದ್ರಾ? ಮಾಡಿದ್ರೆ ಅದರ ಬಗ್ಗೆ ಹೇಳಿ.

ಹೌದು ಮಾಡಿದ್ದೆ. ಹೇಗೆಂದರೆ, ನನಗೊಬ್ಬ ಆಪ್ತಮಿತ್ರ ಇದ್ದ. ಅವನ ಹೆಸರು ಸೋಮಶೇಖರ್ ಅಂತ. ಮೊದಲಿಂದಲೂ ನನಗೆ ಸಂಗೀತದ ಬಗ್ಗೆ ಇದ್ದ ಆಸಕ್ತಿ ಆತನಿಗೆ ಗೊತ್ತಿತ್ತು. ಅದಕ್ಕಾಗಿ ಒಂದು ದಿನ ಏನು ಮಾಡಿದ ಅಂದರೆ 'ಒಂದು ಆಲ್ಬಮ್ ಮಾಡೋಣ' ಅಂದ. ಅರೆ, ಇದೇನು ಹೀಗೆ ಹೇಳ್ತಾ ಇದ್ದಾನಲ್ಲಾ ಅಂತ ಯೋಚನೆ ಮಾಡಿದೆ. ಅದಕ್ಕೆ ಹಣ ಬೇಕಾಗುತ್ತೆ ಬೇರೆ ಬೇರೆ ತರಹದ ಸಪ್ರೋರ್ಟ್ ಬೇಕಾಗುತ್ತೆ. ಆಲ್ಬಮ್ ಮಾಡೋದು ಸುಲಭದ ಕೆಲಸಾನಾ? ಅಂತ ತಲೆ ಕೆಡಿಸಿಕೊಂಡೆ. ನನ್ನೆಲ್ಲ ದ್ವಂದ್ವಗಳಿಗೆ ಗೆಳೆಯ ಸೋಮಶೇಖರ್ ಇತಿಶ್ರೀ ಹಾಡಿ ತಾನೇ ಹಣ ಹಾಕುವುದಾಗಿ ಭರವಸೆ ಕೊಟ್ಟು ನನ್ನಲ್ಲಿ ಆತ್ಮವಿಶ್ವಾಸ ತುಂಬಿದ. ಆ ಕ್ಷಣ ನೆನೆದರೆ ನನಗೀಗಲೂ ಕಣ್ಣಲ್ಲಿ ನೀರು ಬರುತ್ತದೆ. ಆತ ಆ ದಿನ ಹಾಗೆ ಬೆನ್ನು ತಟ್ಟಿ ಆಲ್ಬಮ್ ಮಾಡಲು ಮುಂದೆ ಬಂದಿರದಿದ್ದರೆ ನಾನು ಸಂಗೀತ ನಿರ್ದೇಶಕ ಆಗ್ತಿದ್ನೋ, ಇಲ್ವೋ ಗೊತ್ತಿಲ್ಲ. ಅಂದಹಾಗೆ, 2001 ರಲ್ಲಿ ಮಾಡಿದ ಆ ಆಲ್ಬಮ್‌ನ ಹೆಸರು 'ಗೆಳತಿ' ಅಂತ. ನಾನೇ ಸಾಹಿತ್ಯ ಬರೆದು, ಸಂಗೀತ ಸಂಯೋಜನೆ ಮಾಡಿ, ಹಾಡಿದ್ದೇನೆ ಕೂಡ. ನಂದಿತಾ ಕೂಡ ಆ ಆಲ್ಬಮ್‌ಗೆ ಹಾಡಿದ್ದರು. ಆ ಆಲ್ಬಮ್‌ನ ಗಾಯನಕ್ಕಾಗಿ ನಂದಿತಾ ಅವರಿಗೆ 'ಆರ್ಯಭಟ' ಅಂತೇನೋ ಒಂದು ಪ್ರಶಸ್ತಿ ಕೂಡ ಬಂದಿದ್ದ ನೆನಪು. ಆ ಆಲ್ಬಮ್ ಅನ್ನು ಉಪೇಂದ್ರ ಅವರು ರಿಲೀಸ್ ಮಾಡಿದ್ದು ತುಮಕೂರಿನಲ್ಲಿ.

ಸಿನಿಮಾ ರಂಗಕ್ಕೆ ಎಂಟ್ರಿ ಸಿಕ್ಕಿದ್ದು ಹೇಗೆ?

ನನ್ನ 'ಗೆಳತಿ' ಆಲ್ಬಮ್‌ನ ಹಾಡುಗಳನ್ನು ಕೇಳಿ ನಿರ್ದೇಶಕ ಪತ್ತಿ ಗುರುಪ್ರಸಾದ್ ಅವರು ಸಿನಿಮಾಗೆ ಸಂಗೀತ ನೀಡಲು ಚಾನ್ಸ್ ಕೊಟ್ರು. ನಾನು ಸಂಗೀತ ನೀಡಿದ ಮೊದಲ ಸಿನಿಮಾದ ಹೆಸರು 'ಯಾರಿಗೆ ಬೇಡ ದುಡ್ಡು' ಅಂತ. ಆ ಸಿನಿಮಾದಲ್ಲಿ ದ್ವಾರಕೀಶ್, ಕೆ.ಶಿವರಾಂ, ಅಭಿಜಿತ್, ಟೆನ್ನಿಸ್ ಕೃಷ್ಣ ಸೇರಿದಂತೆ ಹಲವು ಮಂದಿ ನಟಿಸಿದ್ದರು. ಕಮರ್ ಹಾಗೂ ನರ್ಗೀಸ್ ಬಾಬು ಆ ಚಿತ್ರದ ನಿರ್ಮಾಪಕರು. ನರ್ಗೀಸ್ ಬಾಬು ಈಗ 'ಆರ್ಯ' ಅನ್ನುವ ಸಿನಿಮಾ ಮಾಡ್ತಿದಾರೆ.

ನೀವು ಈವರೆಗೆ ಸಂಗೀತ ನೀಡಿರುವ ಸಿನಿಮಾಗಳು ಯಾವ್ಯಾವು?

'ಓ ಗುಲಾಬಿಯೇ', 'ಓಂ ಗಣೇಶ್', 'ಜಾಕ್‌ಪಾಟ್', 'ತಿಪ್ಪಾರಳ್ಳಿ ತರ್ಲೆಗಳು', 'ಈಶ್ವರ್', 'ಸರ್ಕಲ್ ರೌಡಿ', 'ಟೆಂತ್ ಕ್ಲಾಸ್', 'ಸ್ವತಂತ್ರಪಾಳ್ಯ', 'ಕುಸುಮ', 'ಜಯಹೇ', 'ಸಿಡಿಲಮರಿ', 'ದಿಲ್', 'ಯಜ್ಞ', 'ಸಮರಸಿಂಹ ನಾಯಕ' ಸೇರಿದಂತೆ ಸುಮಾರು 40ಕ್ಕೂ ಹೆಚ್ಚು ಸಿನಿಮಾಗಳಿಗೆ ಸಂಗೀತ ಕೊಟ್ಟಿದ್ದೇನೆ. ಹಾಗೇನೆ, 'ಮರ್ಯಾದೆ ರಾಮಣ್ಣ', 'ಸೆಕ್ಷನ್-300' ಎನ್ನುವ ಸಿನಿಮಾಗಳಿಗೆ ಹಿನ್ನೆಲೆ ಸಂಗೀತ ಕೊಟ್ಟಿದ್ದೇನೆ.

ಒಂದು ಹಾಡು ಕಂಪೋಸ್ ಮಾಡಬೇಕಾದ ಸಂದರ್ಭದಲ್ಲಿ ಹೇಗೆ ಪ್ರಿಪೇರ್ ಆಗ್ತೀರಿ?

ಮೊದಲು ನಿರ್ದೇಶಕರು ಹೇಳುವ ಸನ್ನಿವೇಶವನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಅದಕ್ಕೆ ಬೇಕಾದ ರೀತಿಯಲ್ಲಿ ಪೂರಕವಾಗಿ ರಾಗ ಹಾಕ್ತೀನಿ. ನನ್ನದು ಸ್ಪಾಟ್ ಕಂಪೋಸ್. ನಿರ್ದೇಶಕರನ್ನು ಎದುರಿಗೆ ಕೂರಿಸಿಕೊಂಡೆ ಟ್ಯೂನ್ ಹಾಕೋಕೆ ಇಷ್ಟ ಪಡ್ತೀನಿ. ನಾನು ಬೇಸಿಕಲಿ ರಿದಂ ಪ್ಲೇಯರ್ ಆಗಿರೋದ್ರಿಂದ ನನ್ನ ಹಾಡುಗಳಲ್ಲಿ ರಿದಂಗೆ ಹೆಚ್ಚು ಒತ್ತು ಕೊಡ್ತೀನಿ. ರಿದಂನಲ್ಲೇ ಹಾಡನ್ನು ಗೆಲ್ಲಿಸಲು ಟ್ರೈ ಮಾಡ್ತೀನಿ. ನನ್ನ ಹಾಡುಗಳಿಗೆ ಹೆಚ್ಚಾಗಿ ಸುಕುಮಾರ್, ಗೋಪಾಲ್, ಆಂಡ್ರ್ಯೂ, ಸಚಿನ್, ರವಿರಾಜ್, ಕುಮಾರ್, ರವಿಕಿರಣ್ ರಿದಂ ಮಾಡಿಕೊಡುತ್ತಾರೆ. ನನಗೆ ಏನು ಬೇಕು ಅಂತ ಒಂದು ಸಲ ಹೇಳಿಬಿಟ್ರೆ ಸಾಕು ನನ್ನ ಟೇಸ್ಟ್‌ಗೆ ಮ್ಯಾಚ್ ಆಗುವ ರೀತಿಯಲ್ಲೇ ರಿದಂ ಮಾಡಿಕೊಡುತ್ತಾರೆ. ನನ್ನ ಹಾಡುಗಳ ಹಿಂದೆ ಇವರ ಶ್ರಮವೂ ಇದೆಯೆಂದು ಹೇಳಬಯಸುತ್ತೇನೆ.

ನಿಮ್ಮ ಮುಂದಿನ ಸಿನಿಮಾಗಳು ಯಾವುವು?

ಕನ್ನಡದಲ್ಲಿ 'ಸಿಡಿಲಮರಿ', 'ರಾಜ್ ಬಹದೂರ್' ಎನ್ನುವ ಸಿನಿಮಾಗಳು ಬಿಡುಗಡೆಯಾಗಬೇಕಿದೆ. ತೆಲುಗಿನಲ್ಲಿ 'ಚಿದುವುಕುನೆ ರೋಜುಲು' ಹಾಗೂ ಹೆಸರಿಡದ ಒಂದು ಸಿನಿಮಾ ಆಗ್ತಿದೆ. ಹಾಗೇನೆ ತಮಿಳಿನಲ್ಲಿ 'ಕಾಲೇಜ್' ಎನ್ನುವ ಸಿನಿಮಾ ಕೂಡ ಮಾಡ್ತಿದೀನಿ. ಆ ಚಿತ್ರದ ನಿರ್ದೇಶಕರು ನಮ್ಮ ಕೋಲಾರದವರೇ ಆದ ಮಂಜುನಾಥ್ ಅಂತ ಕನ್ನಡಿಗರು.

ನೀವು ಒಂದು ಸಿನಿಮಾದಲ್ಲಿ ಹೀರೋ ಕೂಡ ಆಗ್ತಾ ಇದ್ದೀರಿ ಅಂತ ಗೊತ್ತಾಯ್ತು. ಅದರ ಬಗ್ಗೆ ಹೇಳ್ಬಿಡಿ ಪ್ಲೀಸ್.

ಹ್ಹಹ್ಹಹ್ಹ!! ನನಗೆ ಮೊದಲಿಂದಲೂ ನಟನಾಗಬೇಕೆಂಬ ಆಸೆ ಇತ್ತು. ಸರಿಯಾದ ಅವಕಾಶಕ್ಕಾಗಿ ಕಾಯ್ತಾ ಇದ್ದೆ. ಆ ಅವಕಾಶ ಈಗ ಒದಗಿಬಂದಿದೆ ಅಷ್ಟೇ. ಚಿತ್ರದ ಹೆಸರೇ ವಿಶಿಷ್ಟವಾದದ್ದು. ಅದೇನೆಂದರೆ 'ಥಂಬ್ಸ್ ಅಪ್ ಸಿಂಬಲ್'. ಈ ಕುತೂಹಲಕಾರಿ ಟೈಟಲ್ ಅನ್ನು ಪೋಸ್ಟರ್‌ನಲ್ಲಿ ನೋಡಿದ ನಂತರ ಅದನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು ಅನ್ನೋದು ಪ್ರೇಕ್ಷಕರಿಗೆ ಬಿಟ್ಟಿದ್ದು. ಅಂದಹಾಗೆ ಈ ಸಿನಿಮಾದಲ್ಲಿ ಹೀರೋ ಆಗಿ ನಟಿಸುವ ಅವಕಾಶ ಬಂದಿದ್ದೆ ಆಕಸ್ಮಿಕ. ಹೀಗೇ ಒಂದಿನ, ನಿರ್ದೇಶಕ ಮಿಥುನ್ ಅವರು ತಮ್ಮ 'ಸುಮ್ನಿರ್ಲಾರ್ದೆ' ಎನ್ನುವ ಸಿನಿಮಾಗೆ ಮ್ಯೂಸಿಕ್ ಮಾಡ್ಕೊಡಿ ಅಂತ ಒಂದ್ಸಲ ನಮ್ಮ ಸ್ಟುಡಿಯೋಗೆ ಬಂದಿದ್ರು. ಆಗಿನ್ನೂ ಅವರ ಸಿನಿಮಾಗೆ ಹೀರೋ ಫೈನಲೈಸ್ ಆಗಿರಲಿಲ್ಲ. 'ನೀವೇ ಮಾಡ್ಬಿಡಿ ಸಾರ್' ಅಂತ ಹೇಳಿದ್ರು. ನಾನು ಮೊದಲಿಗೆ ತಮಾಷೆ ಮಾಡ್ತಿದಾರೆ ಅನ್ಕೊಂಡಿದ್ದೆ. ಯಾವಾಗ ಅವ್ರು ಸೀರಿಯಸ್ಸಾಗಿ ಹೇಳೋಕೆ ಶುರು ಮಾಡ್ಕೊಂಡ್ರೋ ನಾನೂ ಕೂಡ ಆ ವಿಷಯಾನ ಸೀರಿಯಸ್ಸಾಗಿ ತಗೊಂಡೆ. 'ಆಯ್ತು ಸಾರ್ ಮಾಡನಾ' ಅಂತಂದೆ. ಅವರೂ ಖುಷ್. ಮಾಡನಾ ಅಂತೇನೂ ಹೇಳ್ಬಿಟ್ಟೆ. ಆಮೇಲೆ ತಯಾರಿ ಬೇಕಲ್ವಾ.. ಅದಕ್ಕೋಸ್ಕರ ಡಾನ್ಸ್ ಸ್ಕೂಲ್ ಸೇರ್ಕೊಂಡೆ. ಜಿಮ್ ಮಾಡ್ದೆ. ಹಾಗೇನೆ ಫೈಟ್ ಕೂಡ ಕಲಿಬೇಕಾಗಿ ಬಂತು. ಈಗ ನಾನು ರೆಡಿ ಅಂತ ಆತ್ಮವಿಶ್ವಾಸದಿಂದ ಹೇಳಬಲ್ಲೆ. ಬರೋ ಮಾರ್ಚಿಗೆ ಶೂಟಿಂಗ್ ಶುರು.


ಸಂದರ್ಶನ: ಹೃದಯಶಿವ

ಚಿಂತನ್-ದರ್ಶನ್ ಕಾಂಬಿನೇಶನ್




ಚಿಂತನ್ ಗೊತ್ತಲ್ಲ... 'ಜೊತೆಜೊತೆಯಲಿ', 'ನವಗ್ರಹ', 'ಪಯಣ', 'ಸಾರಥಿ' ಸೇರಿದಂತೆ ಸುಮಾರು ಸಿನಿಮಾಗಳಿಗೆ ಡೈಲಾಗ್ಸ್ ಬರ್ದಿರೋರು. ಈ ಚಿಂತನ್ ಸುಮಾರು ದಿನಗಳಿಂದ ಒಂದೊಳ್ಳೆ ಸಿನಿಮಾ ಡೈರೆಕ್ಟ್ ಮಾಡ್ಬೇಕು ಅಂತ ಪ್ರಯತ್ನ ಪಡ್ತಾ ಇದ್ರು. ಅದ್ಯಾಕೋ ಯಾವ್ದೂ ಸರಿಯಾಗಿ ಸೆಟ್ ಆಗ್ತಿರ್ಲಿಲ್ಲ. ಇವರು ಡೈರೆಕ್ಟರ್ ಆಗೋಕೆ ಆಗ್ಲಿಲ್ಲ. ಹಿಂದೆ ಒಂದ್ಸಲ ವಿಜಿ ಹಾಕೊಂಡು ಒಂದು ಸಿನಿಮಾ ಮಾಡ್ತಿದಾರೆ. ಅರ್ಧಕ್ಕರ್ಧ ಸಿನಿಮಾ ದುಬೈಲಿ ಶೂಟಿಂಗ್ ಆಗುತ್ತೆ ಅಂತ ಒಂದು ಸುದ್ದಿ ಬಂದಿತ್ತು. ಆದ್ರೆ ಅದ್ಯಾಕೋ ಆ ಸುದ್ದಿ ಆಮೇಲೆ ಸುದ್ದಿ ಮಾಡ್ಲಿಲ್ಲ. ಆಮೇಲೆ ಒಂದಷ್ಟು ದಿನ ಆದ್ಮೇಲೆ, ಇದೇ ಚಿಂತನ್, ಗಣೇಶ್ ಹಾಕೊಂಡು ಸಿನಿಮಾ ಮಾಡ್ಬೇಕು ಅಂತ ಓಡಾಡ್ತಿದಾರೆ ಅಂತಾನೂ ಒಂದು ಸುದ್ದಿ ಬಂತು. ಯಾಕೋ ಅದೂ ವರ್ಕ್‌ಔಟ್ ಆಗ್ಲಿಲ್ಲ.

ಈಗ ಇನ್ನೊಂದು ಸುದ್ದಿ ಬಂದಿದೆ. ಅದೇನಪಾ ಅಂದ್ರೆ, ಈ ಚಿಂತನ್ ಈಗ ದರ್ಶನ್ ಹಾಕೊಂಡು ಒಂದು ಸಿನಿಮಾ ಮಾಡ್ತಾರಂತೆ. 'ಸಾರಥಿ' ಪಿಕ್ಚರ್‌ಗೆ ಕಾಸು ಹಾಕಿ ಲಾಭ ಮಾಡಿಕೊಂಡಿರೋ ಸತ್ಯಪ್ರಕಾಶ್ ಎನ್ನುವವರು ಚಿಂತನ್-ದರ್ಶನ್ ಕಾಂಬಿನೇಶನ್ ಇರೋ ಈ ಹೆಸರು ಕಟ್ಟದಿರೋ ಸಿನಿಮಾಗೆ ಬಂಡವಾಳದಾರರಂತೆ. ಈ ಸಲನಾದ್ರೂ ಚಿಂತನ್ ಸಿನಿಮಾ ಮಾಡೋ ಥರ ಆಗ್ಲಿ, ನಾವೆಲ್ಲ ನೋಡೋ ಥರ ಆಗ್ಲಿ ಅಲ್ವೇ?

'ಬೆನ್' ವರ್ಸಸ್ ಭರಣ

ಯಾವಾಗ ಪೂಜಾ ಗಾಂಧಿ ಅವರ ಬೆನ್ನು 'ದಂಡುಪಾಳ್ಯ'ದ ಬೊಕ್ಕಸ ತುಂಬಿಸಿತೋ ಆಗ ಸಿನಿಪ್ರಿಯರ ಕಣ್ಣಿಗೆ ಮತ್ತೊಂದು ಬೆನ್ನು ಅಲ್ಲಲ್ಲಿ ಕಾಣಿಸತೊಡಗಿತು. ಅದು 'ಮೈಸೂರು ಮಲ್ಲಿಗೆ' ಚಿತ್ರದ ರೂಪಾ ನಟರಾಜ್ ಎಂಬಾಕೆಯ ಬೆನ್ನು. ಈ ಬೆನ್ನು ಪಡ್ಡೆಗಳ ಮನಸುಗಳಲ್ಲಿ ಕುಚುಕುಚು ಉಂಟುಮಾಡಿತ್ತು. ಆದರೆ ಟಿ.ಎಸ್.ನಾಗಾಭರಣರಿಗೆ ಈ ಬೆನ್ನು ಇಷ್ಟವಾಗಲಿಲ್ಲ. "ಇದೇನ್ರಿ ಹಿಂಗಂತೀರಿ, ರೂಪಾ ನಟರಾಜ್ ಬೆನ್ನಿಗೂ, ಭರಣರಿಗೂ ಏನ್ರೀ ಸಂಬಂಧ?" ಅಂತ ಒಮ್ಮೆಲೇ ಮೇಲೆರಗದಿರಿ ಪ್ಲೀಸ್. ಸಂಬಂಧ ಐತೆ. ಅದೇನಪ್ಪಾ ಅಂದ್ರೆ ಈ ರೂಪಾ ನಟರಾಜ್ ಎನ್ನುವ 'ಬೆನ್'ಬಾಲೆ ನಟಿಸುತ್ತಿರುವ



ಚಿತ್ರದ ಹೆಸರು 'ಮೈಸೂರು ಮಲ್ಲಿಗೆ' ಅಂತ. ಇದೇ 'ಮೈಸೂರು ಮಲ್ಲಿಗೆ' ಹೆಸರಿಟ್ಟುಕೊಂಡು ದಶಕಗಳ ಹಿಂದೆ ನಾಗಾಭರಣರೂ ಒಂದು ಸಿನಿಮಾ ಮಾಡಿ ಗೆದ್ದಿದ್ದು ನಿಮಗೂ ಗೊತ್ತು. ಇಲ್ಲಿ ತಕರಾರು ಏನಪಾ ಅಂದ್ರೆ, ಭರಣರ 'ಮೈಸೂರು ಮಲ್ಲಿಗೆ'ಯಲ್ಲಿ ಅವತ್ತಿನ ಯಂಗ್ ಅಂಡ್ ಎನರ್ಜಿಟಿಕ್ ಸುಧಾ ರಾಣಿ ಹಣೆಯಲ್ಲಿ ಕುಂಕುಮ, ಮುಡಿಗೆ ಮಲ್ಲಿಗೆ ಧರಿಸಿಕೊಂಡು ತಲೆ ಮೇಲೆ ಸೆರಗು ಹೊದ್ದುಕೊಂಡು ಪಕ್ಕಾ ಟ್ರಡೀಷನಲ್ ಗರ್ಲ್ ಥರ ಕಾಣ್ತಿದ್ರು. ಈಗ ನೋಡಿದ್ರೆ ಈ ರೂಪಾ ನಟರಾಜ್ ಹಿಂಗೆ ಬೆನ್ ತೋರಿಸ್ಕೊಂಡು ಕಣ್ಣಲ್ಲೇ ಗುನ್ನಾ ಹೊಡೆಯೋ ಥರ ಲುಕ್ ಕೊಡ್ತಿದಾರೆ.

ಈ ಕಾರಣದಿಂದಲೇ ಭರಣರು "ಬೆನ್ ತಂಡದ ಮಂದಿ ಆದಷ್ಟು ಬೇಗ 'ಮೈಸೂರು ಮಲ್ಲಿಗೆ' ಟೈಟಲ್ ಬದಲಾಯಿಸಿಕೊಂಡು, ತಾವು ನಿರ್ದೇಶಿಸಿದ್ದ 'ಮೈಸೂರು ಮಲ್ಲಿಗೆ'ಯ ಪರಿಮಳಕ್ಕೆ ಬೆನ್ ಬೆವರು ಮಿಕ್ಸ್ ಆಗದಂತೆ ನೋಡಿಕೊಂಡು ಉಪಕರಿಸಲಿ" ಅಂತ ಕೋರ್ಟ್ ಮುಂದೆ ನಿಂತು ರಿಕ್ವೆಸ್ಟ್ ಮಾಡಿಕೊಂಡಿದ್ದರು. ಕೋರ್ಟ್ ಮಂದಿಗೂ ಭರಣರ ಮಾತು ಸರಿ ಕಾಣ್ತಿದೆ ಅಂತನ್ನಿಸಿ "ಹಲೋ ಮಿಸ್ಟರ್ ಬೆನ್ 'ಮೈಸೂರು ಮಲ್ಲಿಗೆ' ನಿರ್ದೇಶಕರೇ, ತಾವು ದಯಮಾಡಿ ನಿಮ್ಮ ಟೈಟಲ್ ಬದಲಾಯಿಸಿಕೊಳ್ಳಿ' ಅಂತ ಆರ್ಡರ್ ಮಾಡಿದ್ದಾರೆ. ಆ ಮಾತು ಕೇಳಿದ ಬೆನ್ ನಿರ್ದೇಶಕರು 'ಥೂತ್ತೇರಿ' ಅಂತ ಟೆನ್ಷನ್ ಮಾಡ್ಕೊಂಡು ಕಡೆಗೆ ತಮ್ಮ ಚಿತ್ರಕ್ಕೆ 'ಮಿಸ್ ಮಲ್ಲಿಗೆ' ಅಂತ ಮರುನಾಮಕರಣ ಮಾಡಿಕೊಂಡಿದ್ದಾರೆ. ಇದರಿಂದ ಖುಷಿಗೊಂಡ ಭರಣರು ಇತ್ತ ನಿಟ್ಟುಸಿರು ಬಿಟ್ಟು ನೀರು ಕುಡಿದರೆ, ಅತ್ತ ಇದೇ 'ಮೈಸೂರು ಮಲ್ಲಿಗೆ' ಟೈಟಲ್ ಅಡಿಯಲ್ಲಿ ಇಂಟರ್‌ನೆಟ್‌ನಲ್ಲಿ ಸೂಪರ್‌ಹಿಟ್ ಆಗಿದ್ದ, ಈಗಲೂ ಭರ್ಜರಿ ಪ್ರದರ್ಶನ ಕಾಣುತ್ತಿರುವ ನೀಲಿ ಚಿತ್ರ 'ಮೈಸೂರು ಮಲ್ಲಿಗೆ' ನೋಡಿ ಪುಳಕಿತರಾಗಿದ್ದ ಮಂದಿ 'ಬೆನ್' ಚಿತ್ರದ ಬಗ್ಗೆ ಸ್ವಲ್ಪ ಅನುಮಾನದಿಂದ ನೋಡಲಾರಂಭಿಸಿದ್ದಾರಂತೆ...





ಶ್ರೀನಾಥ್-ವೆಂಕಿ ಹೊಸ ಇನ್ನಿಂಗ್ಸ್



ಒಂದು ಕಾಲದಲ್ಲಿ ಜಗತ್ತಿನ ಅಷ್ಟೂ ಬ್ಯಾಟ್ಸ್‌ಮ್ಯಾನ್‌ಗಳನ್ನು ಬಲಿ ಹಾಕುತ್ತಿದ್ದ ಜಾವಗಲ್ ಶ್ರೀನಾಥ್ ಹಾಗೂ ವೆಂಕಟೇಶ್ ಪ್ರಸಾದ್ ಎಂಬ ಕನ್ನಡಿಗ ಬೌಲರ್‌ಗಳನ್ನು ಕ್ರಿಕೆಟ್ ಪ್ರೀತಿಸುವ ಯಾರೊಬ್ಬರೂ ಮರೆಯಲು ಸಾಧ್ಯವಿಲ್ಲ. ಈ ಮಹಾನ್ ಕ್ರಿಕೆಟಿಗರ ತಾಕತ್ತು ಎಂಥಾದ್ದು ಎಂದರೆ, ಒಂದು ತುದಿಯಿಂದ ವೇಗಿ ಶ್ರೀನಾಥ್ ಬೆಂಕಿಯ ಚೆಂಡುಗಳನ್ನು ಎಸೆದು ಬ್ಯಾಟ್ಸ್‌ಮ್ಯಾನ್‌ಗಳನ್ನು ಹೆದರಿಸುತ್ತಿದ್ದರೆ, ಇನ್ನೊಂದು ತುದಿ... ಮಧ್ಯಮವೇಗಿ ವೆಂಕಿ ತಮ್ಮ ಸ್ವಿಂಗ್, ಬೌನ್ಸರ್, ಯಾರ್ಕರ್‌ಗಳ ಮೂಲಕ ಕ್ರೀಡಾಂಗ... ಅಲ್ಲೋಲಕಲ್ಲೋಲ ಎಬ್ಬಿಸಿಬಿಡುತ್ತಿದ್ದರು. ಇಂತಹ ಅಪೂರ್ವ ಜೋಡಿ ಮತ್ತೆ ಒಂದೆಡೆ ಸೇರ... "ಇದೇನು ಮತ್ತೆ ಭಾರತ ತಂಡಕ್ಕೆ ಆಡ್ತಿದಾರಾ?" ಅನ್ನುವ ಅಗದ ಹೋಗದ ಪ್ರಶ್ನೆಯನ್ನು ... ಕೇಳಬೇಡಿ. ಈ ತಾರೆಯರಿಬ್ಬರು ಒಂದಾಗುತ್ತಿರುವುದು ಒಂದು ಸಿನಿಮಾದಲ್ಲಿ, ಆ ಸಿನಿಮಾ... ಪ್ರಮುಖ ಪಾತ್ರಗಳಲ್ಲಿ ಅಭಿನಯಿಸುವಲ್ಲಿ.

ಹೌದು, 'ಸಚಿನ್-ತೆಂಡೂಲ್ಕರ್ ಅಲ್ಲ' ಎನ್ನುವ ಒಂದು ಸಿನಿಮಾ ಇತ್ತೀಚೆಗಷ್ಟೇ ಸೆಟ್ಟೇ... ಮೋಹನ್ ಎನ್ನುವವರು ಸ್ಕ್ರಿಪ್ಟ್ ಬರೆದು, ನಿರ್ದೇಶನದ ಜವಾಬ್ದಾರಿ ಹೊತ್ತಿರುವ ಈ ಚಿ... ಶ್ರೀನಾಥ್-ವೆಂಕಿ ಜೊತೆಗೆ ಸುಹಾಸಿನಿ ಕೂಡ ಒಂದು ಪ್ರಮುಖ ಪಾತ್ರ ಮಾಡ್ತಿದ್ದಾರೆ. ರಾ... ರಾಮನಾಥ್ ಸಂಗೀತ ಈ ಚಿತ್ರಕ್ಕಿರುತ್ತದೆ. ಅಂದಹಾಗೆ, ಕ್ರೀಡಾಂಗಣದಲ್ಲಿ ಮಿಂಚಿ ಎಲ್ಲ... ರಂಜಿಸುತ್ತಿದ್ದ ಈ ಇಬ್ಬರು ಕನ್ನಡದ ಕಲಿಗಳು ಈಗಾಗಲೇ ಅನೇಕ ಜಾಹಿರಾತುಗಳಲ್ಲಿ ನಟಿ... ಕ್ಯಾಮರಾ ಫೇಸ್ ಮಾಡಿದ್ದು, ಈಗ ಬೆಳ್ಳಿಪರದೆಯ ಮೇಲೆ ಹೇಗೆ ತಮ್ಮ ಕರಾಮತ್ತು ತೋರಿಸ... ಅನ್ನುವುದನ್ನು ಕಾದುನೋಡಬೇಕಿದೆ.

'ಕ್ರೇಜಿ ಸ್ಟಾರ್'ಗೆ ಕತ್ತರಿ



ರವಿಚಂದ್ರನ್ ಏನೇ ಮಾಡಿದ್ರೂ ಅಲ್ಲೊಂದು ಕ್ರೇಜ್ ಇರ್ತದೆ. ಅದಕ್ಕೇನೆ ಅವರನ್ನ ಕ್ರೇಜಿಸ್ಟಾರ್ ಅಂತ ಕರಿಯೋದು. ಇಂಥ ಕ್ರೇಜಿ ಸ್ಟಾರ್ ಅಪರೂಪಕ್ಕೊಮ್ಮೆ ಡೈರೆಕ್ಷನ್ ಮಾಡಿದ್ರೂ ಪಿಕ್ಚರ್‌ನಲ್ಲಿ ಏನಾರಾ ಇರ್ತದೆ ಅನ್ನೋದು ಆಡಿಯನ್ಸ್ ಕಾನ್ಫಿಡೆನ್ಸು. ರವಿ ಕೂಡ ಆ ಕಾನ್ಫಿಡೆನ್ಸ್‌ಗೆ ಮೋಸ ಮಾಡದ ಹಾಗೆ ಕನ್ನಡಿಗರಿಗೆ ಸಿನಿಮಾಗಳನ್ನ ಕೊಟ್ಟಿದ್ದೂ ಉಂಟು. ಆ ಸಿನಿಮಾಗಳ ಪೈಕಿ ಸುಮಾರು ಸಿನಿಮಾಗಳು ಮಾಸ್ಟರ್ ಪೀಸ್‌ಗಳೇ... ಇಂಥ ರವಿಚಂದ್ರನ್ ಇತ್ತೀಚೆಗಷ್ಟೇ ನಿರ್ದೇಶಿಸಿದ್ದ 'ಕ್ರೇಜಿ ಸ್ಟಾರ್' ಅನ್ನೋ ಸಿನಿಮಾ ಹೋದ ವಾರ ರಿಲೀಸ್ ಆಯ್ತು. ಸಿನಿಮಾ ನೋಡಿದ ರವಿ ಫ್ಯಾನ್ಸ್ ಫುಲ್ ... ಆಗ್ಲಿಲ್ಲ ಅಂತಲೇ ಹೇಳಬೇಕಾಗುತ್ತದೆ.

ಹಳೇ ರವಿಚಂದ್ರನ್ ಕಳೆದುಹೋಗಿದ್ದಾರೆ, ಈಗಿರೋದು ನಕಲು ರವಿಚಂದ್ರನ್ ಅಂತ ಒಳಗೆ... ಫೀಲಿಂಗ್ ಮಾಡ್ಕೊಂಡು "ನಮ್ ಗುರು ಮಾಡೋ ಹೊಸಾ ಸಿನಿಮಾಗಳನ್ನ ಟಾಕೀಸಿಗೆ ... ನೋಡೋದರ ಬದಲು, ಅವಾಗವಾಗ ಟೀವೀಲಿ ಬರೋ 'ಪ್ರೇಮಲೋಕ' ಸಿನಿಮಾನೇ ನೋಡ್... ವಾಸಿ" ಅಂತ ಟಾಕೀಸಿಂದ ಎದ್ದು ಸೀದಾ ಮನೆ ಕಡೆ ಹೋಗಿದ್ದರಲ್ಲಿ ಆಶ್ಚರ್ಯ ಪಡೋದೇನೂ ಇಲ್ಲ... ಅಭಿಮಾನಿಗಳ ಈ ಬೇಜಾರು ರವಿಗೂ ತಟ್ಟಿದಂತಿದೆ. ಅದಕ್ಕೆ ರವಿ ಏನ್ ಮಾಡಿದ್ದಾರೆ ಅಂದ್ರೆ, ತಾವೇ ಇನ್ನೊ... ಸಿನಿಮಾ ನೋಡ್ಬಿಟ್ಟು ಎಲ್ಲೆಲ್ಲಿ ಏನೇನ್ ರಿಪೇರಿ ಮಾಡಿದ್ರೆ ಅಭಿಮಾನಿಗಳಿಗೆ ಹ್ಯಾಪಿ ಅಂತ ಥಿಂಕ್ ಮಾಡಿದ್ದಾರೆ... ಹೊಳೆದಿದ್ದೇ ಫಸ್ಟ್ ಹಾಫ್ ಲ್ಯಾಗ್ ಅನ್ನೋ ಭಯಾನಕ ಸತ್ಯ. ಈ ಸತ್ಯ ಯಾವಾಗ ರವಿ ಬ್ರೇನ್‌ನಲ್ಲಿ ಕೆಲಸ ಮಾಡಿ... ತಕ್ಷಣ ಕತ್ತರಿ ತಗಂಡು ಫಸ್ಟ್ ಹಾಫ್‌ನಲ್ಲಿ ಬರೋಬ್ಬರಿ 16 ನಿಮಿಷ ಎತ್ತಿಬಿಟ್ಟಿದ್ದಾರೆ. 140 ನಿಮಿಷ ಇದ್ದ 'ಕ್ರೇಜಿ... ಈಗ ತುಂಡಾಗಿದೆ. ಇನ್ನಾದರೂ ಫ್ಯಾನ್ಸ್ ಚಿತ್ರಮಂದಿರಕ್ಕೆ ಬಂದು ತಮ್ಮ ಗುರು 'ಕ್ರೇಜಿಸ್ಟಾರ್' ಗೆಲ್ಲುವಂತೆ ನೋಡಿಕೆ... ಅನ್ನೋದು ನಮ್ಮ ಇನ್‌ಟೆನ್ಷನಪ್ಪಾ...

ಶಿವಣ್ಣ ಶ್ರೀಕಂಠನಾದಾಗ

ಒಬ್ಬ ಹೊಸಹುಡುಗ ಆಕ್ಷನ್ ಕಟ್ ಹೇಳಿ ಗಾಂಧಿನಗರದಲ್ಲಿ ಒಂದು ಸುಮಾರಾಗಿರೋ ... ಕೊಟ್ಟರೂ ಸಾಕು, ಇರೋ ಬರೋ ಹೀರೋಗಳೆಲ್ಲ ಡೇಟ್ಸ್ ಕೊಡ್ತಾರೆ, ಇರೋ ಬರೋ ಪ್ರೊಡ್ಯೂಸರ್... ಕರೆದು ಸಿನಿಮಾ ಕೊಡ್ತಾರೆ ಅನ್ನೋ ಮಾತು ಮತ್ತೊಮ್ಮೆ ಸಾಬೀತಾಗುತ್ತಿದೆ.

ಹೆಂಗಪಾ ಅಂದ್ರೆ, ಮಂಜು ಸ್ವರಾಜ್ ಅನ್ನೋ ಹುಡುಗ ಯಾವ ದೆಸೆಯಲ್ಲಿ ಗ... ಹಾಕೊಂಡು 'ಶ್ರಾವಣಿ ಸುಬ್ರಹ್ಮಣ್ಯ' ಅನ್ನುವ ಆವರೇಜ್ ಸಿನಿಮಾ ಕೊಟ್ರೋ ಅವರ ದೆ... ಬದಲಾಯ್ತು ಅಂತ ಕಾಣ್ತದೆ. ಅದಕ್ಕೇನೆ ಶಿವರಾಜಕುಮಾರ್ ಇವರ ಕಥೆ ಕೇಳಿ ... ಆಗಿದ್ದಾರೆ. ಡೇಟ್ಸ್ ಹೊಂದಿಸಿ ಕೊಟ್ಟು, ಇವರ ನಿರ್ದೇಶನದಡಿ ಕೆಲಸ ಮಾಡಲು ಗ್ರೀನ್ ... ನೀಡಿದ್ದಾರೆ. ಈ ಬೆಳವಣಿಗೆಗೆ ಪುಷ್ಟಿ ನೀಡೋ ಥರ ಚಂಗಾರಿ ಮಹಾದೇವ್ ದುಡ್ಡು ಹಾ... ಮುಂದೆ ಬಂದಿದ್ದಾರೆ. ಎಲ್ಲ ಅನ್ಕೊಂಡಂಗೆ ಆದ್ರೆ 'ಬಾದಷಾ' ಹಾಗೂ 'ಮನಮೊ... ಚಿತ್ರಗಳು ಮುಗೀತ್ತಿದ್ದಂಗೆ ಶಿವಣ್ಣನ ಡೇಟ್ಸ್ ಸಿಕ್ತದೆ. ಮಂಜು ಸ್ವರಾಜ್-ಶಿವಣ್ಣ ಕಾಂಬಿನೇಶ... 'ಶ್ರೀಕಂಠ' ಸ್ಟಾರ್ಟ್ ಆಗ್ತದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com